
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 10

ಮಾರ್ಚ್ 9, 2003 ಬೆಲೆ ರೂ. 3.00




ಕೇಂದ್ರ ಬಜೆಟ್ : ಜನರ ಮೇಲೆ ಧಾಳಿ

ಹುಮ್ನಾಬಾದ್ ಚುನಾವಣೆ : ಬಿಜೆಪಿಗೆ ಮುಖಭಂಗ



ಸಂಘ ಪರಿವಾರ : ದ್ವೇಷ ಪ್ರಸಾರಕ್ಕೆ ಅಮೆರಿಕನ್ ಡಾಲರ್


ರಾಜ್ಯಪಾಲರ ನಿರ್ಲಕ್ಷ್ಯತನದ ಭಾಷಣ



ವಿದ್ಯುತ್ ನೀತಿ ವಿರೋಧಿ ಪ್ರತಿಭಟನೆ ಮಹಾಪೂರ

ಹೋರಾಟಕ್ಕೆ ಅನಾರೋಗ್ಯದ ಅಡ್ಡಿಯೇನು?

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

18



ಕಳೆದ ಸಂಚಿಕೆಯಲ್ಲಿ ಭಾರತೀಯ ಸೈನಿಕರು ತಮ್ಮ ಜನತೆಯ ಮೇಲೆ ಗೋಲಿಬಾರ್ ಮಾಡಲು ನಿರಾಕರಣೆ, ಬ್ರಿಟಿಷರಿಂದ ಭಾರತೀಯ ಮಹಿಳೆಯರ ಮೇಲೆ ಅತ್ಯಾಚಾರ, ಜನನಾಂಗಗಳಿಗೆ ಬಂದೂಕಿನ ಬಯೋನೆಟ್‌ಗಳಿಂದ ಚುಚ್ಚಿದ್ದು, ಈ ಕೃತ್ಯಗಳನ್ನು ವಿವರಿಸುವ ಕರಪತ್ರಗಳನ್ನು ರೇಷನ್ ಟಿನ್‌ಗಳಲ್ಲಿಟ್ಟು ಪ್ರಚಾರ ಮಾಡಿದ್ದು, ಬ್ರಿಟಿಷ್ ಬೇಹುಗಾರಿಕೆ ಪಡೆಗಳಿಗೆ ವಿಮಾನಗಳ ಮೂಲಕ ಆಹಾರ ಸರಬರಾಜು ಮಾಡಿದ ಜಯಪಾಲ್ ಸಿಂಗ್, ಇಂತಹ ಸಂದರ್ಭದಲ್ಲಿ ಸಂಘಟನೆಯ ಜತೆ ದಿನನಿತ್ಯದ ಸಂಪರ್ಕಕ್ಕಾಗಿ ಹಾತೊರೆಯುತ್ತಿದ್ದ ಮೇಜರ್ ಮತ್ತು ಚಕ್ಲಲಾದಲ್ಲಿದ್ದ ಸಂಕ್ಷಿಪ್ತ ಸಂದರ್ಭದಲ್ಲಿ ಸಂಘಟನೆ ಬಲಪಡಿಸಲು ಶ್ರಮಿಸಿದ್ದು... ಈ ಬಗ್ಗೆ ಓದಿರುವಿರಿ.ಮುಂದೆ...

ಕನ್ನಡಕ್ಕೆ: ವಿಶ್ವ ಕುಂದಾಪುರ

ಈ ಸಂಘಟನೆಗಳು ವಿರುದ್ಧ ದಿಕ್ಕಿನಲ್ಲಿ ಹಾಗೂ ಆಕಾಲಿಕವಾಗಿ ಕಾರ್ಯಾಚರಣೆಗೆ ಇಳಿಯಬಹುದೇನೋ ಎಂಬ ಭೀತಿ ನನ್ನನ್ನು ಕಾಡಿತು. ಹೀಗಾಗಿ ಈ ಸಂಘಟನೆಗಳ ಜತೆ ಸಂಪರ್ಕ ಇಟ್ಟುಕೊಳ್ಳುವುದು ಹಾಗೂ ಅವುಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದು ಅಗತ್ಯವಾಗಿತ್ತು. ಡಬ್ಲ್ಯುಎಸಿ(ಐ)ನಲ್ಲಿನ ನಮ್ಮ ಸಂಘಟನೆಗೆ ಸಮನ್ವಯಗೊಳಿಸುವಂತೆ ನಾನು ಕೇಳಿದೆ. ಸಾಧ್ಯವಾದರೆ, ನಮ್ಮ ದೃಷ್ಟಿಕೋನ ಹಾಗೂ ಸಂಘಟನೆಯ ಸ್ವರೂಪವನ್ನು ಪಾಲಿಸುವುದಾದರೆ ಒಂದೇ ಘಟಕವನ್ನು ರೂಪಿಸುವಂತೆಯೂ ಕೇಳಿದೆ. ಆದರೆ ಅದು ಆಗಲಿಲ್ಲ. ಸೈನಿಕರು ಹಾಗೂ ಎನ್‌ಸಿಓಗಳು ಭಾರತೀಯ ಅಧಿಕಾರಿಗಳ ಬಗ್ಗೆ ಅನುಮಾನ ಹೊಂದಿದ್ದರು. "ಇವರು ತಮ್ಮ ಗುರಿಸಾಧನೆಗಾಗಿ ನಮ್ಮನ್ನು ಬಳಸಿಕೊಳ್ಳುತ್ತಾರೆ" ಎಂಬುದು ಅವರ ಭಯವಾಗಿತ್ತು.

ನಗರದಲ್ಲಿ ಕಾಬೂಲಿಯ ಅಂಗಡಿ ಸಮೀಪ ಒಂದು ಚಿಕ್ಕ ಹೋಟೆಲಿನಲ್ಲಿ ಒಬ್ಬ ಎನ್‌ಸಿಓ ಜತೆ ನಾನು ಚರ್ಚಿಸಿದೆ. ನಮ್ಮ ಗುರಿಗಳು ಒಂದೇ ರೀತಿಯದ್ದು ಎಂದು ನಾನು ವಾದಿಸಿದೆ. ಗುರಿಸಾಧನೆಗಾಗಿ ಒಬ್ಬ ಇನ್ನೊಬ್ಬರನ್ನು ಬಳಸಿಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ದಮನಕೋರರು ಹಾಗೂ ದಮನಿತರ ನಡುವೆ ಏಕತೆ ಅಸಾಧ್ಯ" ಎಂದು ಆ ಎನ್‌ಸಿಓ ಹೇಳಿದ. "ಇಡೀ ದೇಶ, ಇಡೀ ಜನತೆಯ ಏಕತೆ ಸಾಧ್ಯ" ಎಂಬುದು ನನ್ನ ಪ್ರತಿಪಾದನೆಯಾಗಿತ್ತು. ಸಂಘಟನೆಗಳ ವಿಲೀನದ ವಿಚಾರದಲ್ಲಿ ಯಾವುದೇ ಒಪ್ಪಂದಕ್ಕೆ ಬರಲು ವಿಫಲರಾದ್ದರಿಂದ, ಕನಿಷ್ಠ ಪಕ್ಷ ಯೋಜನೆಗಳು ಪರಸ್ಪರರಿಗೆ ಸಕಾಲದಲ್ಲಿ ತಿಳಿಸಲು ಸಮ್ಮತಿಸಿದೆವು.

ಇಂಡಿಯನ್ ಅದರ್ ರ್‍ಯಾಂಗ್ (Indian other ranks) ಗಳು ಇಷ್ಟೊಂದು ಆತ್ಮವಿಶ್ವಾಸದಿಂದ ಇದ್ದದ್ದನ್ನು ಹಾಗೂ ಇಷ್ಟೊಂದು ರಾಷ್ಟ್ರಪ್ರೇಮಿಗಳಾಗಿದ್ದನ್ನು ನಾನು ಕಂಡಿದ್ದು ಇದೇ ಮೊದಲು. ನಾನು ಆತನ ಹಿರಿಯ ಅಧಿಕಾರಿಯಾಗಿದ್ದೆ. ಹಾಗಿದ್ದಾಗ್ಯೂ ಪ್ರಮುಖ ಕಾರ್ಯಕರ್ತನಾಗಿದ್ದ ಈ ಎನ್‌ಸಿಓ ಆರಂಭದಿಂದಲೇ ಒಂದು ವಿಷಯವನ್ನು ಸ್ಪಷ್ಟಪಡಿಸಿದ. ತಾನು ಸ್ವಯಂ ಆಗಿ ಒಪ್ಪದ ಹೊರತು ತನ್ನನ್ನು ಯಾವುದೇ ನಿರ್ಧಾರಕ್ಕೆ ಬರುವಂತೆ ಪುಸಲಾಯಿಸಲಾಗದು ಎಂಬ ದೃಢ ಮನೋಭಾವ ಆತನದ್ದಾಗಿತ್ತು. ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಸಾಧ್ಯವಾದಷ್ಟೂ ವಿಶಾಲ ರಾಷ್ಟ್ರೀಯ ಏಕತೆಯನ್ನು ರೂಪಿಸುವ ವಿಷಯವಾಗಿ ನಾನು ಎರಡು ಗಂಟೆಗೂ ಹೆಚ್ಚು ಕಾಲ ವಾದಿಸಿದೆ.

ಪರ್ಯಾಯ ಚಿಂತನೆ

"ಆದರೆ ಇದೊಂದೇ ವಿಚಾರದಲ್ಲಿ ಬ್ರಿಟೀಷರನ್ನು ಅಧಿಕಾರದಿಂದ ಕಿತ್ತೊಗೆಯುವ ಪ್ರಕ್ರಿಯೆಯಲ್ಲಿ ಅವರ ಸ್ಥಾನದಲ್ಲಿ ದೇಶವನ್ನು ಯಾರು ಆಳುತ್ತಾರೆ ಎಂಬುದನ್ನು ನಾವು ಗಮನಿಸಬೇಕು. ಪಾಳೇಗಾರರು ಅಧಿಕಾರ ಪಡೆದರೆ ಖಂಡಿತಕ್ಕೂ ನಮ್ಮ ದೇಶದ ಜನರ ಪರಿಸ್ಥಿತಿಯಲ್ಲಿ ಬದಲಾವಣೆ ಆಗುವುದಿಲ್ಲ. ನಮ್ಮ ದೇಶದಲ್ಲಿ ಇಂಥ. ಸಂದರ್ಭ ಉದ್ಭವವಾಗುವ ಪರಿಸ್ಥಿತಿಯಿದೆ ಎಂದೇ ನನ್ನ ಭಾವನೆ. ಕಾಂಗ್ರೆಸ್ ನಾಯಕತ್ವದ ವರ್ಗ ಸ್ವರೂಪವನ್ನು ನೋಡಿ. ಸಶಸ್ತ್ರ ಪಡೆಗಳಿಗೆ ಸಂಬಂಧಿಸಿದಂತೆ ಅವರ ಬೇಡಿಕೆ ಗಮನಿಸಿದರೆ, ಕಮಿಷನ್ಡ್ ಹಂತದಲ್ಲಿ ಹೆಚ್ಚು ಭಾರತೀಯರು ಇರಬೇಕೆಂಬುದು ಅವರ ಒತ್ತಾಯವಾಗಿದೆ.

ಭಾರತೀಯಕರಣದ ಈ ಬೇಡಿಕೆಯ ಹಿಂದೆ ನಿಜವಾಗಿ ಅಡಗಿರುವುದು ಸುಶಿಕ್ಷಿತ ಭಾರತೀಯರ ಹಿತಾಸಕ್ತಿಯ ರಕ್ಷಣೆ. ಸಾಮಾನ್ಯ ಸೈನಿಕರ ವಿಷಯವಾಗಿ ಅವರು ಏನನ್ನು ಮಾತನಾಡುವುದಿಲ್ಲ. ಹಾಗಂತ, ನಾವು ನಾವೇ ಕಚ್ಚಾಡಬೇಕು ಎನ್ನುವುದು ಇದರ ಅರ್ಥವಲ್ಲ. ಪ್ರಶ್ನೆಯಿರುವುದು ನಾಯಕತ್ವದ ವಿಚಾರವಾಗಿ. ನಾವು ಚಳುವಳಿಯ ನಾಯಕರಾಗಬೇಕೆಂದು ಬಯಸುತ್ತೇವೆ. ಚಳುವಳಿಗಾಗಿ ಗರಿಷ್ಠ ತ್ಯಾಗವನ್ನು ನಾವು ಮಾಡದ ಹೊರತು, ಅದಕ್ಕಾಗಿ ನಾವು ಸಕ್ರೀಯವಾಗಿ ಕೆಲಸ ಮಾಡದ ಹೊರತು; ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಒಂದು ಸರಿಯಾದ ದೃಷ್ಟಿಕೋನವನ್ನು ಮಂಡಿಸದ ಹೊರತು ನಾಯಕತ್ವ ನಮಗೆ ದಕ್ಕುವುದಿಲ್ಲ ಎನ್ನುವುದು ನಮಗೆ ಗೊತ್ತು. ನಾವು ಪ್ರತ್ಯೇಕ ಸಂಘಟನೆಗಳಾಗಿದ್ದುಕೊಂಡೇ ಸಹಕರಿಸೋಣ"- ಈ ರೀತಿಯಾಗಿ ಎನ್.ಸಿ.ಓ ತನ್ನ ಅಭಿಪ್ರಾಯ ಮಂಡಿಸಿದನು.

"ಸೈನಿಕರು ತಮ್ಮ ಯುನಿಟ್‌ಗಳ ಮಟ್ಟದಲ್ಲಿ ಅವರಾಗಿಯೇ ಸಂಘಟಿತರಾಗುತ್ತಿದ್ದಾರೆ. ನೌಕಾಪಡೆ ಹಾಗೂ ವಾಯುಪಡೆಗಳಲ್ಲಿ ಅತೃಪ್ತಿ ವ್ಯಾಪಕವಾಗಿದೆ. ಅವರ ಪರಿಸ್ಥಿತಿ ಭೂಸೇನೆಯವರಿಗಿಂತ ಕೆಟ್ಟದೆ ಎಂಬ ಕಾರಣಕ್ಕೆ ಅಲ್ಲ. ಈ ಪಡೆಗಳಲ್ಲಿನ ಇಂಡಿಯನ್ ಅದರ್ ರ್‍ಯಾಂಕ್‌ಗಳು ಶಿಕ್ಷಿತರು ಹಾಗೂ ಹೆಚ್ಚು ಜ್ಞಾನವುಳ್ಳವರು, ಶಾಲೆ ಕಾಲೇಜುಗಳಿಂದ ಆಗ ತಾನೆ ಹೊರಬಂದ ತೀಕ್ಷ್ಣ ಸ್ವಭಾವದ ತರುಣರು. ಆದರೆ ಭಾರತೀಯ ಅಧಿಕಾರಿಗಳ ಅದೇ ಅವಿಶ್ವಾಸ ಅಲ್ಲಿ ಕೂಡ ಇತ್ತು. ಅದಕ್ಕಾಗಿ ನೀವು ಅವರನ್ನು ದೂರುವಂತಿಲ್ಲ" - ಎಂದನು ಆ ಎಸ್‌ಸಿಓ.

ನಾನು ಆತನನ್ನು ದೂಷಿಸಲಿಲ್ಲ. ನಮ್ಮಲ್ಲಿ ಪ್ರಯತ್ನ ಪರಿಣಾಮ ಶೂನ್ಯವಾದುದೇನೋ ಎಂಬ ಭೀತಿಯುಷ್ಟೇ ನನ್ನನ್ನು ಕಾಡುತ್ತಿತ್ತು. ಏನಿದ್ದರೂ ಪರಸ್ಪರ ಸಮನ್ವಯಕ್ಕೆ ನಾವು ಒಪ್ಪಿದೆವು.

ಕ್ಯಾಪ್ಟನ್ ಆಗಿ ಬರ್ಮಾದಲ್ಲಿ

1943 ಆಗಸ್ಟ್‌ನಲ್ಲಿ ನಾನು ಮತ್ತೆ ಬರ್ಮಾಗೆ ಮರಳಿದೆ. ವೈಮಾನಿಕ ಸರಬರಾಜು ದಳದಲ್ಲಿ ಕಾರ್ಯನಿರ್ವಹಿಸಲು. ಈಗ ನಾನು ಕ್ಯಾಪ್ಟನ್ ಆಗಿದ್ದೆ.

1943 ರ ಕೊನೆಯ ಭಾಗದಲ್ಲಿ ಹಾಗೂ 1944 ರ ಮೊದಲ ಅರ್ಧ ಭಾಗದಲ್ಲಿ ನನ್ನ ದಳದ ಕಾರ್ಯಾಚರಣೆಯಲ್ಲಿ ನಾನು ವ್ಯಸ್ತನಾಗಿದ್ದೆ. ಅಸ್ಸಾಮ್ ಮತ್ತು ಬರ್ಮಾ ಗಡಿಯುತ್ತ ಸಾಗುವ ಈ ಕೆಲಸ ತೀರಾ ಪ್ರಯಾಸದ್ದಾಗಿತ್ತು. ಆರು ತಿಂಗಳೊಳಗೆ ನನ್ನ ದಳ ತ್ರಿಪುರಾದಿಂದ ಚಿತ್ತಗಾಂಗ್‌ಗೆ ಚಿತ್ತಗಾಂಗ್‌ನಿಂದ ಜೊಹಾರ್ತ್‌ಗೆ ಮತ್ತು ಅಲ್ಲಿಂದ ಮಣಿಪುರಕ್ಕೆ ತೆರಳುತ್ತಾ ತೊಂದರೆಗೀಡಾದ ಪಡೆಗಳಿಗೆ, ವಿನ್‌ಗೇಟ್ಸ್‌ದ ಎರಡನೇ ಸಾಹಸಕಾರ್ಯಾಚರಣೆಗೆ ಮತ್ತು ಮುತ್ತಿಗೆಗೊಳಗಾದ ಇಂಫಾಲ್‌ಗೆ ಸರಬರಾಜು ಮಾಡಿತು.

ಅನಾರೋಗ್ಯವನ್ನು ಲೆಕ್ಕಿಸಲಿಲ್ಲ.

ಈ ಕಷ್ಟಕರ ತಿಂಗಳುಗಳು ನನ್ನ ಆರೋಗ್ಯದ ಮೇಲೆ ಪರಿಣಾಮ ಬೀರಿದವು. ಈ ಒಂಬತ್ತು ತಿಂಗಳ ಕಾಲ ನಾನು ದಿನದ 24 ಗಂಟೆಗಳಲ್ಲಿ ಎರಡು ಗಂಟೆಗಿಂತ ಹೆಚ್ಚು ಸಮಯ ನಿದ್ದೆ ಮಾಡಲಿಲ್ಲ. ನಾನು ದುರ್ಬಲವಾಗತೊಡಗಿದೆ. ಗಂಭೀರ ಸ್ವರೂಪದ ಮಲೇರಿಯಾ ಹಾಗೂ ಬೇಧಿ ನನ್ನನ್ನು ಕಾಡಿತು. ಈ ಬೇನೆಗಳಿಂದಾಗಿ ನನಗೆ ನಿದ್ದೆ ಮಾಡಲು ಆಗಲಿಲ್ಲ. ತಿಂಡಿ ತಿನ್ನಲೂ ಆಗಲಿಲ್ಲ. ಆದರೂ ನಾನು ಅನಾರೋಗ್ಯವನ್ನು ಯಾರಿಗೂ ಹೇಳಲಿಲ್ಲ. ಯಾಕೆಂದರೆ ನಾನು ನನ್ನ ಸೈನಿಕರ ಜತೆಗೆ ಇರಬೇಕಿತ್ತು.

ಎಲ್ಲಕ್ಕಿಂತ ಮುಖ್ಯವಾಗಿ, ಹೊಸದೊಂದು ಅಂಶ ತಲೆಯೆತ್ತುತ್ತಿತ್ತು. ಜಪಾನೀಯರು ಮಣಿಪುರ ಪ್ರದೇಶದ ಮೇಲೆ ಆಕ್ರಮಣ ಮಾಡುತ್ತಿದ್ದರು. ಕೊಹಿಮಾವನ್ನು ಸುತ್ತುವರಿಯಲಾಗಿತ್ತು. ನಾಗಾ ಬೆಟ್ಟಗಳಲ್ಲಿ ತೀಕ್ಷ್ಣ ಕಾಳಗ ನಡೆಯಿತು. ಜಪಾನೀಯರ ಜತೆ ಜೆಐಎಫ್‌ಎಸ್ ಇದ್ದರೆ ಎಂದು ಬ್ರಿಟೀಷ್ ಅಧಿಕಾರಿಗಳು ಪಿಸುಗುಟ್ಟುತ್ತಿದ್ದರು. (ಜೆ.ಐ.ಎಸ್.ಎಫ್.ಎಸ್. ಅಂದರೆ ಜಪಾನಿ ಭಾರತೀಯ ಪಡೆಗಳು, ಅಂದರೆ ಖ್ಯಾತ ಐ.ಎಸ್.ಎ. ಐ.ಎನ್.ಎ) ಈ ವಿಚಾರವನ್ನು ತೀರಾ ಗುಟ್ಟಾಗಿಡಲಾಗಿತ್ತು. ಭಾರತೀಯ ಪಡೆಗಳಿಗೆ ಈ ಸುದ್ದಿಯನ್ನು ಬಹಿರಂಗಪಡಿಸುವ ಬಗ್ಗೆ ಬ್ರಿಟೀಷರಿಗೆ ಹೆದರಿಕೆಯಿತ್ತು.

ಮಳೆಗಾಲದ ಒಂದು ಬೆಳಿಗ್ಗೆ ನಾನು ಜೊಹರ್ತ್ ಸಮೀಪದ ಚಿರೆಗಾಂವ್ ವಾಯುಸೇನೆಯಿಂದ ದಿಮಾಪುರಕ್ಕೆ ಹೊರಟೆ. ನಾಗಾಬೆಟ್ಟಗಳ ಕಾರ್ಯಾಚರಣೆಗೆ ದಿಮಾಪುರ ನೆಲೆಯಾಗಿರುವುದರಿಂದ ಮತ್ತು ಬೆಟ್ಟಗಳಿಂದ ನಿರಾಶ್ರಿತರು ಹರಿದು ಬರುತ್ತಿರುವುದರಿಂದ ದಿಮಾಪುರದಲ್ಲಿ ಜೆಐಎಫ್‌ಎಸ್ ಬಗ್ಗೆ ತಿಳಿದುಕೊಳ್ಳುವುದು ನನ್ನ ಪ್ರಯಾಣದ ಉದ್ದೇಶವಾಗಿತ್ತು. ನನ್ನ ಆರೋಗ್ಯ ತೀರಾ ಹದಗೆಟ್ಟಿತ್ತು. ಅನೀಮಿಯಾದಿಂದಾಗಿ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದೆ. ಅಸ್ಸಾಂ, ಕಾಡುಗಳಿಂದ ಸೂಸುತ್ತಿದ್ದ ಅಪರೂಪದ, ಹುಳಿ ವಾಸನೆ, ಭೋರ್ಗರೆಯುತ್ತಾ ತಲೆಯ ಮೇಲ್ಗಡೆಯಿಂದ ಸಾಗುತ್ತಿದ್ದ ವಿಮಾನಗಳ ಸದ್ದು ನನ್ನ ನರಗಳ ಮೇಲೆ ಪರಿಣಾಮ ಬೀರುತ್ತಿತ್ತು. ರಸ್ತೆ ಮಾರ್ಗವಂತೂ ದುರ್ಗಮವಾಗಿತ್ತು. ನನ್ನ ಸ್ಥಿತಿ ದಯನೀಯವಾಗಿತ್ತು.

(ಮುಂದುವರಿಯುವುದು)

ತ್ರಿಪುರಾ : ಎಡರಂಗ ಮತ್ತೆ ಅಧಿಕಾರಕ್ಕೆ

ತ್ರಿಪುರಾದಲ್ಲಿ ಎಡರಂಗವನ್ನು ಮತ್ತೆ ಅಧಿಕಾರಕ್ಕೆ ತಂದಿರುವ ಜನತೆಗೆ ಕ್ರಾಂತಿಕಾರಿ ಅಭಿನಂದನೆಗಳು.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಮಾರ್ಚ್ 3 ಸೋಮವಾರ.
ವಿದ್ಯುತ್ ದರ ಏರಿಕೆ ಮತ್ತು ಖಾಸಗೀಕರಣದ ವಿರುದ್ಧ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ(ಬೆಸ್ಕಾಂ) ಎದುರು ಪ್ರತಿಭಟನೆ - ಕೆ.ಆರ್.ವೃತ್ತ, ಬೆಂಗಳೂರು

ಬೆಳಿಗ್ಗೆ 11.30 ಕ್ಕೆ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ

ಮಾರ್ಚ್4- 2003, ಮಂಗಳವಾರದಿಂದ
ಅಂಗನವಾಡಿ ನೌಕರರ ಅನಿರ್ಧಿಷ್ಟಾವಧಿ ಸಾಮೂಹಿಕ ಧರಣಿ ಸತ್ಯಾಗ್ರಹ, ಬೆಳಿಗ್ಗೆ 11 ಗಂಟೆಗೆ ರೈಲ್ವೆ ನಿಲ್ದಾಣದಿಂದ ಬೃಹತ್ ಮೆರವಣಿಗೆ.

ಮಾರ್ಚ್ 6 ರಿಂದ 9, 2003
ಅಖಿಲ ಭಾರತ ಕಿಸಾನ್ ಸಭಾ - 30ನೇ ರಾಷ್ಟ್ರೀಯ ಸಮ್ಮೇಳನ
ಜಲಂಧರ್, (ಪಂಜಾಬ್)
ಉದ್ಘಾಟನೆ-ರ್‍ಯಾಲಿ-ಮಾರ್ಚ್ 6

ಮಾರ್ಚ್ 8-2003, ಶನಿವಾರ
ಅಂತರ್‍ರಾಷ್ಟ್ರೀಯ ಮಹಿಳಾ ದಿನಚಾರಣೆ ಅಲ್ಲಲ್ಲಿ ಸಭೆ, ಸಮಾರಂಭ, ಕಾರ್ಯಕ್ರಮಗಳು
ಬೆಂಗಳೂರಿನಲ್ಲಿ - ಮೈಸೂರು ಬ್ಯಾಂಕ್ ಸರ್ಕಲ್‌ನಿಂದ ಮೆರವಣಿಗೆ ಬೆಳಿಗ್ಗೆ 11 ಗಂಟೆಗೆ

ಮಾರ್ಚ್ 15-16, 2003
ಡಿವೈಎಫ್‌ಐ ನೇತೃತ್ವದಲ್ಲಿ ಯುವತಿಯರ ಅಖಿಲ ಭಾರತ ಸಮಾವೇಶ, ಕೋಲ್ಕತ್ತ

ಮಾರ್ಚ್ 23 ರಿಂದ 28, 2003
ಡಿವೈಎಫ್‌ಐ ಕರೆ - ನಿರುದ್ಯೋಗದ ವಿರುದ್ಧ ಜಾಥಾಗಳು, ಪ್ರಚಾರಾಂದೋಲನ
ಮಾರ್ಚ್ 28, ಜಿಲ್ಲಾ / ತಾಲ್ಲೂಕು ಕೇಂದ್ರಗಳಲ್ಲಿ ಧರಣಿ

ರಾಜ್ಯಪಾಲರ ನಿರ್ಲಕ್ಷ್ಯತನದ ಭಾಷಣ

ದೆಹಲಿಯಲ್ಲಿ ಪಾರ್ಲಿಮೆಂಟ್, ಬೆಂಗಳೂರಿನಲ್ಲಿ ಕರ್ನಾಟಕ ವಿಧಾನ ಸಭೆ ಅಧಿವೇಶನಗಳು ಆರಂಭಗೊಂಡಿವೆ. ಇವು ಬಜೆಟ್ ಅಧಿವೇಶನಗಳು, ಹೀಗಾಗಿ ಎಲ್ಲರ ಗಮನ ಸೆಳೆಯುತ್ತಿವೆ. ಕೇಂದ್ರ ಸರ್ಕಾರ ರೈಲ್ವೆ ಹಾಗೂ ಸಾಮಾನ್ಯ ಎರಡು ಬಜೆಟ್‌ಗಳನ್ನು ಮಂಡಿಸಿದೆ. ಇನ್ನೂ ಕೃಷ್ಣರವರು ಮಂಡಿಸಬೇಕಷ್ಟೆ.

ಕರ್ನಾಟಕದ ಈ ಬಜೆಟ್‌ನ ಅಧಿವೇಶನದ ಆರಂಭದಲ್ಲೇ ಎರಡು ಸದನಗಳ ಸದಸ್ಯರ ಜಂಟಿ ಸಭೆಯನ್ನುದ್ದೇಶಿಸಿ ರಾಜ್ಯಪಾಲರು ಮಾತನಾಡುವುದು ಸಂಪ್ರದಾಯ. ಅಲಂಕಾರಿಕ ಹುದ್ದೆಯಾಗಿ, ಕೇಂದ್ರ ಸರ್ಕಾರದ ನಿಷ್ಠ (ರಾಜಕೀಯ ವಾಗಿಯೂ)ಪ್ರತಿನಿಧಿಯಾಗಿ ಕುಳಿತಿರುವ ರಾಜ್ಯಪಾಲರು ಚುನಾಯಿತ ಸರ್ಕಾರವನ್ನು 'ನನ್ನ ಸರ್ಕಾರ'ವೆಂದು ಹಿಂದಿನ-ಮುಂದಿನ ಹಾದಿ ಏನಿರುತ್ತದೆ ಎಂದು ಭಾಷಣ ಓದುವುದು, ಅದಕ್ಕೆ 'ವಂದನೆ' ಹೇಳಿ ಮಾನ್ಯ ಸದಸ್ಯರು ಮಾತನಾಡುವುದು, ಯಥಾ ಪ್ರಕಾರದ ಕೆಲಸಗಳಲ್ಲಿ ಚುನಾಯಿತ ಸರ್ಕಾರದ ಮಾತುಗಳನ್ನು ರಾಜ್ಯಪಾಲರ ಮೂಲಕ ಹೇಳಿಸುವುದು ಒಂದು ವಿಧಾನ. ಮಾಜಿ ಮಹಾ ಲೆಕ್ಕಪರಶೋಧಕರಾಗಿ, ಬಿಜೆಪಿಯ ರಾಜಕಾರಣದಲ್ಲಿದ್ದ ಟಿ.ಎನ್. ಚತುರ್ವೇದಿ ಯವರು ರಾಜ್ಯಪಾಲರಾಗಿ ನೇಮಕವಾದ ಬಳಿಕ ರಾಜ್ಯದಲ್ಲಿ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ್ದು ಇದೇ ಮೊದಲು. ಜನರ ಹಲವಾರು ಕಾರ್ಯಕ್ರಮದಲ್ಲಿ ಹೆಚ್ಚು ಹೆಚ್ಚಾಗಿ ಭಾಗಿಯಾಗುತ್ತಿದ್ದ ಹಿಂದಿನ ರಾಜ್ಯಪಾವರಾಗಿದ್ದ ಶ್ರೀಮತಿ ರಮಾದೇವಿಯವರು ಕನ್ನಡದಲ್ಲೇ ಭಾಷಣ ಓದುತ್ತಿದ್ದುದು, ಚತುರ್ವೇದಿಯವರ ಒಂದು ಸಾಲಿನ ಮೊದಲು ಕನ್ನಡ ಕೇಳಿದಾಗ ಕೆಲವರಿಗೆ ಹಿಂದಿನ ನೆನಪು ಕಾಡಿತಂತೆ. ಅದೇನೇ ಇರಲಿ ಹೂರಣ ಒಂದೇ.

ಈ ಭಾಷಣ ಪ್ರತಿಕ್ರಿಯಿಸಿರುವ ಪತ್ರಿಕೆಗಳು ಇದು ಕಠಿಣ ಬಜೆಟ್‌ನ ಸೂಚಕ ಎಂದು ವಿಶ್ಲೇಷಿಸಿದೆ. ಹಾಗಾದರೆ ಈ ಕಠಿಣ ಬಜೆಟ್ ಯಾರ ಪಾಲಿಗೆ? ಮೃದು ಬಜೆಟ್ ಯಾರ ಮಡಿಲಿಗೆ? ಕೃಷ್ಣರ ಸರ್ಕಾರದ ಕಳೆದ ಬಜೆಟ್ ಹಾಗೂ ದೊಡ್ಡ ಬಂಡವಾಳಗಾರರ ಪರವಾಗಿ ಕೈಗೊಳ್ಳುತ್ತಾ ಬಂದ ಕ್ರಮಗಳನ್ನು ಗಮನಿಸಿದರೆ ಜನಸಾಮಾನ್ಯ ದುಡಿವ ಜನಕೋಟಿಯ ಬೆನ್ನಿಗೆ ಬರೆ ಎಳೆಯುವುದರಲ್ಲಿ ಅನುಮಾನವಿಲ್ಲ. ಮತ್ತೆ ತೆರಿಗೆ, ದರಗಳ ಏರಿಕೆಗಳ ಹೊರೆ ಹೊರಿಸುವುದು ತಪ್ಪುವುದಿಲ್ಲ.

ರಾಜ್ಯಪಾಲರ ಈ ಭಾಷಣ ಜನತೆಯ ಹಲವಾರು ಪ್ರಮುಖ ಸಮಸ್ಯೆಗಳ ಬಗ್ಗೆ ಮಾತನಾಡುವುದೇ ಇಲ್ಲ.

ಬರದ ತೀವ್ರತೆ, ಕೃಷಿ-ಕೈಗಾರಿಕಾ ಬಿಕ್ಕಟ್ಟುಗಳು, ನಿರುದ್ಯೋಗ, ಆತ್ಮಹತ್ಯೆಗಳು ಸಾಲದ ಪ್ರಶ್ನೆ.



ನೀರಾವರಿ ಅಭಿವೃದ್ಧಿ, ಕೋಮುಗಲಭೆಗಳು, ದಲಿತರು, ಮಹಿಳೆಯರ ಮೇಲಿನ ದೌರ್ಜನ್ಯ, ಕ್ರಿಮಿನಲ್ ಕೃತ್ಯಗಳ ಹೆಚ್ಚಳದಂತಹ ಅನೇಕ ಮಹತ್ವದ ಪ್ರಶ್ನೆಗಳ ಬಗ್ಗೆ ನಿರ್ಲಕ್ಷ್ಯ ವಹಿಸಿದೆ.

ಬರದ ಬವಣೆಗಳನ್ನು ಎದುರಿಸಲು ಕೇಂದ್ರಸರ್ಕಾರ ಹಣಕಾಸು ಮತ್ತು ಆಹಾರ ಧಾನ್ಯಗಳ ನೆರವು ಅಗತ್ಯವಿರುವಷ್ಟು ನೀಡಿಲ್ಲವೆಂದು ಕೇಂದ್ರದ ಮೇಲೆ ದೂರು ಹೇಳುತ್ತಾ, ತಾವು ನಿರ್ವಹಿಸಬೇಕಿದ್ದ ಕನಿಷ್ಠ ಕರ್ತವ್ಯಗಳನ್ನು ಮರೆಮಾಡಿ ವಿಫಲವಾಗಿರುವುದನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದೆ. ಕೃಷ್ಣ ಸರ್ಕಾರ ಕೇಂದ್ರ ಸರ್ಕಾರ ರಾಜ್ಯಗಳಿಗೆ ನೆರವು ನೀಡುವಾಗ ಕರ್ನಾಟಕಕ್ಕೆ ತಾರತಮ್ಯ ತೋರಿಸಿ ರಾಜಕೀಯ ಸಂಕುಚಿತ ಲಾಭದ ಪ್ರವೃತ್ತಿ ತೋರಿದಾಗ ದೃಢವಾಗಿ ಕೇಂದ್ರದ ವಿರುದ್ಧ ರಾಜ್ಯ ಸರ್ಕಾರ ಸಂಘರ್ಷ ಹೂಡಲಿಲ್ಲ. ಮುಂದೆ ಈ ಪ್ರಶ್ನೆ ಇರಿಸಿ, ಜನತೆಯನ್ನು ಒಲಿಸಿಕೊಂಡು ಕೇಂದ್ರದ ವಿರುದ್ಧ ಹೋರಾಟಕ್ಕೆ ಇಳಿಯಲಿಲ್ಲ. ಸರ್ವಪಕ್ಷಗಳು ನಿಯೋಗವನ್ನು ಕೇಂದ್ರಕ್ಕೆ ಒಯ್ಯಲಿಲ್ಲ. ಬದಲಾಗಿ ಆಗ ಕೇಂದ್ರವನ್ನು ಹೊಗಳಿ ಈಗ ತೆಗಳುತ್ತಿರುವ ಉದ್ದೇಶವೇನು? ತಮ್ಮ ಹೊಣೆ ತಪ್ಪಿಸಿಕೊಳ್ಳುವುದಲ್ಲವೇ. ಇದರಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳೆರಡೂ ಅಪರಾಧಿಗಳು.

ಈವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್

ಸತತವಾಗಿ ಬೆಳೆಹಾನಿ, ಫಸಲಿಗೆ ಬೆಲೆಯಿಲ್ಲ, ಸಾಲದ ಬಾಧೆ, ಮೇಲಾಗಿ ಎರಡು ವರುಷಗಳಿಂದ ಸತತ ಬರಗಾಲ ಇರುವಾಗ ಕೇವಲ 2002 ರಲ್ಲಿ ಒಂದು ಬೆಳೆ ಅವಧಿಯ 3-4 ತಿಂಗಳುಗಳ ಸಾಲದ ಬಡ್ಡಿಯನ್ನು ವಜಾ ಮಾಡಿಬಿಟ್ಟರೆ (126 ಕೋಟಿ) ಎಲ್ಲವೂ ಪರಿಹಾರವಾದಂತಾದೀತೆ? ಜೊತೆಗೆ ಸಾಲ ವಸೂಲಿಗೆ ನಿರ್ದಾಕ್ಷಿಣ್ಯ ಕ್ರಮವಹಿಸಲು ಹೊರಟಿದ್ದಾರೆ. ಇದು ಎಂತಹ ಗಂಭೀರ ಪರಿಣಾಮ ಬೀರುತ್ತದೆ ಎಂಬುದಕ್ಕೆ ಗುಲಬರ್ಗಾದ ಕಣದಾಳ ಗ್ರಾಮದ ಯುವರೈತನ ಆತ್ಮಹತ್ಯೆ ಸಾಕ್ಷಿಯಲ್ಲವೆ? ಆದ್ದರಿಂದ ಸಹಕಾರಿ ಸಾಲ ವಸೂಲು ಮುಂದೂಡುವ, ಬಡ್ಡಿ ರದ್ದತಿಯ ಪ್ರಸ್ತಾಪವೇ ರಾಜ್ಯಪಾಲರ ಭಾಷಣದಲ್ಲಿ ಇಲ್ಲ.

ವಿದ್ಯುತ್, ನೀರಾವರಿ, ಶಿಕ್ಷಣ ಖಾಸಗೀಕರಣ, ಹಾಗೂ ಶುಲ್ಕಗಳ ಹೆಚ್ಚಳದ ಹೊರೆ ಕನಿಷ್ಠ ಇಳಿಸುವ ಪ್ರಸ್ತಾಪವೂ ಇಲ್ಲ. ಪ್ರದೇಶಿಕ ಅಸಮಾನತೆ ನಿವಾರಣೆ ಬಗ್ಗೆ ಅಷ್ಟೊಂದು ಮಾತನಾಡುವ ಕೃಷ್ಣ ಸರ್ಕಾರ ಸಂಪನ್ಮೂಲ, ಮೀಸಲುನಂತಹ ಹಲವಾರು ಕಾರ್ಯಶೀಲ ಯೋಜನೆಗಳೂ ಇಲ್ಲ. ಕನಿಷ್ಠ ಕಳೆದ ವರ್ಷದ ಬಜೆಟ್‌ನಲ್ಲಿ ಘೋಷಿಸಲಾದ ಯೋಜನೆಗಳು, ಮೀಸಲಾಗಿರಿ ಸಲಾಗಿದೆಯೆಂದ ಹಣದ ಖರ್ಚು ಭರವಸೆಗಳ ಜಾರಿ ಬಗ್ಗೆ ಏನೆಂಬುದು ಇಲ್ಲ ಅಂದರೆ ಪ್ರತಿವರ್ಷವೂ ಹೇಳುತ್ತಾ ಹೋಗೋದು, ಜಾರಿಗೆ ತರುವ ಹೊಣೆಗಾರಿಕೆಯೆಂಬುದು ಇರಬೇಕಿಲ್ಲವೆಂದೇ ಸರ್ಕಾರ ಭಾವಿಸಿದೆ.

ಹೀಗೆ ರಾಜ್ಯ ಸರ್ಕಾರದ ಮುಂದಿನ ಹಾದಿಯ ದಿಕ್ಕು ಎನ್ನಲಾಗುತ್ತಿರುವ ರಾಜ್ಯಪಾಲರ ಭಾಷಣ ರಾಜ್ಯದ ಜನತೆಯ ನಿಜವಾದ ಪ್ರಶ್ನೆಗಳಿಗೆ ಹೊಣೆಗಾರಿಕೆ ತೋರದೆ, ಸಣ್ಣಪುಟ್ಟ ಕಾರ್ಯಕ್ರಮಗಳನ್ನೇ (ಸ್ತ್ರೀ ಶಕ್ತಿ ಯೋಜನೆ, ಮನೆ ನಿರ್ಮಾಣ, ರಸ್ತೆ....) ಮಹಾನ್ ಸಾಧನೆಗಳೆಂದು ಬಣ್ಣಿಸಿಕೊಳ್ಳುವುದು ವಂಚಕತನವಾಗಿದೆ. ಬಹು ಮುಖ್ಯವಾಗಿ ಕೃಷ್ಣರ ಸರ್ಕಾರ ಅನುಸರಿಸುತ್ತಿರುವ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ನೀತಿಗಳಿಗೆ ಅನುಗುಣವಾಗಿ ವಿಶ್ವಬ್ಯಾಂಕ್ - ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಆಜ್ಞೆಗಳಿಗೆ ಬದ್ಧವಾಗಿಯೇ ಇದೆ. ಮೂಲಭೂತ ಸಂರಚನಾ ಹೊಂದಾಣಿಕೆಗೆ ದೃಢವಾಗಿ ಅಂಟಿಕೊಂಡಿರುವುದು. ಉದ್ಯೋಗ ಕಳೆಯುವ ಆಡಳಿತ ಪುನರ್ರಚನಾ ಶಿಫಾರಸು ಜಾರಿಗೆ ಬದ್ಧವಾಗಿರುವುದು- ಸ್ಪಷ್ಟಗೊಳಿಸುತ್ತವೆ.

ರಾಜಕೀಯವಾಗಿ ಅತ್ಯಂತ ಗಮನಾರ್ಹ ಸಂಗತಿಯೆಂದರೆ ಕರ್ನಾಟಕದಲ್ಲಿ ಬಾಬಾ ಬುಡನ್‌ಗಿರಿ ಒಳಗೊಂಡು ವಿಶ್ವಹಿಂದೂ ಪರಿಷತ್ - ಬಜರಂಗದಳ ಮುಂತಾದ ಆರ್.ಎಸ್.ಎಸ್, ಪರಿವಾರವು ತನ್ನ ತೀವ್ರವಾದ ಕೋಮು ವಿಭಜನೆಯ ಗಲಭೆಗಳನ್ನೆಬ್ಬಿಸುತ್ತಾ ಕೋಮು ಸೌಹಾರ್ದತೆಗೆ ಗಂಡಾಂತರ ತರುತ್ತಿರುವ ಬಗ್ಗೆ, ಅದನ್ನು ಎದುರಿಸುವ ಅಗತ್ಯದ ಬಗ್ಗೆ ರಾಜ್ಯಪಾಲರ ಭಾಷಣ ಮೌನವಾಗಿದೆ. ಅಂದರೆ ಕಾಂಗ್ರೆಸ್ ಅಧ್ಯಕ್ಷ ಪೂಜಾರಿ ಬಾಯಿಯಲ್ಲಿ ಹೇಳಿಕೆ ನೀಡಿಸಿ, ಕೋಮುವಾದಿಗಳ ಆಕ್ರಮಣ ತೀವ್ರವಾಗಿರುವಾಗಲೆಲ್ಲ ರಾಜಿಯಾಗುವ ಪ್ರವೃತ್ತಿ ತೋರುವ ಕೃಷ್ಣ ಸರ್ಕಾರದ ಸಂದರ್ಭ ಸಾಧಕ ನಿಲುವು ಭಾರೀ ಹಾನಿ ತರಲಿದೆ.

ಹೀಗೆ ರಾಜ್ಯಪಾಲರ ಭಾಷಣ ಜನಸಾಮಾನ್ಯರ ಪಾಲಿಗೆ ಬರಲಿರುವ ಧಾಳಿಗಳ ಸೂಚನೆಯಾಗಿದೆ ಅಷ್ಟೆ.

ಹುಮ್ನಾಬಾದ್ : ಬಿಜೆಪಿಗೆ ಮುಖಭಂಗ

ಹುಮ್ನಾಬಾದ್‌ನ ಉಪಚುನಾವಣಾ ಫಲಿತಾಂಶವೀಗ ಪ್ರಕಟವಾಗಿದೆ. ಹಿಂದೆ ಗೆದ್ದಿದ್ದ ಬಿಜೆಪಿ ಸೋತು ಮೂರನೇಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಮೂರನೇಯ ಸ್ಥಾನದಲ್ಲಿದ್ದ ಜೆಡಿ(ಎಸ್) ಎರಡನೇಯ ಸ್ಥಾನಕ್ಕೆ, ಎರಡನೇ ಸ್ಥಾನದಲ್ಲಿದ್ದ ಕಾಂಗ್ರೆಸ್ ಮೊದಲ ಸ್ಥಾನದಿಂದ ಗೆದ್ದಿದೆ. ಇದು ಕೋಮುವಾದಿ ಬಿಜೆಪಿಗೆ ಜನತೆ ನೀಡಿದ ಪರಿಣಾಮಕಾರಿ ಏಟು. ಜನವಿಭಜಕ - ಕೋಮು ದ್ವೇಷದ, ದೇಶದ್ರೋಹಿ ನೀತಿಗಳಿಗೆ ಶಾಂತಿಪ್ರಿಯ - ಸೆಕ್ಯುಲರ್ ಮೌಲ್ಯಗಳ ಬಯಸಿದ ಜನತೆಯ ತೀರ್ಪು.

ಏನೇ ಆಗಲೀ, ಎಷ್ಟೇ ಹಣ, ತೋಳ್ಬಲ ಖರ್ಚಾದರೂ ಗೆದ್ದೇ ಗೆಲ್ಲಬೇಕೆಂದು ನೀತಿಬದ್ಧ - ಪಕ್ಷವೆಂದು ಬೊಗಳೆ ಹೊಡೆವ ಬಿಜೆಪಿ - ಆರ್‌ಎಸ್‌ಎಸ್ ನ ಪರಿವಾರ ಶತಾಯಗತಾಯ ಪ್ರಯತ್ನಿಸಿತು. ಕೋಟಿಕೋಟಿ ರೂಪಾಯಿ ಹಣವನ್ನು ನೀರಿನಂತೆ ಚೆಲ್ಲಿದರು. ಹೆಂಡದ ಹೊಳೆ ಹರಿಸಿದರು. ಜಾತಿಯ ರಾಜಕಾರಣಕ್ಕೆ ಇಳಿದರು. ಕೇಂದ್ರ ಸಚಿವರಾದ ಎಲ್.ಕೆ.ಅಡ್ವಾಣಿ, ಅನಂತಕುಮಾರ್, ಪ್ರಮೋದ್ ಮಹಾಜನ್ ರಂತಹ ಮುಖಂಡರು, ರಾಜ್ಯದ ಯಡಿಯೂರಪ್ಪ, ಬಸವರಾಜ ಪಾಟೀಲ್ ಸೇಡಂ, ಇತ್ಯಾದಿ ನಾಯಕರುಗಳೇ ಬೀಡುಬಿಟ್ಟು ಶ್ರಮಿಸಿದರು. ಇವೆಲ್ಲಾ ಸಾಲದೆಂದು 'ಗುಜರಾತ್ ಮಾದರಿ' ಯನ್ನು ಪ್ರಯೋಗಿಸಲು ಬಸವಕಲ್ಯಾಣದಲ್ಲಿ (ಹಿಂದೆ ಆಳಂದದಲ್ಲಿ) ಕೋಮುಗಲಭೆ ಎಬ್ಬಿಸಿದರು. ನರಹಂತಕ ಹಿಟ್ಲರ್ ವಂಶಸ್ತ ನರೇಂದ್ರಮೋದಿಯ ಭಾರಿ ಕಟೌಟ್ ನಿಲ್ಲಿಸಿ 'ಹಿಂದುತ್ವ'ದ ರಾಜಕೀಯ ಧಾಳ ಬಳಸಿದರು. ಇಷ್ಟೆಲ್ಲಾ ಕಸರತ್ತು ನಡೆಸಿದರೂ ಪ್ರಜ್ಞಾವಂತ ಮತದಾರರು ಅವರನ್ನು ಮೂರನೇ ಸ್ಥಾನಕ್ಕೆ ತಳ್ಳಿದ್ದಾರೆ. ಕೋಮುವಾದಿ ವೈರಸ್‌ಗಳ ಅಟ್ಟಹಾಸ ಸಾಕು, ಕೇಂದ್ರದ ಉದಾರೀಕರಣದ ದುರಾಡಳಿತ, ಭ್ರಷ್ಟತೆಗೆ ಧಿಕ್ಕಾರ ಎಂದು ತಿರಸ್ಕರಿಸಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಕಾಂಗ್ರೆಸ್‌ನ ಗೆಲುವನ್ನು ನೋಡಬೇಕು.

ಕಾಂಗ್ರೆಸ್ ಗೆದ್ದಿರುವುದು ತಮ್ಮ ಸರ್ಕಾರದ, ಪಕ್ಷದ ಅಮೋಘ ಸಾಧನೆಗೆ ಸಿಕ್ಕ ಬೆಂಬಲವೆಂದು ಕಾಂಗ್ರೆಸ ನಾಯಕರು ಬೆನ್ನು ತಟ್ಟಿಕೊಳ್ಳುವ ಮೂರ್ಖತನ ತೋರುತ್ತಾರೆ. ಇದು ವಂಚಕ ರಾಜಕಾರಣದ ಇನ್ನೊಂದು ಮಾತು ಅಷ್ಟೇ. ಕಾಂಗ್ರೆಸ್‌ನ ನೀತಿಗಳು ಮತ್ತು ರಾಜಕಾರಣಕ್ಕೆ ಪ್ರಬಲ ಪ್ರತಿರೋಧ ಇರುವುದು ಜೆಡಿ(ಎಸ್) ಮತ್ತು ಬಿಜೆಪಿ ತೆಗೆದುಕೊಂಡ ಮತಗಳ ಪ್ರಮಾಣದಿಂದ ಸಾಬೀತಾಗುತ್ತದೆ. (ಜೆಡಿಎಸ್- 29,438, ಬಿಜೆಪಿ 28,954)

ಈ ಚುನಾವಣೆಯಲ್ಲಿ ಕಾಂಗ್ರೆಸ್ ಸಹ ಬಿಜೆಪಿಯೊಂದಿಗೆ ಹಣ, ಹೆಂಡ, ಅಧಿಕಾರದಿಂದ ತೋಳ್ಬಲ ಬಳಸುವಲ್ಲಿ ಪೈಪೋಟಿಗೆ ಇಳಿದಿದೆ. ಕೃಷ್ಣ, ಪೂಜಾರಿ, ಅಲ್ಲದೇ ಸಚಿವರುಗಳ ದಂಡು ಎಲ್ಲಾ ವರಸೆಗಳನ್ನು ಮುಗಿಸಿದ್ದಾರೆ, ಕಾಂಗ್ರೆಸ್ ಬಿಜೆಪಿಗಳಿಗೆದುರಾಗಿ ಮೂರನೇಯ ಪರ್ಯಾಯವಾಗಿ ಸಿಪಿಐ(ಎಂ) ಬೆಂಬಲದಿಂದ ಜೆಡಿಎಸ್‌ಗೆ ಜನ ಗಮನಾರ್ಹವಾಗಿ ಬೆಂಬಲ ನೀಡಿರುವುದು ಅತ್ಯಂತ ಪ್ರೋತ್ಸಾಹದಾಯಕ, ಸ್ವಾಗತಾರ್ಹ. ಸಂಪನ್ಮೂಲಗಳ ಕೊರತೆ, ಜನತಾದಳದ ಬಣಗಳ ಒಡಕು ಇಲ್ಲದಿದ್ದಲ್ಲಿ (ಜೆಡಿಯು ಸ್ಪರ್ಧಿಸಿ 700 ಮತ ಪಡೆದು ನೆಲಕಚ್ಚಿದೆ ಹಾಗೆಯೇ ಬಿಎಸ್‌ಪಿ 2000) ಫಲಿತಾಂಶ ಭಿನ್ನವಿರಬಹುದಿತ್ತು. ಈ ಫಲಿತಾಂಶಗಳ ಇನ್ನೂ ವಿವರವಾಗಿ ವಿಶ್ಲೇಷಿಸಿ, ಮೂರನೇಯ ಪರ್ಯಾಯಕ್ಕಾಗಿ ಕ್ರಿಯಾಶೀಲ ಪಾತ್ರ ವಹಿಸಬೇಕಿದೆ. ಆದರೆ ಬಿಜೆಪಿ ಸೋತರೂ ಇನ್ನೂ ಬಲವಿದೆ ಎಂಬ ಎಚ್ಚರವೂ ಬೇಕು

ಖಾವೀಪಡೆ ಹಾವಳಿ

ಕಳೆದ ವಾರದಲ್ಲಿ ರಾಜ್ಯದಲ್ಲಿ ಮೂರು ಕೋಮು ಗಲಭೆಗಳನ್ನೆಬ್ಬಿಸುವ ಪ್ರಯತ್ನಗಳು ನಡೆದಿವೆ. ಬೆಂಗಳೂರಿನ ಅಶೋಕನಗರ (ಆನೇಪಾಳ್ಯ)ದಲ್ಲಿ ಅಣ್ಣಮ್ಮದೇವಿ ಮೆರವಣಿಗೆಯನ್ನು ಮಸೀದಿಯಲ್ಲಿ ಪ್ರಾರ್ಥನೆ ನಡೆಯುತ್ತಿರುವಾಗ ಅಲ್ಲೇ ಹಾದು ಹೋಗಬೇಕೆಂಬ ಪ್ರಯತ್ನದಿಂದಾಗಿ ಗಲಭೆ ನಡೆದಿದೆ. ಹುಮ್ನಾಬಾದ್ ಚುನಾವಣೆಯನ್ನೇ ಕಣ್ಣಲ್ಲಿರಿಸಿ ಬಸವಕಲ್ಯಾಣದಲ್ಲಿ ಹಾವಿನಬಂಡೆ ವಿಗ್ರಹವನ್ನು ಮುಸ್ಲಿಂ ಸಮುದಾಯಕ್ಕೆ ಸೇರಿದ ನಗರಸಭಾ ಅಧ್ಯಕ್ಷ ಕಿತ್ತಿದ್ದಾನೆಂಬ ವದಂತಿ ಹಿನ್ನೆಲೆಯಲ್ಲಿ ಆದ ಗಲಭೆಗಳು ಇವು ಸಂಘಪರಿವಾರದ ತುಕಡಿಯದೇ ಕಾರುಬಾರು ಎಂದು ಬೇರೆ ಹೇಳಬೇಕಿಲ್ಲ.

ಮೂರನೇಯದು ಪುತ್ತೂರಿನಲ್ಲಿ ನಾಲ್ಕು ಹುಡುಗ-ಹುಡುಗಿಯರು ಸಿನಿಮಾ ನೋಡಿದರೆಂದೂ, ಅದರಲ್ಲಿ ಇಬ್ಬರು ಹುಡುಗರು ಮುಸ್ಲಿಂರಾಗಿದ್ದಾರೆಂದೂ 'ಮಹಾಪರಾಧಿ'ಗಳನ್ನು ಠಾಣೆಗೆ ಕರೆಸಿ ಶಾಸ್ತಿ ಮಾಡಲೇಬೇಕೆಂದು ಬಜರಂಗದಳ ಒತ್ತಡ ಹೇರಿದೆ. ಹುಡುಗರನ್ನು ಪೋಲೀಸ್ ಠಾಣೆಗೆ ಕರೆಸಿದಾಗ (ಇದಾವ ಕಾನೂನಿನಲ್ಲಿದೆಯೋ- ಹಿಂದುತ್ವವಾದಿಗಳ ಆಜ್ಞೆಯುಲ್ಲವೇ?) ಹಾಗೂ ಭಜರಂಗದಳದ ತಂಡ ಕಲ್ಲು ತೂರಿ ಗಲಭೆಯೆಬ್ಬಿಸಿದೆ.

ಇದು ಖಾವಿ ಪಡೆ ಕರ್ನಾಟಕವನ್ನು ಕೇಂದ್ರೀಕರಿಸಿ ಧಾಳಿ ನಡೆಸುತ್ತಿರುವ ಅಜೆಂಡಾದ ಮುಂದುವರಿದ ಕೃತ್ಯಗಳು. ಕೃಷ್ಣ ಸರ್ಕಾರ ವಿದೇಶಿ ಬಂಡವಾಳ ಹೂಡಿಕೆ ಆಕರ್ಷಿಸುವ ಪ್ರಾಧಾನ್ಯತೆ ಕೆಲಸದಿಂದಾಗಿ, ಇವೆಲ್ಲಾ ಸಹಜವೇನೋ ಎಂಬಂತೆ ಶಾಂತಿ ಕಾಪಾಡಲು ಅರೆಮನಸ್ಸಿನ ಆಜ್ಞೆ ಹೊರಡಿಸಿ ಕುಳಿತಿದೆ.

ನಿರಾಶಾದಾಯಕ ರೈಲ್ವೆ ಬಜೆಟ್
ಕರ್ನಾಟಕಕ್ಕೆ ಈ ವರ್ಷವೂ ಅನ್ಯಾಯ

ಹೆಚ್ಚಿನ ಹೊರೆಯಿಲ್ಲದ ರೈಲ್ವೇ ಬಜೆಟ್ ಎಂದೆಲ್ಲಾ ಪತ್ರಿಕೆಗಳಿಂದ ಬಣ್ಣಿಸಿಕೊಂಡ ರೈಲ್ವೆ ಬಜೆಟ್ ಮುಂದಿನ ಕೆಲವು ರಾಜ್ಯಗಳ ಚುನಾವಣೆಗಳ ಮೇಲೆ ಕಣ್ಣಿಟ್ಟಿದೆ. ಕರ್ನಾಟಕದ ರೈಲ್ವೆ ಅಭಿವೃದ್ಧಿಯ ಪಾಲಿಗಂತೂ ಮತ್ತ ಅನ್ಯಾಯವನ್ನೇ ಬಗೆದಿದೆ. ಅವುಗಳೇನು?



ಮೇಲುನೋಟಕ್ಕೆ ಹೆಚ್ಚಿನ ಹೊರೆ ಇಲ್ಲದ 'ಚುನಾವಣಾ ಪೂರ್ವ' ಬಜೆಟ್ ಎಂದೆನಿಸಿದರೂ, ಹೊಸಕಿ ನೋಡಿದರೆ ಹುಳುಕುಗಳು ಹೊರಬರುತ್ತವೆ. ಕರ್ನಾಟಕದ ಪಾಲಿಗಂತೂ ಯಾವುದೇ ಹೊಸ ಯೋಜನೆ ಗಳಿರಲಿ ಈಗಿರುವ 24 ಯೋಜನೆಗಳಿಗೂ ಮೀಸಲಿರಿಸಿದ ಹಣ ಕಡಿಮೆ. ಆದ್ದರಿಂದ ಯಾವುದೇ ಯೋಜನೆ ಪೂರ್ಣಗೊಳ್ಳುವ ಸಾಧ್ಯತೆ ಇಲ್ಲ. ಇದು ರೈಲ್ವೆ ಸಚಿವ ನಿತೀಶ್ ಕುಮಾರ್ ಫೆಬ್ರುವರಿ 26 ರಂದು ಲೋಕಸಭೆಯಲ್ಲಿ ಮಂಡಿಸಿದ ಬಜೆಟ್ಟಿನ ಒಟ್ಟಾರೆ ಅಂಶ.

ಈ ಬಾರಿಯೂ ರೈಲ್ವೆ ಸುರಕ್ಷತೆ ಬಗ್ಗೆ ಯಾವುದೇ ಗಮನ ನೀಡಿಲ್ಲ. ಮೇಲಿಂದ ಮೇಲೆ ಅಪಘಾತ ಹೆಚ್ಚುತ್ತಿದ್ದರೂ ರೈಲ್ವೆ ಸುರಕ್ಷತೆಗಾಗಿ ಶ್ವೇತ ಪತ್ರವನ್ನು ಹೊರಡಿಸುವುದಕ್ಕೆ ತೃಪ್ತಿಪಟ್ಟುಕೊಂಡ ರೈಲ್ವೆ ಸಚಿವರು ಯಾವುದೇ ಯೋಜನೆಗಳನ್ನು ಮುಂದಿಟ್ಟಿಲ್ಲ. ಇಂತಹ ಶ್ವೇತಪತ್ರಗಳು ಸರಕಾರಿ ಕಡತಗಳಲ್ಲಿ ಧೂಳು ಸೇರಿರುವುದು ಎಲ್ಲರಿಗೂ ತಿಳಿದಿರುವುದೇ. ಕಳೆದ ವರ್ಷ 36 ಹೊಸರೈಲು, ಈ ಬಾರಿ 50 ಹೊಸರೈಲುಗಳ ಘೋಷಣೆ ಮಾಡಲಾಗಿದೆ. ಇಷ್ಟೊಂದು ಹೊಸ ರೈಲುಗಳು ಹಳೆಯ ಹಳಿಗಳ ಮೇಲೆಯೇ ಓಡಬೇಕಾಗುತ್ತದೆ. ಹಳೆಯ ಕೋಚ್‌ಗಳನ್ನೇ ಉಪಯೋಗಿಸಬೇಕಾಗುತ್ತದೆ. ಹೊಸ ಹಳಿಗಳನ್ನು ಹಾಕುವುದಕ್ಕಾಗಲಿ, ಜೋಡಿ ಮಾರ್ಗಗಳನ್ನು ರೂಪಿಸುವುದಕ್ಕಾಗಲೀ, ಯೋಜನೆಗಳನ್ನು ರೂಪಿಸಿಲ್ಲ. ಈ ವರ್ಷದ ಬಜೆಟ್ಟಿನಲ್ಲಿ ಇಡೀ ದೇಶದಾದ್ಯಂತ ಬರೀ 225 ಕಿ.ಮೀ ಹೊಸ ಹಳಿಗಳನ್ನು ಹಾಕಲಾಗುತ್ತಿದೆ. ಇದರಿಂದ ಅಪಘಾತಗಳನ್ನು ಕಡಿಮೆ ಮಾಡಲು ಸಾಧ್ಯವಿಲ್ಲ.

ಅಪಘಾತ ನಡೆಯುವ ಇನ್ನೊಂದು ಸ್ಥಳ, ಲವೆಲ್ ಕ್ರಾಸಿಂಗ್. ಇಲ್ಲಿ ಅಪಘಾತಗಳನ್ನು ತಪ್ಪಿಸಬೇಕಾದರೆ, ಮೇಲು ಸೇತುವೆಗಳನ್ನು ನಿರ್ಮಿಸಬೇಕು. ಇಲ್ಲವೇ ಗೇಟುಗಳನ್ನು ನಿರ್ಮಿಸಿ ವಾಚ್‌ಮಾನ್‌ಗಳನ್ನು ನೇಮಿಸಬೇಕು. ಆದರೆ ಇವುಗಳಿಗೆ ಹಣ ಮೀಸಲಿಟ್ಟಿದ್ದಾರೆಯೇ? ಇಲ್ಲ

ಹೊಸ ರೈಲುಗಳ ಓಡಾಟ ಜಾಸ್ತಿ ಆಗಿದೆ. ಆದರೆ ಅದಕ್ಕೆ ಸಮವಾಗಿ ಸಿಬ್ಬಂದಿ ಸಂಖ್ಯೆ ಜಾಸ್ತಿ ಆಗಿಲ್ಲ. ಐಎಂಎಫ್- ವಿಶ್ವಬ್ಯಾಂಕ್ ಶರತ್ತುಗಳಿಗೆ ಅನುಗುಣವಾಗಿ ಸಿಬ್ಬಂದಿಗಳ ಸಂಖ್ಯೆ ಕಡಿಮೆ ಆಗಿದೆ. ಕಾದಿರಿಸಿದ ಪ್ರತಿಯೊಂದು ಭೋಗಿಯಲ್ಲಿ ಒಬ್ಬೊಬ್ಬ ಟಿ.ಟಿ(TT) ಇರುತ್ತಿದ್ದರು. ಈಗ 2-3 ಭೋಗಿಗಳಿಗೆ ಒಬ್ಬ ಟಿ.ಟಿ! 20,000 ಹೊಸ ನೇಮಕಾತಿಗಳನ್ನು ಮಾಡಲಾಗುವುದೆಂದು ಘೋಷಿಸಲಾಗಿದೆ. ಆದರೆ ಬಜೆಟ್‌ನಲ್ಲಿ ಯಾವುದೇ ಹಣ ತೆಗೆದಿರಿಸಿಲ್ಲ! ಮಾಗಿಲಾಗಿ, ರೈಲ್ವೆ ಸಚಿವಾಲಯದಿಂದ ನೀಡಿದ ಹೇಳಿಕೆಯಲ್ಲಿ ರೈಲ್ವೆ ಸಿಬ್ಬಂದಿ ಸಂಖ್ಯೆಯನ್ನು ಈಗಿರುವ 15-4 ಲಕ್ಷದಿಂದ 11-8 ಲಕ್ಷಕ್ಕೆ ಇಳಿಸಬೇಕೆಂದು ಹೇಳಿದ್ದಾರೆ. ಯಾರನ್ನು ನಂಬುವುದು? ಬಿಜೆಪಿ ಸರಕಾರ ಈವರೆಗೆ ತೆಗೆದುಕೊಂಡ ನಿರ್ಣಯದ ಪ್ರಕಾರ ರೈಲ್ವೆ ಸಚಿವರನ್ನು ನಂಬುವುದು ಆಗದ ಮಾತು.

ಕರ್ನಾಟಕಕ್ಕೆ ನಿರಾಶೆ: ಬೆಂಗಳೂರಿನಿಂದ ಏಳು ಹೊಸ ರೈಲುಗಳು ಆರಂಭ ಘೋಷಣೆ ಮಾಡಿದ್ದರೂ, ಅದರಲ್ಲಿ ಒಂದು ಮಾತ್ರ ಪ್ರತಿನಿತ್ಯ ಚಲಿಸುವಂತದ್ದು. ಉಳಿದವು ವಾರಕ್ಕೊಂದು ಈ ರೈಲುಗಳಲ್ಲಿ ಕರ್ನಾಟಕ ರಾಜ್ಯದ ಒಳನಾಡಿಗೆ ಸಂಪರ್ಕ ಕಲ್ಪಿಸುವ ರೈಲುಗಳೆಷ್ಟು? ನಗಣ್ಯ. ಅಂದರೆ ಬೆಂಗಳೂರಿಗೆ ರೈಲು ಸಂಪರ್ಕ ಹೊಂದಿದ್ದರೂ ಅದರ ಲಾಭ ಕರ್ನಾಟಕದ ಇತರ ಭಾಗಗಳಿಗೆ, ಅದರಲ್ಲೂ ಹಿಂದುಳಿದ ಪ್ರದೇಶಗಳಿಗೆ ಸಿಗುವುದಿಲ್ಲ.

ಇನ್ನೂ ಕೂಡ ಪ್ರಮುಖ ಜಿಲ್ಲಾ ಕೇಂದ್ರಗಳ ಜತೆ ಬೆಂಗಳೂರಿನ ಸಂಪರ್ಕ ಕಲ್ಪಿಸಿಲ್ಲ. ನೈಋತ್ಯ ವಲಯವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಿದರೂ ಅದರ ಕಾರ್ಯಾರಂಭಕ್ಕೆ ಸಾಕಷ್ಟು ಹಣ ಮಂಜೂರಾತಿ ಆಗಿಲ್ಲ. ಮಾತ್ರವಲ್ಲ. ರಾಜ್ಯದ ಬಹುತೇಕ ಭಾಗಗಳಿಗೆ ಅಲ್ಲಿಂದ ರೈಲ್ವೆ ಸಂಪರ್ಕಗಳಿಲ್ಲ.

ಮರೀಚಿಕೆಯಾದ ಯೋಜನೆಗಳು: ಗುಲ್ಬರ್ಗಾ-ಬೀದರ್ ಯೋಜನೆ ಪೂರ್ಣಗೊಳಿಸಬೇಕೆಂದು ಹಲವಾರು ವರ್ಷಗಳಿಂದ ಜನರ ಒತ್ತಾಯ ಇದೆ. ಗುಲ್ಬರ್ಗಾ- ಬೀದರ್ ನಡುವೆ ನೇರ ಹೆದ್ದಾರಿ 75 ಕಿ.ಮೀ ಮಾತ್ರ ಆದರೆ ಈಗಿರುವ ರೈಲ್ವೆ ಮಾರ್ಗದಲ್ಲಿ ಸಾಧಾರಣ 150 ಕಿ.ಮೀ ಆಗುತ್ತದೆ. ನೇರ ರೈಲ್ವೆ ಮಾರ್ಗದ ಕೆಲಸಗಳು ನಡೆಯುತ್ತಿದ್ದರೂ ಹಲವಾರು ವರ್ಷಗಳಿಂದ ಪೂರ್ಣಗೊಂಡಿಲ್ಲ. ಈ ಮಾರ್ಗದ ಅಂದಾಜು ವೆಚ್ಚ 460 ಕೋಟಿ ರೂ. ಇದು ಪೂರ್ಣಗೊಳ್ಳಬೇಕಾದರೆ ಇನ್ನೂ 329 ಕೋಟಿ ರೂ.ಬೇಕು. ಆದರೆ ಈಗಿನ ಬಜೆಟ್ಟಿನಲ್ಲಿ ಮಂಜೂರು ಮಾಡಿರುವುದು 15 ಕೋಟಿ ರೂ. ಮಾತ್ರ ಹಾಗಾದರೆ ಈ ಯೋಜನೆ ಮುಕ್ತಾಯಗೊಳ್ಳಲು ಎಷ್ಟು ವರ್ಷ ಬೇಕಾದೀತು?

ಗುಲ್ಬರ್ಗಾ - ಬೀದರ್ ರೈಲ್ವೆ ಮಾರ್ಗ ಪೂರ್ಣಗೊಂಡರೆ ಹಲವಾರು ಅನುಕೂಲಗಳಿವೆ. ಬೀದರ್ ಜನ ಬೆಂಗಳೂರಿಗೆ ಬರಬೇಕಾದರೆ, ಬಸ್ಸಿನಲ್ಲೇ ಬರಬೇಕಾಗುತ್ತದೆ. ಉತ್ತರ ಕರ್ನಾಟಕದ ರಸ್ತೆಗಳ ದುರವಸ್ಥೆಯಿಂದಾಗಿ ಬೀದರ್‌ನಿಂದ ಬರುವ ಕರ್ನಾಟಕದ ಬಸ್ಸುಗಳು ಸಹ ಹೈದರಾಬಾದ್ ಮಾರ್ಗವಾಗಿ ಬರುತ್ತದೆ. ಗುಲ್ಬರ್ಗಾ- ಬೀದರ್ ನಡುವೆ ರೈಲು ಮಾರ್ಗ ಪೂರ್ಣಗೊಂಡದ್ದೇ ಆದರೆ, ಬೆಂಗಳೂರಿಗೆ ನೇರ ಸಂಪರ್ಕವಾಗುವುದಲ್ಲದೆ, ಬೆಂಗಳೂರು-ನವದೆಹಲಿ ನಡುವಣ ಸಂಚಾರದಲ್ಲಿ 4 ಗಂಟೆ ಕಡಿತವಾಗುತ್ತದೆ.

ಹುಬ್ಬಳ್ಳಿ- ಅಂಕೋಲಾ ಮಾರ್ಗ:

ಹುಬ್ಬಳ್ಳಿ - ಅಂಕೋಲಾ ರೈಲು ಮಾರ್ಗಕ್ಕೆ ಪ್ರಧಾನ ಮಂತ್ರಿಯೇ ಖುದ್ದಾಗಿ ಅಡಿಗಲ್ಲು ಹಾಕಿದ್ದರು. ಆದರೆ ಅದು 1999ರ ಚುನಾವಣೆಯ ಸಂದರ್ಭದಲ್ಲಿ. ಇದರ ಒಟ್ಟು ಅಂದಾಜು ವೆಚ್ಚ 997-98 ಕೋಟಿ ರೂ. ಇದನ್ನು ಪೂರ್ಣಗೊಳಿಸಲು ಬೇಕಾಗಿರುವ ಹಣ 960-40 ಕೋಟಿ ರೂ. ಆದರೆ ಈ ಬಜೆಟ್‌ನಲ್ಲಿ ನಿಗದಿಪಡಿಸಲಾದ ಹಣ ಕೇವಲ 15 ಕೋಟಿ ರೂ. ಅಂದರೆ ಈ ಯೋಜನೆ ಪೂರ್ಣಗೊಳಿಸಲು ಇನ್ನೆಷ್ಟು ಚುನಾವಣೆ ಬೇಕಾದೀತು?

ಬೆಂಗಳೂರು - ಮಂಗಳೂರು ಮತ್ತು ಮೈಸೂರು- ಮಂಗಳೂರು ಈ ಮಾರ್ಗಗಳ ಕುರಿತಾಗಿ ಹಲವಾರು ಹೋರಾಟಗಳು ನಡೆದಿವೆ. 1961 ರಲ್ಲಿ ಅಂದರೆ 42 ವರ್ಷಗಳ ಹಿಂದೆ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಉಡುಪಿ ತಾಲ್ಲೂಕು ಸಮ್ಮೇಳನ, ಬೆಂಗಳೂರು ಜಿಲ್ಲಾ ಸಮ್ಮೇಳನ ಹಾಗೂ ಅದರ ನಂತರ ನಡೆದ ರಾಜ್ಯ ಸಮ್ಮೇಳನಗಳಲ್ಲಿ ಈ ಕುರಿತು ಗೊತ್ತುವಳಿಗಳನ್ನು ಅಂಗೀಕರಿಸಿ, ಹೋರಾಟ ಗಳನ್ನು ರೂಪಿಸಲಾಗಿತ್ತು. ಕಮ್ಯುನಿಸ್ಟ್ ಸದಸ್ಯರು ರಾಜ್ಯ ಸಭೆಯಲ್ಲಿ ಈ ಯೋಜನೆ ಜಾರಿಗಾಗಿ ಒತ್ತಾಯಿಸಿದ್ದರು. ನಂತರ ಮೀಟರ್‌ಗೇಜ್ ರೈಲು ಆರಂಭಗೊಂಡಿತು.

ಆದರೆ ಈಗ ಸಾಧಾರಣ 10 ವರ್ಷಗಳಿಂದ ಈ ರೈಲು ಸಂಪರ್ಕ ಗೇಜ್ ಪರಿವರ್ತನೆಗಾಗಿ ನಿಲ್ಲಿಸಿದ ರೈಲನ್ನು ಓಡಿಸಲೇ ಇಲ್ಲ. ತುಂಡು ತುಂಡಾಗಿ ಗೇಜ್ ಪರಿವರ್ತನೆಯನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಯಾವಾಗ ಪೂರ್ಣಗೊಳ್ಳುತ್ತದೆ ಎಂಬುದುಕಾಣದು. ಆದರೆ ಮಂಗಳೂರಿನ ಲೋಕಸಭಾ ಸದಸ್ಯ, ಮಾಜಿ ಕೇಂದ್ರಸಚಿವರಾದ ಬಿಜೆಪಿಯ ಧನಂಜಯಕುಮಾರ್ ಈ ಬಜೆಟ್ ಸ್ವಾಗತಾರ್ಹ ಎಂದು ಹೇಳಿಕೆ ನೀಡಿದ್ದಾರೆ.

ರಾಯಚೂರು- ಕೊಪ್ಪಳ ಮಾರ್ಗ ನೆನೆಗುದಿಗೆ ಬಿದ್ದಿರುವ ಇನ್ನೊಂದು ಯೋಜನೆ. ಇದಲ್ಲದೆ, ಮೆಟ್ಟುಪಾಳ್ಯಂ- ಚಾಮರಾಜನಗರ, ಕಡೂರು-ಚಿಕ್ಕಮಗಳೂರು- ಸಕಲೇಶಪುರ, ಬೆಂಗಳೂರು- ಸತ್ಯಮಂಗಲ- ಹೀಗೆ ಹಲವಾರು ಯೋಜನೆಗಳು ಬಾಕಿ ಉಳಿದಿವೆ.

ಜೋಡಿ ಮಾರ್ಗಗಳ ರಚನೆ: ಬೆಂಗಳೂರು (ಯಶವಂತಪುರ)-ತುಮಕೂರು, ಬೆಂಗಳೂರು- ಮೈಸೂರುಗಳ ನಡುವೆ ಜೋಡಿ ಮಾರ್ಗಗಳ ರಚನೆ ತುರ್ತು ಆಗಬೇಕಾಗಿದೆ. ಆದರೆ ಇದಕ್ಕೆ ಸಾಕಷ್ಟು ಹಣ ಬಿಡುಗಡೆ ಮಾಡಿಲ್ಲ. ಇದಲ್ಲದೆ, ರಾಯಚೂರು-ಗುಂತಕಲ್, ಹೊಸಪೇಟೆ-ಗುಂತಕಲ್, ವೈಟ್‌ಫೀಲ್ಡ್- ಬಂಗಾರಪೇಟೆ-ಕುಪ್ಪಂ, ಬೆಂಗಳೂರು- ವೈಟ್‌ಫೀಲ್ಡ್ ಮತ್ತಿತರೆ ಯೋಜನೆಗಳು ಕಾರ್ಯಗತವಾಗಬೇಕಿದೆ. ಇದರಲ್ಲಿ ಬೆಂಗಳೂರು - ವೈಟ್‌ಫೀಲ್ಡ್ ಮಾರ್ಗ ಪೂರ್ಣಗೊಳ್ಳಲು ಬೇಕಾಗುವ ಅಂದಾಜುವೆಚ್ಚ 85 ಕೋಟಿ ರೂ. ಈವರೆಗೆ ಖರ್ಚು ಮಾಡಿರುವುದು 2 ಲಕ್ಷ ರೂ. ಮಾತ್ರ. ಈ ಬಾರಿ ಬಜೆಟ್‌ನಲ್ಲಿ ತೆಗೆದಿರಿಸಿರುವ ಹಣ ಕೇವಲ 1 ಲಕ್ಷ ರೂ.

ಹಾಗಾದರೆ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಕರ್ನಾಟಕದ ಅಭಿವೃದ್ಧಿಗೆ ಗಮನ ನೀಡುತ್ತಿದೆಯೇ? ಖಂಡಿತಾ ಇಲ್ಲ. ರೈಲ್ವೆ ಬಜೆಟ್ ಒಂದು ಉದಾಹರಣೆ ಅಷ್ಟೆ.

ದರ ಇಳಿಕೆ ಯಾರಿಗೆ?: ಸ್ವಾತಂತ್ರ ಭಾರತದಲ್ಲೇ ಪ್ರಥಮ ಬಾರಿಗೆ ರೈಲ್ವೆ ದರಗಳನ್ನು ಇಳಿಸಲಾಗಿದೆ ಎಂದು ಬಿಜೆಪಿಯ ಹಲವಾರು ಮುಖಂಡರು ಬಜೆಟ್‌ನ್ನು ಸ್ವಾಗತಿಸಿದ್ದಾರೆ. ಆದರೆ ದರ ಇಳಿಕೆ ಯಾವ ವರ್ಗಕ್ಕೆ' ಹೆಚ್ಚಾಗಿ ಶ್ರೀಮಂತರು ಬಳಸುವ ಹವಾನಿಯಂತ್ರಿತ ಕೊಠಡಿಗಳಿಗೆ ದರ ಕಡಿಮೆಯಾಗಿದೆ. ವಿಮಾನ ಪ್ರಯಾಣಿಕರಿಗೆ, ಪೈಪೋಟಿಯಿಂದಾಗಿ ವಿಮಾನಯಾನ ದರ ಕುಸಿತಗೊಂಡಿರುವುದರಿಂದ, ರೈಲಿನ ಪ್ರಥಮ ಶ್ರೇಣಿ, ಹವಾನಿಯಂತ್ರಿತ ಕೊಠಡಿಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಕಡಿಮೆಯಾಗಿದೆ. ಆದ್ದರಿಂದ ಈ ದರವನ್ನು ಕಡಿಮೆ ಮಾಡಲಾಗಿದೆಯಷ್ಟೇ ಹೊರತು ಜನರಿಗೆ ಅನುಕೂಲ ಮಾಡಲು ಅಲ್ಲ. ಬಡ, ಮಧ್ಯಮವರ್ಗದ ಜನರು ಬಳಸುವ ದ್ವಿತೀಯ ದರ್ಜೆಯ ಪ್ರಯಾಣ ದರವನ್ನು ಕಡಿಮೆ ಮಾಡಿಲ್ಲ. ಹುಬ್ಬಳ್ಳಿ- ಬೆಂಗಳೂರು ನಡುವೆ ಜನ ಶತಾಬ್ದಿಗೆ ಮಾತ್ರ ದ್ವಿತೀಯ ದರ್ಜೆಯಲ್ಲಿ ಪ್ರಯಾಣಿಸುವವರಿಗೂ ದರ ಕಡಿಮೆ ಮಾಡಲಾಗಿದೆ. ಈ ರೈಲು ಹಗಲು ಹೊತ್ತಿನಲ್ಲಿ ಚಲಿಸುವುದರಿಂದ ಇದರಲ್ಲಿ ಪ್ರಯಾಣಿಕರ ಸಂಖ್ಯೆ ತೀರಾ ಕಡಿಮೆಯಾಗಿದೆ.

ಕಳೆದ ಡಿಸೆಂಬರ್ ವೇಳೆಗೆ ಪ್ರಯಾಣ ದರದಲ್ಲಿ ಶೇ.3 ರಷ್ಟು ಕುಸಿತ ಕಂಡುಬಂದಿದೆ. ಅಂದರೆ ರೈಲ್ವೆಯಲ್ಲಿ ಪ್ರಯಾಣಿಸುತ್ತಿರುವವರ ಒಟ್ಟು ಸಂಖ್ಯೆಯಲ್ಲಿ ಕಡಿಮೆಯಾಗಿದೆ. 'ಬನಿಯ' ಸಂಸ್ಕೃತಿಯ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ವ್ಯಾಪಾರೀ ಧೋರಣೆಯಿಂದ ದರ ಕಡಿಮೆ ಮಾಡಿದ್ದಾರೆಯೇ ಹೊರತು ಜನರ ಅನುಕೂಲಕ್ಕಲ್ಲ. ಇದರಿಂದಾಗಿ 720 ಕೋಟಿ ರೂ. ಆದಾಯ ಕಡಿಮೆ ಆಗಿದೆ ಎಂದು ರೈಲ್ವೆ ಸಚಿವರೇ ಬಜೆಟ್ ಮಂಡಿಸುವಾಗ ಒಪ್ಪಿಕೊಂಡಿದ್ದಾರೆ. ಪ್ರಯಾಣಿಕರ ಸಂಖ್ಯೆ ಕಡಿಮೆ ಆದುದು ಏಕೆ? ಅಪಘಾತದ ಭಯವೇ ಅಥವಾ ಜನರ ಆದಾಯ ಕಡಿಮೆ ಆಗಿದೆಯೇ?

ಯೋಜನಾ ಗಾತ್ರ- ಕಳೆದವರ್ಷ 12,330 ಕೋಟಿ ರೂ. ಇದ್ದುದು ಈ ವರ್ಷ 10,600 ಕೋಟಿ ರೂ.ಗೆ ಇಳಿಸಲಾಗಿದೆ.

- ಬಾಲಕೃಷ್ಣ ಶೆಟ್ಟಿ

ಸಂಸತ್‌ಹಾಲ್‌ನಲ್ಲಿ ಸಾವರ್ಕರ್ ಭಾವಚಿತ್ರ 'ಏನೀ ದುರಂತ! ಎಂತಹ ಅವಮಾನ!'



ವಾಜಪೇಯಿ ಸರ್ಕಾರ ಲಜ್ಜೆಗೆಟ್ಟು ಮುನ್ನಡದಿದೆ ಮತ್ತು ಸಂಸತ್ತಿನ ಸೆಂಟ್ರಲ್ ಹಾಲಿನಲ್ಲಿ ವಿ.ಡಿ. ಸಾವರ್ಕರ್‌ರವರ ಭಾವಚಿತ್ರವನ್ನು ಅನಾವರಣಗೊಳಿಸಿದೆ. ಪ್ರತಿಭಟನಾರ್ಥವಾಗಿ ಇಡೀ ವಿರೋಧ ಪಕ್ಷಗಳು ಕಾರ್ಯಕ್ರಮವನ್ನು ಬಹಿಷ್ಕರಿಸಿದ್ದಾಗಲೇ ಎನ್.ಡಿ.ಎ.ಯಲ್ಲಿರುವ ಬಿಜೆಪಿಯ ಪುಂಗಿದಾಸರು ನಾಚಿಕೆಯಿಲ್ಲದೆ ಇದನ್ನು ಅನುಮೋದಿಸಿದ್ದಾರೆ. ಸಂಸತ್ತಿನ ಕೇಂದ್ರ ಸಭಾಂಗಣದಲ್ಲಿ ಸಾವರ್ಕರ್ ಭಾವಚಿತ್ರವನ್ನು ಏಕೆ ಅನಾವರಣಗೊಳಿಸಬಾರದು ಎಂಬುದಕ್ಕೆ ಬಹಳ ಗಹನವಾದ ಮತ್ತು ಗಟ್ಟಿಯಾದ ಕಾರಣಗಳಿರುವಾಗಲೇ ಬಿಜೆಪಿ - ಆರ್.ಎಸ್.ಎಸ್. ಹೇಳಲು ಹೊರಟಿರುವ ಅಸಮಾನ್ಯ ಸಂದೇಶವನ್ನು ಮರೆಯಬಾರದು.

ಮಹಾತ್ಮಗಾಂಧಿಯವರ ಭಾವಚಿತ್ರಕ್ಕೆ ಎದುರುಬದುರಾಗಿ ಈ ಭಾವಚಿತ್ರವನ್ನಿಡುವುದರ ಮೂಲಕ, ಭಾರತ ರಾಷ್ಟ್ರೀಯತೆಯ ಕಾರ್ಯಮಾಲೆಯನ್ನು ಪುನರ್ ವ್ಯಾಖ್ಯಾನಿಸಲು ಆರ್.ಎಸ್.ಎಸ್./ ಬಿ.ಜೆ.ಪಿ. ನೋಡುತ್ತಿವೆ. ಯಾವುದೇ ಧಾರ್ಮಿಕ ಹೆಸರಿಗೂ ಅಂಟಿಕೊಳ್ಳದೆ ಗಾಂಧಿಯವರು ಭಾರತೀಯ ರಾಷ್ಟ್ರೀಯತೆಗಾಗಿ ನಿಂತಾಗ ಸಾವರ್ಕರ್ ಹಿಂದೂ ರಾಷ್ಟ್ರೀಯತೆಯನ್ನು ಉಗ್ರವಾಗಿ ಪ್ರತಿಪಾದಿಸಿದವರು. ಜಾತ್ಯಾತೀತ ಪ್ರಜಾಪ್ರಭುತ್ವೀ ಭಾರತೀಯ ಗಣತಂತ್ರವನ್ನು 'ಫ್ಯಾಸಿಸ್ಟಿಕ್ ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸಲು ಇರುವ ಸೈದ್ಧಾಂತಿಕ ಯೋಜನೆಯು ಬೆನ್ನಲುಬೆಂದರೆ ಹಿಂದೂ ರಾಷ್ಟ್ರೀಯತೆ ಮಾತ್ರವೇ ಭಾರತೀಯ ರಾಷ್ಟ್ರೀಯತೆಗೆ ಸಮ ಎಂದು ಪ್ರತಿಪಾದಿಸುವುದು.

ಇಂತಹ ಒಂದು ಘಟನೆ ಸಾಧ್ಯವಾದುದ್ದು ಸ್ವಾತಂತ್ರ್ಯದ 55 ವರ್ಷಗಳ ನಂತರವೇ ಎಂಬುದು ಹೇಳಿಕೊಳ್ಳುವ ವಿಷಯ. ಪ್ರಭುತ್ವದ ಅಧಿಕಾರಗಳನ್ನು ನಿಯಂತ್ರಿಸಲು ಒಮ್ಮೆ ಅವಕಾಶ ಸಿಕ್ಕಾಗ ಯೋಜಿತವಾಗಿ ಜಾತ್ಯಾತೀತ ಪ್ರಜಾಪ್ರಭುತ್ವದ ತಳಹದಿ ಮತ್ತು ಸಂರಚನೆಯನ್ನು ನಾಶಪಡಿಸಿ ಭಾರತವನ್ನು ಒಂದು ಫ್ಯಾಸಿಸ್ಟ್ ರಾಜ್ಯವಾಗಿ ಪರಿವರ್ತಿಸುವ ಯಾವ ಅವಕಾಶವನ್ನು ಆರ್.ಎಸ್.ಎಸ್., ಬಿಜೆಪಿ ಬಿಟ್ಟಿಲ್ಲ.

ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಮೊದಲು ಪ್ರತಿಪಾದಿಸಿದವನ್ನು ಸಾವರ್ಕರ್ ಎಂಬುದನ್ನು ಕಡ್ಡಾಯವಾಗಿ ನೆನಪಿಸಿಕೊಳ್ಳಬೇಕು. ದೇಶವನ್ನು ವಿಭಜಿಸಿದ ಮತ್ತು ಅದರೊಡನೆ ರಕ್ತಪಾತಕ್ಕೆ ಕಾರಣವಾದ, ದುರಂತ ಮತ್ತು ಅಶಕ್ತತೆಯು ಇಂದಿಗೂ ಮುಂದುವರೆಯುವಂತೆ ಮಾಡಿದ ಮಹಮ್ಮದ್ ಆಲಿ ಜಿನ್ನಾ ಮತ್ತು ಅವರ ಮುಸ್ಲಿಂ ಲೀಗ್ ಇದನ್ನು ಪ್ರತಿಪಾದಿಸಿದ ಎರಡು ತಿಂಗಳ ಮೊದಲೇ ಸಾವರ್ಕರ್ ದ್ವಿರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸಿದ.

ಸಾವರ್ಕರ್ 1923ರಲ್ಲಿ ಹಿಂದುತ್ವ ಎಂಬ ಘೋಷಣೆಯನ್ನು ರೂಪಿಸಿದ ಹೀಗೆ ಮಾಡುವಾಗ ಹಿಂದುತ್ವವನ್ನು ಹಿಂದೂ ಧರ್ಮದ ಜೊತೆ ಸಮನಾಂತರವಾಗಿ ನೋಡಲು ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ. ರಾಜಕೀಯ ಅಧಿಕಾರವನ್ನು ಹಿಡಿಯಲು ಜನರ ಧಾರ್ಮಿಕ ಭಾವನೆಗಳನ್ನು ದುರುಪಯೋಗ ಪಡಿಸಿಕೊಳ್ಳುವ ಉದ್ದೇಶ ಹೊಂದಿದ ಸ್ಪಷ್ಟ ರಾಜಕೀಯ ಘೋಷಣೆಯಿದು. ಇವತ್ತೂ ಕೂಡ ಕೆಲವು ಒಳ್ಳೆಯ ಜನರು 'ನೈಜ ಹಿಂದುತ್ವದ' ವ್ಯಾಖ್ಯಾನ ನೀಡಲು ಅನಾಯಾಸ ಚರ್ಚೆಗಳಲ್ಲಿ ತೊಡಗಿದ್ದಾರೆ. ಅದು ವಿವೇಕಾನಂದರ ಹಿಂದುತ್ವವೊ ಅಥವಾ ಆರ್.ಎಸ್.ಎಸ್.ನ ಹಿಂದುತ್ವವೊ. ಎರಡು ಅಥವಾ ಹೆಚ್ಚು ಹಿಂದುತ್ವಗಳಿಲ್ಲ. ಒಂದು ರಾಜಕೀಯ ಘೋಷಣೆಯು ವಿವಿದ ಅಭಿಪ್ರಾಯಗಳನ್ನು ಪಡೆಯಲು, ನೀಡಲು ಸಾಧ್ಯವಿಲ್ಲ. ಹಿಂದೂ ಧರ್ಮದ ಜತೆ ಸಾವರ್ಕರ್ ಕಂಡುಹಿಡಿದ ಹಿಂದುತ್ವವು ಏನೂ ಮಾಡುವುದು ಉಳಿದಿಲ್ಲ.

ಹಿಂದುತ್ವದ ರಾಜಕೀಯ ಸೈದ್ಧಾಂತಿಕ ರಚನೆಯು ನಮ್ಮ ದೇಶದ ರಾಜಕೀಯಕ್ಕೆ ಮಾಡುತ್ತಿರುವ ಅಪಾರ ಹಾನಿಯು ನಮ್ಮ ಕಣ್ಮುಂದೆಯೇ ಇದೆ. ಸಾವರ್ಕರ್‌ರವರು ಬ್ರಿಟೀಷರಿಂದ ದಯೆ ಬೇಡಿಕೊಂಡರು ಮತ್ತು ಇದರ ಆಧಾರದ ಮೇಲೆ ಅಂಡಮಾನ್ ಜೈಲಿನಿಂದ ಬಿಡುಗಡೆಹೊಂದಿದ್ದು ಅಂತ್ಯಂತ ನಾಚಿಕೆಗೇಡಿನ ಅಂಶ. ಬ್ರಿಟಿಷರಿಗೆ ಬರೆದ ಪತ್ರದ ಅಗತ್ಯ ಭಾಗಗಳನ್ನು ಈ ಲೇಖನದಲ್ಲಿ ಪ್ರಕಟಿಸಲಾಗಿದೆ. ಬ್ರಿಟೀಷ್ ಸಾಮ್ರಾಜ್ಯಶಾಹಿಗಳಿಂದ ದಯೆ ಅಥವಾ ಕ್ಷಮೆಯನ್ನು ಕೋರದೆ ನೂರಾರು ದೇಶಪ್ರೇಮಿಗಳು ಅಂಡಮಾನಿನ ಜೈಲುಗಳಲ್ಲಿ ಸೊರಗುತ್ತಿದ್ದ ಸಮಯವದು.

ಭಗತ್‌ಸಿಂಗ್‌ರೊಡನೆ ಸಾವರ್ಕರನ ಭಿನ್ನಾಭಿಪ್ರಾಯ ಸಾವರ್ಕರ್‌ರ ಎಲ್ಲಾ ಬಣ್ಣಗಳನ್ನು ಬಯಲುಮಾಡುವುದಿಲ್ಲವಾದರೂ ಸಾಕಷ್ಟು ಬಯಲಾಗುತ್ತದೆ. ಭಗತ್ ಸಿಂಗ್‌ರ ಪರ ತಂದೆ ತನ್ನಮಗನಿಗೆ ದಯೆ ತೋರಬೇಕೆಂದು ಬ್ರಿಟೀಷರಿಗೆ ಪತ್ರಬರೆದರೂ ತನ್ನ ತಂದೆಯ ಮನವಿಯನ್ನು ವಿನಮ್ರವಾಗಿ ನಿರಾಕರಿಸಿದ ಭಗತ್‌ಸಿಂಗ್, ಭಾರತ ಸ್ವಾತಂತ್ರ್ಯಕ್ಕಾಗಿ ಯಾರ ವಿರುದ್ಧ ಹೋರಾಟ ಮಾಡುತ್ತಿದ್ದಾರೋ ಅವರಿಂದ ಯಾವ ದೇಶಪ್ರೇಮಿಯೂ ದಯೆಯನ್ನ ಕೇಳುವುದಿಲ್ಲ ಎಂದು ಬ್ರಿಟೀಷರಿಗೆ ಹೇಳಿದರು.

ಸಾವರ್ಕರ್‌ರವರಿಗೆ ಮರಣೋತ್ತರವಾಗಿ ಭಾರತದ ರತ್ನ ಪ್ರಶಸ್ತಿ ನೀಡಬೇಕೆಂದು ಅಂದಿನ ರಾಷ್ಟ್ರಪತಿ ಕೆ.ಆರ್. ನಾರಾಯಣ್‌ರವರನ್ನು ಪ್ರಧಾನಿ ವಾಜಪೇಯಿ ಕೇಳಿದ್ದರು ಎಂದು ಸುದ್ದಿಗಳು ಸೂಚಿಸುತ್ತಿವೆ. ಇದುವರೆಗೆ ಆ ಪ್ರಸ್ತಾವನೆ ಕಾರ್ಯರೂಪಕ್ಕೆ ಬರದಿರುವುದು ಇಂತಹ ವಿಷಯಗಳಲ್ಲಿ ರಾಷ್ಟ್ರಪತಿಯವರು ವಹಿಸಬಹುದಾದ ಪಾತ್ರದ ಬಗ್ಗೆ ಸಲಹೆ ನೀಡುತ್ತವೆ. ತದ್ವಿರುದ್ಧವಾಗಿ, ಇಡೀ ವಿರೋಧ ಪಕ್ಷಗಳು ವಿರೋಧ ವ್ಯಕ್ತಪಡಿಸುತ್ತಿದ್ದಾಗ ರಾಷ್ಟ್ರಪತಿ ಕಲಾಂರವರು ಸರ್ಕಾರದ ಬೆಂಬಲಕ್ಕೆ ನಿಂತರು. ಅಧ್ಯಕ್ಷೀಯ ಚುನಾವಣೆಯ ಸಂದರ್ಭದಲ್ಲಿ ಎಡಪಂಥೀಯರು ವ್ಯಕ್ತಪಡಿಸಿದ ಅನಿಸಿಕೆಗಳು ನಿಜವಾಗಿರುವುದು ದುರಂತವಲ್ಲದಿದ್ದರೆ, ದುರಾದೃಷ್ಟವಂತೂ ಹೌದು.

ಪ್ರಬಲ ಹೋರಾಟಕ್ಕೆ ಮುನ್ನಡೆಯಿರಿ.

ಗೋಹತ್ಯೆ, ದನದ ಮಾಂಸ ಸೇವನೆ, ಮಂದಿರ ನಿರ್ಮಾಣ, ತ್ರಿಶೂಲ ಹಂಚಿಕೆ, ಹುಸಿ ಜಾತ್ಯಾತೀತವಾದ ಇವುಗಳ ಬಗ್ಗೆ ಚರ್ಚೆ ನಡೆಸಲು ಕೋಮುವಾದಿ ಶಕ್ತಿಗಳು ದೇಶವನ್ನು ಒತ್ತಾಯಿಸುತ್ತಿರುವಾಗಲೇ ಸಾರ್ವಜನಿಕ ಆಸ್ತಿಯನ್ನು ಲೂಟಿ ಮಾಡುತ್ತಿರುವ ಮತ್ತು ನಮ್ಮ ಆರ್ಥಿಕತೆಗೆ ಚಟ್ಟಕಟ್ಟುತ್ತಿರುವುದರ ವಿರುದ್ಧ ಲಕ್ಷಾಂತರ ಕೈಗಾರಿಕಾ ಕಾರ್ಮಿಕರು ಪಾರ್ಲಿಮೆಂಟ್ ಚಲೋ ನಡೆಸಿದ್ದಾರೆ.

ನಮ್ಮ ದೇಶದ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯವನ್ನುಳಿಸಲು ಬೀದಿಗಳಿದ ಇವರು ನಿಜವಾದ ದೇಶಪ್ರೇಮಿಗಳು. ಈ ಸ್ಫೂರ್ತಿದಾಯಕ ಭಾಗವಹಿಸುವಿಕೆಯು ವಾಜಪೇಯಿ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಗಳ ವಿರುದ್ಧ ಹೆಚ್ಚುತ್ತಿರುವ ಜನರ ಅಸಂತೃಪ್ತಿಯ ಸೂಚನೆಯಾಗಿದೆ. ಜನರ ಅತೃಪ್ತಿಯ ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಿರುವ ಆರ್.ಎಸ್.ಎಸ್. ನೇತೃತ್ವದ ಖಾವಿ ಪಡೆಯ ತಂತ್ರಕ್ಕೆ ಜನರು ಬಲಿಯಾಗುವುದಿಲ್ಲ ಎನ್ನುವುದನ್ನು ಇದು ತೋರಿಸಿದೆ.

ಮುಂದಿನ ದಿನಗಳಲ್ಲಿ ಈ ಹೋರಾಟಗಳು ಮತ್ತಷ್ಟು ತೀವ್ರಗೊಳ್ಳಲಿವೆ.

ಕೇಂದ್ರ ಬಜೆಟ್-ಜನರಜೀವನದ ಮೇಲೆ ಇನ್ನೊಂದು ಧಾಳಿ

2003-04 ರ ಸಾಲಿಗೆ ಸಾಮಾನ್ಯ ಬಜೆಟನ್ನು ಕೇಂದ್ರ ಸರ್ಕಾರ ಮಂಡಿಸಿದೆ. ಬಜೆಟ್‌ನಲ್ಲಿ ಪ್ರಸ್ತಾಪಿಸಲಾದ ಪ್ರತಿ ಅಂಶಗಳು ಜನಸಾಮಾನ್ಯರ ಬದುಕಿನ ಮೇಲೆ ನಡೆಸಿದ ಧಾಳಿಯಾಗಿದೆ. ಈ ಬಜೆಟ್ ಕುರಿತ ತಕ್ಷಣದ ಪ್ರತಿಕ್ರಿಯೆ ಇಲ್ಲಿದೆ.

ಕೇಂದ್ರ ಸರಕಾರದ ಸಾಮ್ರಾಜ್ಯಶಾಹಿ ಪರನೀತಿ ಈ ಬಾರಿಯ ಬಜೆಟ್‌ನಲ್ಲಿ ಇನ್ನೊಮ್ಮೆ ವ್ಯಕ್ತವಾಗಿದೆ. ಹಿಂದಿನ ಬಜೆಟ್‌ಗಳಂತೆಯೂ, ಇದು ಶ್ರೀಮಂತರ ಪರವಾಗಿದ್ದು, ಬಡಜನರ ವಿರೋಧಿಯಾಗಿದೆ. ಉದ್ಯೋಗಾವಕಾಶಗಳು ಕುಸಿತಗೊಳ್ಳುತ್ತಿರುವ ಹಾಗೂ ಬರವೂ ಸೇರಿದಂತೆ ಕೃಷಿ ಕ್ಷೇತ್ರವು ಬಿಕ್ಕಟ್ಟನ್ನು ಎದುರಿಸುತ್ತಿರುವ ಇಂದಿನ ಸಂದರ್ಭದಲ್ಲಿ, ಈ ಎರಡು ಭೀಕರ ಸಮಸ್ಯೆಗಳನ್ನು ಎದುರಿಸುವ ಕುರಿತು ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪವಿಲ್ಲ.

ಖಾಸಗಿ ಬ್ಯಾಂಕ್‌ಗಳ ಶೇರುಗಳಲ್ಲಿ ಶೇ.74 ರಷ್ಟು ವಿದೇಶಿಯರು ತೊಡಗಿಸಬಹುದಾಗಿದ್ದು, ನಂತರ ಆ ಬ್ಯಾಂಕುಗಳ ರಾಷ್ಟ್ರೀಕೃತ ಬ್ಯಾಂಕುಗಳೊಂದಿಗೆ 'ಮರ್ಜ್' ಆಗುವ ಅವಕಾಶವನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ, ಅಂದರೆ ಕ್ರಮೇಣ ಭಾರತೀಯ ಬ್ಯಾಂಕುಗಳು ವಿದೇಶಿಯರ ಕೈಪಾಲಾಗುವ ಸಂಭವ.

ಬೆಲೆ ಕುಸಿತದಿಂದ ತತ್ತರಿಸುತ್ತಿರುವ ರೈತಾಪಿ ವರ್ಗಕ್ಕೆ ಯಾವುದೇ ಪರಿಹಾರವನ್ನು ಘೋಷಿಸದ ಬಜೆಟ್, ರಸಗೊಬ್ಬರದ ಬೆಲೆಯನ್ನು ಹೆಚ್ಚಿಸಿ, ಗಾಯದ ಮೇಲೆ ಬರೆ ಎಳೆದಿದೆ. ಕೃಷಿ ಸಾಲದ ಮೇಲೆ ಬಡ್ಡಿದರವನ್ನು ಕಡಿಮೆ ಮಾಡಲಾಗಿದೆ ಎಂಬಂತೆ ಬಜೆಟ್‌ನಲ್ಲಿ ಹೇಳಲಾಗಿದೆ. ಅಂದರೆ, ಬ್ಯಾಂಕು ದರ (ಪಿ.ಎಲ್.ಆರ್) ದ ಮೇಲೆ ಶೇ.2 ಮಾತ್ರ ಬಡ್ಡಿ ವಿಧಿಸುವ ಮೂಲಕ ಕೃಷಿ ಸಾಲದ ಮೇಲೆ ಬಡ್ಡಿದರ ಕಡಿಮೆ ಮಾಡಲಾಗಿದೆಎಂದು ಹೇಳಲಾಗುತ್ತಿದೆ. ಆದರೆ ಖಾಸಗೀ ಮತ್ತು ವಿದೇಶಿ ಬ್ಯಾಂಕುಗಳಿಗೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಕೃಷಿ ಸಾಲದ ನೀಡಿಕೆ ಕಡಿಮೆಯಾಗುತ್ತಿರುವಾಗ ಬಡ್ಡಿ ದರ ಇಳಿಕೆ ಕೇವಲ ನೆಪ ಮಾತ್ರ.

ಸಂಸತ್ತಿನಲ್ಲಿ ಮಂಡಿಸಿದ ಆರ್ಥಿಕ ಸಮೀಕ್ಷೆಯ ಪ್ರಕಾರವೇ ಕೃಷಿ ಕಾರ್ಮಿಕರ ಉದ್ಯೋಗಾವಕಾಶ ಮತ್ತು ಜೀವನ ಮಟ್ಟ ಕುಸಿತಗೊಂಡಿದೆ. ಆದರೆ ಅದಕ್ಕೆ ಯಾವುದೇ ಪರಿಹಾರವನ್ನಾಗಲೀ ಬಡಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ, ಉದ್ಯೋಗವನ್ನು ವಿಸ್ತರಿಸುವ ಯೋಜನೆಗಳನ್ನು ಬಜೆಟ್ ಸೂಚಿಸಿಲ್ಲ.

ಆದ್ದರಿಂದ ಈ ಬಜೆಟ್ ಬಡತನವನ್ನು ಕಡಿಮೆ ಮಾಡುವ ಬದಲಾಗಿ ಹೆಚ್ಚಿಸುತ್ತದೆ. ಅಂತ್ಯೋದಯಕ್ಕಾಗಿ 507 ಕೋಟಿ ರೂ ಎಂಬುದು ಸಮುದ್ರಕ್ಕೆ ಬೊಗಸೆ ನೀರು ಬಿಟ್ಟಷ್ಟೆ.

ಎಲ್ಲರಿಗೂ ಆರೋಗ್ಯ ಸೌಲಭ್ಯವನ್ನು ನೀಡುವ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೊಳಿಸಿರುವುದಾಗಿ ಹಣಕಾಸು ಸಚಿವರು ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ. ಆದರೆ ಇದು ಸತ್ಯಕ್ಕೆ ದೂರವಾದ ಮಾತು. ಈ ಯೋಜನೆಯ ಪ್ರಕಾರ ಬಡವರು ನಿಯತಕಾಲಿಕವಾಗಿ ಪ್ರಿಮಿಯಮ್ ಕಟ್ಟುತ್ತಿರಬೇಕು. ಹಾಗೆ ಮಾಡಿದರೆ ಮಾತ್ರ ಅವರ ಒಟ್ಟು ಖರ್ಚಿನ ಒಂದು ಭಾಗ ವಿಮೆಯ ರೂಪದಲ್ಲಿ ಸಿಗುತ್ತದೆ. ಆರೋಗ್ಯ ವಿಮಾ ಯೋಜನೆಯಿಂದಾಗಿ ಸಾರ್ವಜನಿಕ ಆರೋಗ್ಯ ಸೇವೆ ಕುಂಠಿತಗೊಂಡು, ಗ್ರಾಮೀಣ ಪ್ರದೇಶದಲ್ಲೂ ಖಾಸಗಿ ವೈದ್ಯಕೀಯ ಸೌಲಭ್ಯಕ್ಕೆ ಮೊರೆ ಹೋಗುವಂತೆ ಆಗುತ್ತದೆ.

ಇದೊಂದು 'ಅಭಿವೃದ್ಧಿ ಪರ' ಬಜೆಟ್ ಎಂದು ಹಣಕಾಸು ಸಚಿವರು ಹೇಳಿದ್ದಾರೆ. ಹಾಗೆ ನೋಡಿದರೆ, ಕಳೆದ ವರ್ಷಕ್ಕೆ ಹೋಲಿಸಿ ನೋಡಿದರೆ ಬಜೆಟ್‌ನಲ್ಲಿ ಆಗಿರುವ ಹೆಚ್ಚಳ ಕೇವಲ ಶೆ.6 ಮಾತ್ರ. ಹಣದುಬ್ಬರ (inflationa)ವನ್ನು ಗಮನಿಸಿದರೆ, ನಿಜವಾದ ಹೆಚ್ಚಳ ಇಲ್ಲವೇ ಇಲ್ಲ. ಮೂಲಭೂತ ಸೌಲಭ್ಯಗಳಿಗಾಗಿ 60,000 ಕೋಟಿ ರೂ. ಖರ್ಚು ಮಾಡಲಾಗುವುದೆಂದು 'ಡಂಗುರ' ಬಾರಿಸಲಾಗಿದೆ. ಆದರೆ ಬಜೆಟ್‌ನಲ್ಲಿ ನೀಡಿದ್ದು 2000 ಕೋಟಿ ರೂ. ಮಾತ್ರ. ಇನ್ನುಳಿದ ಹಣವನ್ನು

ಪುಟ 10 ಕ್ಕೆ

ಕೋಮುದ್ವೇಷದ, ದೇಶ ಮಹಾ ದೇಶ ಪ್ರೇಮಿಗಳು, ಸಮಾಜ ಸೇವಕರು ಎಂಬ ಸೋಗುಹಾಕಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ವಿಭಜಕತನದಂತಹ ತನ್ನ ಕರಾಳ ಕೃತ್ಯಗಳನ್ನು ನಡೆಸುತ್ತಿರುವ ಹರಿದು ಬರುತ್ತಿರುವುದು ಪತ್ತೆಯಾಗಿದೆ. ಅದಕ್ಕೆಂದೇ ಗೆ ಅಮೇರಿಕಾದಿಂದ ಲಕ್ಷಾಂತರ ಡಾಲರು ಹಣ ಪ್ರತಿವರ್ಷ ಹರಿದು ಬರುತ್ತಿರುವುದು ಪತ್ತೆಯಾಗಿದೆ. ಅದಕ್ಕೆಂದೇ ಹಣ ನೀಡುವ ದಾನಿಗಳಿಗೆ ಮತ್ತು ಕಾನೂನಿನ ಕಣ್ಣಿಗೆ ಮಣ್ಣೆರೆಚುವಂತೆ ಸಂಸ್ಥೆಗಳನ್ನು ಹುಟ್ಟುಹಾಕಿ ಆ ಮೂಲಕ ಈ ಹಣವನ್ನು ಈ ದುರುದ್ದೇಶಗಳಿಗೆ ಬಳಸಲಾಗುತ್ತಿದೆ. ಗುಜರಾತನಂತಹ ಹತ್ಯಾಕಾಂಡಕ್ಕೆ ಈ ಹಣವನ್ನು ಬಳಸಿದ್ದು ಬೆಳಕಿಗೆ ಬಂದಿದೆ. ಸಂಘ ಪರಿವಾರದ ಈ ವಿಷಜಾಲ ದೇಶಾದ್ಯಂತ ವಿಸ್ತರಿಸುವಲ್ಲಿ, ಸಾವಿರಾರು ಸಂಘ ಸಂಸ್ಥೆಗಳಲ್ಲಿ ಲಕ್ಷಾಂತರ ಕಾರ್ಯಕರ್ತರನ್ನು ತೊಡಗಿಸುವಲ್ಲಿ ಈ ಅಪಾರ ಹಣವನ್ನು ಬಳಸುತ್ತಿರುವ ಭಯಾನಕ ಸಂಗತಿಗಳನ್ನು ಇಲ್ಲಿ ಲೇಖಕರು ಬಿಚ್ಚಿಟ್ಟಿದ್ದಾರೆ. ಈ ಖೋಟಾ ದೇಶಪ್ರೇಮಿಗಳು ಭಾರತವನ್ನು ಅಮೆರಿಕಾದ ಚರಣಗಳಿಗೆ ಅರ್ಪಿಸುತ್ತಿರುವುದೇಕೆ? ಹಾಗೂ ಇವರ ಹಿಂದುತ್ವದ ಮತೀಯವಾದಿ ಸಿದ್ಧಾಂತ ಸಾಮ್ರಾಜ್ಯಶಾಹಿಗಳಿಗೆ ಯಾಕಿಷ್ಟು ಹತ್ತಿರ ಹಾಗೂ ಪ್ರಿಯ ಎಂಬದು ಅರ್ಥವಾದೀತು! ಈ ವಿಶಿಷ್ಟ ಲೇಖನ ಓದಿ.



ದ್ವೇಷಕ್ಕೆ ಡಾಲ

ನಿತ್ಯಾನಂದ ಸ್ವಾಮಿ

ಭಾರತದಲ್ಲಿ, ಕಳೆದ ಒಂದು ದಶಕದಲ್ಲಿ ಮತೀಯ ಧ್ರುವೀಕರಣ ತೀವ್ರಗೊಂಡಿದೆ. ಹಿಂದುತ್ವದ ಶಕ್ತಿಗಳು ಇದರ ಮುಂಚೂಣಿಯಲ್ಲಿವೆ. ಇದರ ಪರಿಣಾಮವಾಗಿ ಬಹುಸಂಖ್ಯಾತ ಮತೀಯ ವಾದವನ್ನು ಪ್ರತಿನಿಧಿಸುವ ಶಕ್ತಿಗಳ ನೇತೃತ್ವದ ಸರ್ಕಾರವೊಂದು ಕೇಂದ್ರದಲ್ಲಿ ಅಧಿಕಾರಕ್ಕೆ ಬರುವಂತಾಗಿದೆ. ಪರಿಸ್ಥಿತಿಯ ಲಾಭ ಪಡೆದು ಮತೀಯವಾದದ ಪ್ರವರ್ತಕರು ಸರ್ಕಾರ ಎಂಬ ಯಂತ್ರದ. ಆಯಕಟ್ಟಿನ ಸ್ಥಾನಗಳನ್ನು ಆಕ್ರಮಿಸಿಕೊಂಡಿದ್ದಾರೆ. ಅವರ ಚಟುವಟಿಕೆಗಳು ನಗರಗಳಿಗೆ ಮಾತ್ರ ಸೀಮಿತವಾಗಿ ಉಳಿದಿಲ್ಲ. ಕುಗ್ರಾಮಗಳಿಗೂ ತಲುಪುವ, ಆದಿವಾಸಿ ಅರಣ್ಯವಾಸಿಗಳಿಗೂ ಮುಟ್ಟುವ ಸಂಘಟನಾ ಜಾಲವನ್ನು ರೂಪಿಸಿಕೊಂಡಿದ್ದಾರೆ. ಹಿಂದುಳಿದ ಸಮುದಾಯಗಳಲ್ಲಿ ಮತಾಂಧತೆಯನ್ನು ಕೆರಳಿಸಿ ಅವರ ತೋಳ್ಬಲವನ್ನು ಬಳಸಿಕೊಳ್ಳಲಾಗುತ್ತದೆ. ವಿವಿಧ ಜನವಿಭಾಗಗಳನ್ನು ತಲುಪಲು ವಿವಿಧ ಸಂಘ ಸಂಸ್ಥೆಗಳನ್ನು ಹುಟ್ಟುಹಾಕಲಾಗಿದೆ ಅಲ್ಲದೆ ಯುವಕರನ್ನು ದೊಡ್ಡ ಸಂಖ್ಯೆಯಲ್ಲಿ ರಿಕ್ರೂಟ್ ಮಾಡಿ, ಅವರಿಗೆ ತರಬೇತಿ ಕೊಟ್ಟು ಬೇರೆ ಬೇರೆ ಪ್ರದೇಶಗಳಿಗೆ ಕಳುಹಿಸಿ ಗಲಭೆಗಳನ್ನು ಹುಟ್ಟು ಹಾಕಲು ಅವರನ್ನು ಬಳಸುವ ಕಾರ್ಯ ತುಂಬ ಯೋಜನಾಬದ್ಧವಾಗಿ ನಡೆಯುತ್ತಿದೆ.

ಈ ಕೆಲಸ ಎಲ್ಲಾ ರಾಜ್ಯಗಳಲ್ಲಿ ನಡೆದಿದೆ. ಇವೆಲ್ಲವುದರ ಹಿಂದೆ ಹಣದ ಹೊಳೆಯೇ ಹರಿಯುತ್ತಿದೆ. 'ಗುಜರಾತ್‌ನಲ್ಲಾದ ಡಾಲರ್ ಮಳೆ ಒಳ್ಳೆಯ ಬೆಳೆಯನ್ನು ನೀಡಿದೆ' ಎಂಬ ತೀರ್ಮಾನಕ್ಕೆ ಬಂದಿರುವ ಇವರು ಗುಜರಾತ್ ಪ್ರಯೋಗವನ್ನು ದೇಶದ ಬೇರೆ ಭಾಗಗಳಿಗೆ ವಿಸ್ತರಿಸಲು ಸಜ್ಜಾಗಿದ್ದಾರೆ. ಇವರ ಇಷ್ಟೊಂದು ವ್ಯಾಪಕವಾದ ಕಾರ್ಯಯೋಜನೆಗಳಿಗೆ ಹಣ ಎಲ್ಲಿಂದ ಬರುತ್ತದೆ? ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಮತ್ತು ಅದರ ಪರಿವಾರಕ್ಕೆ ಅಮೇರಿಕದಿಂದ ಪ್ರತೀ ವರ್ಷ ಮಿಲಿಯಗಟ್ಟಲೇ ಡಾಲರುಗಳು ರವಾನೆಯಾಗುತ್ತಿವೆ ಎಂಬುದನ್ನು ಇತ್ತೀಚಿಗೆ ಅಧ್ಯಯನ ಸಂಸ್ಥೆಯೊಂದು ಬಯಲು ಮಾಡಿದೆ. "ದ್ವೇಷಕ್ಕೆ ನೆರವು ನಿಲ್ಲಿಸಿ" (stop funding hate) ಎಂಬ ನಾಮಾಂಕಿತವನ್ನು ಹೊಂದಿರುವ ಈ ಸಂಸ್ಥೆಯು ಖ್ಯಾತ ವಿದ್ವಾಂಸರನ್ನು ಮತ್ತು ಸಂಶೋಧಕರನ್ನು ಒಳಗೊಂಡಿದೆ. ಇವರು ಅಮೇರಿಕಾದಲ್ಲಿ ಸಂಘಪರಿವಾರಕ್ಕಾಗಿ ಹಣ ಸಂಗ್ರಹಿಸಲು 1989 ರಲ್ಲಿ ಸ್ಥಾಪನೆಯಾದ "ಭಾರತ ಅಭಿವೃದ್ಧಿ ಮತ್ತು ಪರಿಹಾರ ನಿಧಿ" ಎಂಬ ಸಂಘಟನೆಯ ಚಟುವಟಿಕೆಗಳನ್ನು ಪತ್ತೆಹಚ್ಚಿದ್ದಾರೆ. (Indian development and relief fund) ಇದು ಪರಿಹಾರ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಸಂಗ್ರಹಿಸುವ ಹಣವನ್ನು ಭಾರತದಾದ್ಯಂತ ಆರ್‌ಎಸ್‌ಎಸ್ ತನ್ನ ಚಟುವಟಿಕೆಗಳಿಗಾಗಿ ವಿನಿಯೋಗಿಸುತ್ತದೆ.

2000 ಇಸ್ವಿಯಲ್ಲಿ, ಸುಮಾರು 17 ಲಕ್ಷ ಡಾಲರುಗಳನ್ನು ಆರ್‌ಎಸ್‌ಎಸ್ ನಡೆಸುತ್ತಿರುವ, ಅಲ್ಪಸಂಖ್ಯಾತರ ಮೇಲಿನ ಹಿಂಸಾಚಾರದೊಂದಿಗೆ ಜೋಡಿಸಲ್ಪಟ್ಟಿರುವ "ವನವಾಸಿ ಕಲ್ಯಾಣ ಆಶ್ರಮ" ದಂತಹ ಸಂಘಟನೆಗಳಿಗೆ ಸರಬರಾಜು ಮಾಡಲಾಗಿದೆ. 1994 ರಿಂದ 2000ದ ನಡುವೆ ಭಾರತದಾದ್ಯಂತ ಸಂಘಪರಿವಾರದ ವಿವಿಧ ಸಂಘಟನೆಗಳಿಗೆ IDRF ಎಂಬ ಈ ಸಂಸ್ಥೆಯಿಂದ ಸುಮಾರು 4 ಮಿಲಿಯ (40 ಲಕ್ಷ) ಡಾಲರುಗಳು ವಿತರಣೆಯಾಗಿವೆ.

ಅಮೇರಿಕನ್ನರಿಗೆ ಮಂಕು ಬೂದಿ:



ವಿಕಾಸ ಭಾರತ (ಬಿಹಾರ), ಸ್ವಾಮಿ ವಿವೇಕಾನಂದ ಗ್ರಾಮೀಣ ಅಭಿವೃದ್ಧಿ ಸೊಸ್ಯಾಟಿ (ತಮಿಳುನಾಡು), ಸೇವಾ ಭಾರತಿ (ನವದೆಹಲಿ), ಜನ ಸೇವಾ ವಿದ್ಯಾಕೇಂದ್ರ (ಕರ್ನಾಟಕ) ಗಿರಿವಾಸಿ ವನವಾಸಿ ಸೇವಾ ಪ್ರಕಲ್ಪ (ಉತ್ತರ ಪ್ರದೇಶ), ಜಿ.ದೇಶಪಾಂಡೆ ವನವಾಸಿ ವಸತಿಗ್ರಹ (ಮಹಾರಾಷ್ಟ್ರ) ಮೊದಲಾದವುಗಳು IDRF ಮೂಲಕ ದೀರ್ಘಕಾಲದಿಂದ ಹಣ ಪಡೆಯುತ್ತಿರುವ ಇತರ ಸಂಘ ಸಂಸ್ಥೆಗಳು. "ಸೇವಾ ಭಾರತಿ" ಅಂತಹ ಸಂಸ್ಥೆಗಳು ಬಹಿರಂಗವಾಗಿ ಆರ್‌ಎಸ್‌ಎಸ್ ನೊಂದಿಗೆ ಗುರುತಿಸಲ್ಪಡುತ್ತಿದ್ದರೆ 'ಸ್ವಾಮಿ ವಿವೇಕಾನಂದ ಗ್ರಾಮೀಣ ಅಭಿವೃದ್ಧಿ ಸೊಸ್ಯಾಟಿ'ಯಂತಹ ಸಂಸ್ಥೆಗಳು ಆದಿವಾಸಿಗಳ ಅಭಿವೃದ್ಧಿಗಾಗಿ ಶ್ರಮಿಸುವುದಾಗಿ ಹೇಳುತ್ತಾ ಅವರಿಗೆ 'ಹಿಂದೂ ಜೀವನ ವಿಧಾನ'ವನ್ನು ಬೋಧಿಸುವುದಕ್ಕೆ ಹೆಚ್ಚು ಒತ್ತುಕೊಡುತ್ತವೆ. ಒಟ್ಟಾರೆಯಾಗಿ, ಈ ಎಲ್ಲಾ ಸಂಘಟನೆಗಳಿಗೆ ಅವುಗಳು ಸ್ಥಾಪನೆಯಾದ ದಿನದಿಂದ IDRF ಆರ್ಥಿಕ ಬೆಂಬಲ ನೀಡುತ್ತಾ ಬಂದಿದೆ.

"ದ್ವೇಷಕ್ಕೆ ನೆರವು ನಿಲ್ಲಿಸಿ" (SFH) ಸಂಸ್ಥೆಯು "ದ್ವೇಷದ ವಿದೇಶಿ ವಿನಿಮಯ" ಎಂಬ 92 ಪುಟಗಳ ವರದಿಯೊಂದನ್ನು ಇತ್ತೀಚಿನ ನವದೆಹಲಿಯಲ್ಲಿ ಬಿಡುಗಡೆ ಮಾಡಿತು. ಅಮೇರಿಕದ ದೊಡ್ಡ ದೊಡ್ಡ ಕಂಪನಿಗಳಿಂದ ಪ್ರತಿವರ್ಷ ಬಾರೀ ಮೊತ್ತದ ಹಣ IDRF ಮೂಲಕ ಭಾರತದ ಸಂಘ ಪರಿವಾರದ ಸಂಘಟನೆಗಳಿಗೆ ಹರಿದುಬರುತ್ತದೆ. ಈ ಕಂಪನಿಗಳ ತೆರಿಗೆ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸುವ ಮೂಲಕ ಈ ಮಾಹಿತಿಗಳು ಬೆಳಕಿಗೆ ಬಂದಿವೆ. 'ಕಿಸ್ಕೋ ಸಿಸ್ಟಮ್ಸ್' ಎಂಬ ಪ್ರಸಿದ್ಧ ಸಾಫ್ಟ್‌ವೇರ್ ಕಂಪನಿಯು ಒಂದೇ ವರ್ಷದಲ್ಲಿ 70,000 ಡಾಲರುಗಳನ್ನು IDRFಗೆ ನೀಡಿದೆ. ಈ ಮೊತ್ತವು IDRF ತೆರಿಗೆ ದಾಖಲೆಗಳ ಪ್ರಕಾರ 1999 ರಲ್ಲಿ ಅದು ಸಂಗ್ರಹಿಸಿದ ಒಟ್ಟು ಮೊತ್ತದ ಶೇಕಡಾ 5 ರಷ್ಟು ಮಾತ್ರ, ಕಂಪನಿಯ ನೌಕರರಿಂದ ಸಂಗ್ರಹಿಸಿದ ಹಣವನ್ನು ಸೇರಿಸಿದರೆ ಅದು ಒಟ್ಟು 1,33,000 ಡಾಲರುಗಳಾಗುತ್ತವೆ. ಅಂದರೆ ಈ ಮೊತ್ತವು IDRF ಆ ವರ್ಷ ಸಂಗ್ರಹಿಸಿದ ಒಟ್ಟು ಮೊತ್ತದ ಶೇ.10 ರಷ್ಟಾಗುತ್ತದೆ. ಈ ಅಂಕಿ ಅಂಶಗಳಿಂದ ಈ ಒಂದು ಸಂಸ್ಥೆ ಒಂದು ವರ್ಷದಲ್ಲಿ ಎಷ್ಟೊಂದು ಹಣವನ್ನು ಸಂಗ್ರಹಿಸಿ, ಭಾರತದ ಜನತೆಯಲ್ಲಿ ದ್ವೇಷವನ್ನು ಬೆಳೆಯಿಸಲು ರವಾನಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. IDRF ಗೆ ಕಿಸ್ಕೋ ಸಿಸ್ಟಮ್ಸ್ ಮಾತ್ರವಲ್ಲದೆ ಸನ್‌ಕಂಪ್ಯೂಟರ್ಸ್, ಒರೆಕಲ್, ಹೆವ್‌ಲೆಟ್ಸ್ ಪಕಾರ್ಡ್ ಮೊದಲಾದ ಕಂಪನಿಗಳಿಂದ ಹಣ ಹರಿದುಬರುತ್ತದೆ. IDRF ಸಂಗ್ರಹಿಸುವ ಹಣದಲ್ಲಿ ಶೇ.83 ರಷ್ಟು ನೇರವಾಗಿ ಆರ್‌ಎಸ್‌ಎಸ್ / ವಿಹೆಚ್‌ಪಿ/ ಇತರ ಸಂಘ ಪರಿವಾರದ ಸಂಘಟನೆಗಳಿಗೆ ಹೋದರೆ ಕೇವಲ ಶೇ.2 ರಷ್ಟು ಮಾತ್ರ 'ಸೆಕ್ಯೂಲರ್' ಸಂಘಟನೆಗಳಿಗೆ ನೀಡಲಾಗುತ್ತದೆ.

IDRF ಒಂದು ಲಾಭಾಪೇಕ್ಷೆಯಿಲ್ಲದ ಚಾರಿಟೆಬಲ್ ಸಂಸ್ಥೆ ಎಂದು ಹೇಳಿಕೊಂಡು ತೆರಿಗೆ ರಿಯಾಯ್ತಿ ಪಡೆದುಕೊಂಡ ಸಂಸ್ಥೆಯಾಗಿದೆ. ಕಲ್ಯಾಣ ಮತ್ತು ಪಟ್ಟಣದ ಬಡವರ ಕಲ್ಯಾಣ ಕಾರ್ಯಗಳಿಗಾಗಿ ಕೆಲಸ ಮಾಡುವ ಸಂಘಟನೆಗಳಿಗಾಗಿ ಹಣ ಸಂಗ್ರಹ ಮಾಡುವುದು ಅದರ ಉದ್ದೇಶವಾಗಿದೆ ಎಂದು ಅದು ಸ್ವಯಂ ಘೋಷಣೆ ಮಾಡಿಕೊಂಡಿದೆ. ಅದರ ತೆರಿಗೆ ದಾಖಲೆಗಳ ಪ್ರಕಾರ 2000 ಇಸವಿಯಲ್ಲಿ ಅದು 3.8 ಮಿಲಿಯನ್ ಡಾಲರುಗಳನ್ನು ಸಂಗ್ರಹಿಸಿದೆ.

ತನಗೆ ಯಾವ ಪಕ್ಷ, ಪಂಗಡದೊಂದಿಗೆ ಸಂಬಂಧವಿಲ್ಲವೆಂದೂ ತಾನೊಂದು ಸೇವಾ ಸಂಸ್ಥೆಯೊಂದು IDRF ಹೇಳಿಕೊಳ್ಳುತ್ತದೆ. ಇದನ್ನು ನಂಬಿ ಅಮೇರಿಕದ ಅನೇಕ ಕಂಪನಿಗಳ ನೌಕರರಾದ ಅನಿವಾಸಿ ಭಾರತೀಯರು ಈ ಸಂಸ್ಥೆಗೆ ದೇಣಿಗೆಗಳನ್ನು ನೀಡುತ್ತಾರೆ. ಕಂಪನಿಯ ನೌಕರರು ನೀಡುವ ಹಣದ ಮೊತ್ತಕ್ಕೆ ಸಮನಾದ ಮೊತ್ತವನ್ನು ಕಂಪನಿಗಳಿಂದಲೂ ಸಂಗ್ರಹಿಸಲಾಗುತ್ತದೆ. ಹೀಗೆ ಸಂಗ್ರಹವಾಗುತ್ತಿರುವ ಬಾರೀ ಮೊತ್ತದ ಹಣವನ್ನು ಭಾರತದಲ್ಲಿ ಗಲಭೆಗಳನ್ನು ಹುಟ್ಟು ಹಾಕಲು, ಹಿಂದೂ ಧರ್ಮದಿಂದ ಬೇರೆ ಧರ್ಮಗಳಿಗೆ ಮತಾಂತರಗೊಂಡವರನ್ನು ಮರುಮತಾಂತರ ಮಾಡಲು, ಸಮಾಜವನ್ನು ಹಿಂದುತ್ವಕರಣಗೊಳಿಸಲು ಬಳಸಲಾಗುತ್ತಿದ್ದು ಸಮಾಜದ ಎಲ್ಲಾ ವಿಭಾಗಗಳ ಜನತೆಯ ಕಲ್ಯಾಣಕ್ಕಾಗಿ ತಾರತಮ್ಯರಹಿತವಾಗಿ ಬಳಕೆಯಾಗುವುದಿಲ್ಲ ಎಂಬುದು ಪತ್ತೆಯಾಗಿ ಪತ್ರಿಕೆಗಳಲ್ಲಿ ಸುದ್ದಿಯಾದ ನಂತರ ಅಮೇರಿಕದ ಕಂಪನಿಗಳು ಹಣ ನೀಡುವುದನ್ನು ತಡೆಹಿಡಿದಿರುವುದು ವರದಿಯಾಗಿದೆ. ಜನಸೇವೆಗೆಂದು ತಾವು ನೀಡಿದ ಹಣ ದುರುಪಯೋಗವಾಗುತ್ತಿರುವ ಬಗ್ಗೆ ಅಮೇರಿಕದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಈ ಅನಿರೀಕ್ಷಿತ ಬೆಳವಣಿಗೆಯಿಂದ ಭಾರತದಲ್ಲಿ ಆರ್‌ಎಸ್‌ಎಸ್ ಅಂಗಸಂಸ್ಥೆಗಳಿಗೆ ಚಳಿಜ್ವರ ಶುರು ಆಗಿದೆ.

ವಂಚಕರ ಜಾಲ

ಸಂಘ ಪರಿವಾರದೊಂದಿಗೆ ತನಗೆ ಯಾವುದೇ ರೀತಿಯ ಸಂಬಂಧವಿಲ್ಲವೆಂದು IDRF ಮೇಲಿಂದ ಮೇಲೆ ಹೇಳುತ್ತಾ ಬಂದಿದೆ. ಆದರೆ IDRF ಸಂಘಟನೆಯನ್ನು ಮತ್ತು ಅದು ಆರ್ಥಿಕ ನೆರವು ನೀಡುತ್ತಿರುವ ಕಾರ್ಯಕ್ರಮಗಳನ್ನು ಹಾಗೂ ಸಂಘಸಂಸ್ಥೆಗಳನ್ನು ಪರಿಶೀಲಿಸಿದರೆ ಸಂಘ ಪರಿವಾರದ ಜೊತೆಯಲ್ಲಿ ಅದರ ಸಂಬಂಧ ಬಹಳ ಸ್ಪಷ್ಟವಾಗಿ ಗೋಚರಿಸುತ್ತದೆ.

ತೆರಿಗೆ ರಿಯಾಯ್ತಿ ಕೋರಿ IDRF 1989 ರಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ಅದು ಭಾರತದಲ್ಲಿ ನೆರವು ನೀಡುತ್ತಿರುವ ಸಂಘಟನೆಗಳ ಉದಾಹರಣೆಗಳಾಗಿ

...ಘಟನೆಗಳನ್ನು ಹೆಸರಿಸಿದೆ. 1) ವಿಕಾಸ ...ತಿ (ಬಿಹಾರ) 2) ಸ್ವಾಮಿ ವಿವೇಕಾನಂದ ...ಣ ಅಭಿವೃದ್ಧಿ ಸೊಸೈಟಿ (ತಮಿಳುನಾಡು) ...ೇವಾ ಭಾರತಿ (ದೆಹಲಿ) 4) ಜನ ಸೇವಾ ...ಕೇಂದ್ರ (ಕರ್ನಾಟಕ) 5)ವನವಾಸಿ ಕಲ್ಯಾಣ ...ಮ (ಮಧ್ಯಪ್ರದೇಶ) 6) ವನವಾಸಿ ಕಲ್ಯಾಣ ...ಮ (ಗುಜರಾತ್) 7) ವನವಾಸಿ ಕಲ್ಯಾಣ ...ಮ (ನಗರ್ ಹವೇಲಿ) 8) ಗಿರಿವಾಸಿ ವನವಾಸಿ ...ಾ ಪ್ರಕಲ್ಪ (ಉತ್ತರ ಪ್ರದೇಶ) 9) ...ೇಶಪಾಂಡೆ ವನವಾಸಿ ವಸ್ತಿಗ್ರಹ ...ರಾಷ್ಟ್ರ)

ಕೀರ್ತನೆ, ಭಜನೆಗಳನ್ನು ಮಾಡಿಸುವುದು, ಹಿಂದೂ ದೇವಾಲಯಗಳನ್ನು ಕಟ್ಟುವುದು, ಹಿಂದೂ ತೀರ್ಥಕ್ಷೇತ್ರಗಳಿಗೆ ಯಾತ್ರೆಗಳನ್ನು ಸಂಘಟಿಸುವುದು ಇತ್ಯಾದಿ ಅದರ ಕಾರ್ಯಚಟುವಟಿಕೆಗಳಾಗಿವೆ. ಸೇವಾ ಭಾರತಿ ಸ್ವಯಂ ಸೇವಕರು ಬೇರೆ ಬೇರೆ ಜನವಸತಿ ಕೇಂದ್ರಗಳಲ್ಲಿ ರಾಮಲೀಲಾ, ಹೋಳಿ, ಮಕರ ಸಂಕ್ರಾಂತಿ, ಯುಗಾದಿ, ಕೃಷ್ಣಾ ಜನ್ಮಾಷ್ಟಮಿ ಮೊದಲಾದ ಹಬ್ಬಗಳ ಸಂದರ್ಭದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ.

'ಸೇವಾ ಭಾರತಿ' ಹೊಂದಿರುವ ವೆಬ್‌ಸೈಟ್‌ನಲ್ಲಿ ಅವರ ಚಟುವಟಿಕೆಗಳ ಬಗ್ಗೆ

...ಗಳ ರವಾನೆ!

...ಈ ಒಂಬತ್ತೂ ಸಂಘಟನೆಗಳು ಸಂಘ ...ವಾರಕ್ಕೆ ಸೇರಿದ ಸಂಘಟನೆಗಳಾಗಿವೆ. ...ಹರಣೆಗೆ ಆರ್‌ಎಸ್‌ಎಸ್ ಸಾಹಿತ್ಯದಲ್ಲಿ ...ಸ ಭಾರತಿ' ಎಂಬ ಸಂಘಟನೆಯನ್ನು "ಸಂಘ ...ಝರಿಯಿಂದ ಉದ್ಭವಿಸಿ ಹರಿಯುವ ...ರ" ಎಂದು ವರ್ಣಿಸಲಾಗಿದೆ. ಆದಿವಾಸಿಗಳಿಗೆ ... ನೀಡುವುದು ಇದರ ಉದ್ದೇಶವೆಂದು ...ಲಾಗಿದೆ.

...ವಾಮಿ ವಿವೇಕಾನಂದ ಗ್ರಾಮೀಣ ಅಭಿವೃದ್ಧಿ ...ಸೈಟಿ ತಮಿಳುನಾಡಿನಲ್ಲಿ ವಿಶ್ವ ಹಿಂದೂ ...ಷತ್ತಿನ ಅಂಗಸಂಸ್ಥೆಯಾಗಿದೆ. ಆದಿವಾಸಿಗಳ ... ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಅವರ ...ವೆ ಹಿಂದೂ ಆಚಾರಗಳನ್ನು ಹಿಂದೂ ...ಗಳನ್ನು ಆಚರಣೆಗೆ ತರುವ ಪ್ರಯತ್ನವನ್ನು ...ಸಲಾಗುತ್ತದೆ.

...ಈ ಎಲ್ಲಾ ಸಂಘಟನೆಗಳಲ್ಲಿ 'ಸೇವಾ ಭಾರತಿ' ...ಂತ ಪ್ರಮುಖ ಆರ್‌ಎಸ್‌ಎಸ್ ...ಟನೆಯಾಗಿದೆ. ಇದಕ್ಕೆ ದೇಶಾದ್ಯಂತ ಹಲವು ...ೆಗಳಿದ್ದು ಅವು ವಿವಿಧ ರೀತಿಯ ...ುವಟಿಕೆಗಳನ್ನು ನಡೆಸುತ್ತದೆ. 'ಸೇವಾ ...ವಿರುವ ಆದಿವಾಸಿಗಳವರೆಗೂ ವಿಸ್ತರಿಸಿದೆ. ...ದೂ ಧಾರ್ಮಿಕ ಆಚಾರಗಳನ್ನು ಕಲಿಸುವುದು ...ತ್ತು ಆಚರಿಸುವುದು ಹೋಮ, ಹವನ,

ವಿವರವಾದ ಮಾಹಿತಿ ದೊರಕುತ್ತದೆ. ಉದಾಹರಣೆಗೆ ಸುಮತಾಧಾಮ ಬಸ್ತಿಯಲ್ಲಿ ಸೇವಾ ಭಾರತಿ ಮಾಡಿರುವ ಕೆಲಸದ ಬಗ್ಗೆ ವರದಿ ಹೀಗೆ ಹೇಳುತ್ತದೆ. "ಸೇವಾಕಾರ್ಯ ಪ್ರಾರಂಭವಾದ ನಂತರ ಒಂದು ದೇವಸ್ಥಾನ ಅಸ್ತಿತ್ವಕ್ಕೆ ಬಂದಿದೆ. ದೇವಸ್ಥಾನದಲ್ಲಿ ಪ್ರತಿದಿನ ಪೂಜೆ, ಆರತಿ ನಡೆಯುತ್ತಿದೆ. ಇದರಿಂದಾಗಿ ಮನೆಗಳಲ್ಲಿ ಹಿಂದುತ್ವ ಭಾವನೆ ಜಾಗೃತಗೊಂಡಿದೆ. ಇದೆಲ್ಲವೂ ಸೇವಾ ಭಾರತೀಯ ಕೊಡುಗೆಯಾಗಿದೆ".

"ನೈರೇಜ್ ಎಂಬುದು ಆಗ್ರಾ ಹತ್ತಿರದ ಒಂದು ಹಳ್ಳಿ. ಇಲ್ಲಿ ಮೂರರಿಂದ ನಾಲ್ಕು ಸಾವಿರದಷ್ಟು ಜನಸಂಖ್ಯೆ ಇದೆ. ಅನೇಕ ವರ್ಷಗಳಿಂದ ಈ ಹಳ್ಳಿಯಲ್ಲಿ ಹೋಮ ಹವನದಂತಹ ಯಾವುದೇ ಧಾರ್ಮಿಕ ಉತ್ಸವ ನಡೆದಿರಲಿಲ್ಲ. 'ಸೇವಾ ಭಾರತಿ'ಯ ಪ್ರವೇಶದ ನಂತರ ಗ್ರಾಮಸ್ಥರು ಹೋಮವನ್ನು ಏರ್ಪಡಿಸಲು ಮುಂದೆ ಬಂದರಲ್ಲದೆ ದೂರದರ್ಶನದಲ್ಲಿ ಪ್ರಸಾರವಾದ 'ರಾಮಾಯಣ'ದ ಪ್ರದರ್ಶನವನ್ನು ಏರ್ಪಡಿಸಿದರು. ಈಗ ಗ್ರಾಮದಲ್ಲಿ ಧಾರ್ಮಿಕ ಉತ್ಸಾಹ ವ್ಯಾಪಕವಾಗಿ ತುಂಬಿಕೊಂಡಿದೆ.

ವನವಾಸಿ ಕಲ್ಯಾಣ ಆಶ್ರಮ ಎಂಬ ಹೆಸರಿನಲ್ಲಿ ಮಧ್ಯ ಪ್ರದೇಶ, ಗುಜರಾತ್, ಉತ್ತರಪ್ರದೇಶ, ಮಹಾರಾಷ್ಟ್ರ ಮತ್ತು ನಗರ ಹವೇಲಿಯಲ್ಲಿ ಕೆಲಸ ಮಾಡುತ್ತಿರುವ ಸಂಘಟನೆಗಳು ಬುಡಕಟ್ಟು ಜನರ ನಡುವೆ ಕ್ರಿಯಾಶೀಲವಾಗಿರುವ ಸಂಘ ಪರಿವಾರದ ಪ್ರಮುಖ ಸಂಘಟನೆಗಳಾಗಿವೆ. ಬುಡಕಟ್ಟು ಜನರ 'ಕಲ್ಯಾಣ'ಕ್ಕಾಗಿ ಶ್ರಮಿಸುವುದು ತಮ್ಮ ಉದ್ದೇಶವೆಂದು ಇವುಗಳು ಹೇಳಿಕೊಳ್ಳುತ್ತಿದ್ದರೂ ಬುಡಕಟ್ಟು ಜನರ ಹಿಂದೂಕರಣ ಹಾಗೂ ಕ್ರಿಶ್ಚಿಯನ್ ಮಿಶನರಿಗಳ ವಿರುದ್ಧ ದ್ವೇಷದ ಭಾವನೆಗಳನ್ನು ಬಿತ್ತುವುದು ಇವುಗಳ ಉದ್ದೇಶವಾಗಿದೆ.

ಅಷ್ಟ ದುಷ್ಟ 'ಸಹೋದರಿಯರು'

ಐಡಿಆರ್‌ಎಫ್ "ಸಹೋದರಿ ಸಂಘಟನೆಗಳು" ಎಂದು ಕರೆಯುವ ಇನ್ನೂ 8 ಬಗೆಯ ಸಂಘಟನೆಗಳು ಆರ್‌ಎಸ್‌ಎಸ್ ಬಳಗವಾಗಿ ದೇಶದಾದ್ಯಂತ ಕೆಲಸ ಮಾಡುತ್ತಿವೆ. 'ಏಕಲ್ ವಿದ್ಯಾಲಯ ಎಂದು ಕರೆದುಕೊಳ್ಳುವ ಏಕೋಪಾಧ್ಯಾಯ ಶಾಲೆಗಳು ಅವುಗಳಲ್ಲಿ ಒಂದು. ದಟ್ಟ ಅರಣ್ಯಗಳ ನಡುವೆ ವಾಸ ಇರುವ ಬುಡಕಟ್ಟು ಜನಾಂಗಗಳ ವಿದ್ಯಾರ್ಥಿಗಳಿಗೆ ಹಿಂದುತ್ವದ ಸಿದ್ಧಾಂತವನ್ನು ಬೋಧಿಸುವುದು ಇವುಗಳ ಗುರಿಯಾಗಿದೆ. ಬುಡಕಟ್ಟು ಜನಾಂಗಗಳ ಜನರ ನಿರಕ್ಷರತೆಯನ್ನು ಹೋಗಲಾಡಿಸುವುದು ತಮ್ಮ ಉದ್ದೇಶವಾಗಿದೆ ಎಂದು ಹೇಳಿಕೊಳ್ಳುವ ಈ ಶಾಲೆಗಳು ಹಿಂದುತ್ವದ ಶಿಕ್ಷಣವನ್ನು ಪ್ರಸಾರ ಮಾಡುತ್ತಾ ಕ್ರಿಶ್ಚಿಯನ್ ಧರ್ಮಕ್ಕೆ ಈ ಜನ ಮತಾಂತರಗೊಳ್ಳುವುದನ್ನು ತಡೆಯುವ ಹಾಗೂ ಮರುಮತಾಂತರ ಮಾಡುವ ಕಾರ್ಯದಲ್ಲಿ ತೊಡಗಿವೆ. ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳ ವಿಶ್ವ ಹಿಂದೂ ಪರಿಷತ್ ಮೇಲ್ವಿಚಾರಕ ಕಾರ್ಯದರ್ಶಿ ಹೇಳುವಂತೆ ಏಕೋಪಾಧ್ಯಾಯ ಶಾಲೆಗಳಲ್ಲಿ ಮೂರನೇ ತರಗತಿಯವರೆಗೆ 'ಹಿಂದೂ ಜೀವನ ವಿಧಾನ'ವನ್ನು ಕಲಿಸಲಾಗುತ್ತದೆ ಮತ್ತು ವಿದೇಶಿ ಮಿಶನರಿಗಳ ಪ್ರಭಾವದಿಂದ ಬುಡಕಟ್ಟು ಜನರನ್ನು ಪಾರು ಮಾಡಲು ಬುಡಕಟ್ಟು ಜನರ ಕಡೆ ಹೆಚ್ಚು ಗಮನ ನೀಡಲಾಗುತ್ತದೆ. ಈ ಶಾಲೆಗಳಿಗೆ ಐಡಿಆರ್‌ಎಫ್ ಮೂಲಕ ವಿದೇಶಿ ಹಣ ಹರಿದುಬರುವುದರ ಜೊತೆಯಲ್ಲಿ ಭಾರತ ಸರ್ಕಾರದ ಮೂಲಗಳಿಂದಲೂ ಹಣ ಒದಗಿಸಲಾಗುತ್ತದೆ.

'ವಿಕಸನ್ ಫೌಂಡೇಷನ್' ಎಂಬ ಇನ್ನೊಂದು ಸಂಘಟನೆ ದೇಶದೊಳಗೆ ಮತ್ತು ಹೊರಗೆ ಭಾರತೀಯ ಸಂಸ್ಕೃತಿಯನ್ನು(!?) ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ. ಭಾರತೀಯ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಹೆಸರಿನಲ್ಲಿ ಅದು ವೈದಿಕ ಸಂಸ್ಕೃತಿಯನ್ನು ವೈಭವೀಕರಿಸುತ್ತಾ ನಮ್ಮ ದೇಶದ ಬಹುಮುಖಿ ಸಂಸ್ಕೃತಿಯನ್ನು ನಿರಾಕರಿಸುತ್ತದೆ. 'ಮದ್ರಾಸಾ'ಗಳ ಮಾದರಿಯಲ್ಲಿ 'ಗುರುಕುಲ'ಗಳನ್ನು ನಡೆಸುವ ಹೆಸರಿನಲ್ಲಿ ಇದು ದೇಶ ವಿದೇಶಗಳಲ್ಲಿ ಹಣ ಸಂಗ್ರಹ ಮಾಡುತ್ತದೆ. ಯುವಕರಿಗಾಗಿ, ಮುಖ್ಯವಾಗಿ ವಿದೇಶಗಳಲ್ಲಿ ಬೆಳೆದ ಭಾರತೀಯ ಮೂಲದ ಯುವಕರಿಗೆ 'ಹಿಂದೂ ಪರಂಪರೆ' ಕುರಿತಾದ ಶಿಬಿರಗಳನ್ನು ನಡೆಸುತ್ತದೆ.

'ಯೋಗ ಭಾರತಿ' ಮತ್ತು 'ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆ' ಎಂಬ ಸಂಘಟನೆಗಳ ಉದ್ದೇಶ ಯೋಗ ತರಬೇತಿ ನೀಡುವುದು ಎನ್ನಲಾಗುತ್ತದೆ. ಯೋಗ ಭಾರತಿ ಎಂಬುದು ಐಡಿಆರ್‌ಎಫ್ ಅಡಿಯಲ್ಲಿರುವ ಅದರ ಅಂಗಸಂಸ್ಥೆಯಾಗಿದೆ. ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆಯ ಕೇಂದ್ರ ಕಾರ್ಯಾಲಯ ಬೆಂಗಳೂರಿನಲ್ಲಿದೆ. ಈ ಎರಡೂ ಸಂಘಟನೆಗಳು ಪರಸ್ಪರ ಕೂಡಿಕೊಂಡು ಕೆಲಸ



ಮಾಡುತ್ತವೆ. ಇವುಗಳ ಮೂಲಕ ಆರ್‌ಎಸ್‌ಎಸ್ ತನ್ನ ತರಬೇತಿ ಶಿಬಿರಗಳನ್ನು ನಡೆಸುತ್ತದೆ. ಇಂತಹ ಶಿಬಿರಗಳಲ್ಲಿ ಯೋಗ ತರಬೇತಿಯ ಜೊತೆಯಲ್ಲಿ ಹಿಂದುತ್ವದ ಸಿದ್ಧಾಂತ, ಹಿಂದೂ ಧರ್ಮದ ಸರ್ವಶ್ರೇಷ್ಠತೆ ಮತ್ತು ಭಾರತದ ಪರಿಷ್ಕೃತ ಇತಿಹಾಸ ಇತ್ಯಾದಿ ವಿಷಯಗಳ ಕುರಿತು ಆರ್‌ಎಸ್‌ಎಸ್ ಮುಖಂಡರಿಂದ ಉಪನ್ಯಾಸಗಳನ್ನು ನೀಡಲಾಗುತ್ತದೆ.

'ಸಂಸ್ಕೃತ ಭಾರತಿ' ಎಂಬ ಇನ್ನೊಂದು

ಪುಟ 10 ನೋಡಿ

ಕರ್ನಾಟಕದಲ್ಲಿ......

ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ...ನಸೇವಾ ವಿದ್ಯಾಕೇಂದ್ರ ಎಂಬ ...ಘಟನೆಯನ್ನು ಸಂಘ ಸಾಹಿತ್ಯದಲ್ಲಿ ...ರ್‌ಎಸ್‌ಎಸ್ ಜೊತೆಯಲ್ಲಿ ಸಂಯೋಜನೆ ...ಹೊಂದಿರುವ ಸಂಘಟನೆಯೆಂದು ...ರ್ಣಿಸಲಾಗಿದೆ. ತೋರಿಕೆಗೆ ಇದೊಂದು ಶಿಕ್ಷಣ ...ಸಂಸ್ಥೆಯಾಗಿದ್ದರೂ, ವಾಸ್ತವಿಕವಾಗಿ ಅದು ...ರ್‌ಎಸ್‌ಎಸ್ ನ ಅಂಗಸಂಸ್ಥೆಯಾಗಿ ...ರ್ಯನಿರ್ವಹಿಸುತ್ತದೆ. "ಗೋಧ್ರಾ ಮತ್ತು ...ನಂತರ" ಎಂಬ ಕುಖ್ಯಾತ ನಿರ್ಣಯವನ್ನು ...ಂಗೀಕರಿಸಿದ ಆರ್‌ಎಸ್‌ಎಸ್ ಅಖಿಲ ಭಾರತ ...ಮಟ್ಟದ ಪದಾಧಿಕಾರಿಗಳ ಸಭೆಯನ್ನು ಕಳೆದ ...ವರ್ಷ ಬೆಂಗಳೂರಿನಲ್ಲಿ ಏರ್ಪಾಡು ಮಾಡಿದ್ದು ...ಈ ಸಂಸ್ಥೆಯೇ. ಈ ನಿರ್ಣಯದಲ್ಲಿ, ...ರ್‌ಎಸ್‌ಎಸ್ ಗುಜರಾತ್‌ನಲ್ಲಿ ಮುಸ್ಲಿಂ ...ಸಮುದಾಯದ ಮೇಲೆ ನಡೆದ ಹಿಂಸಾಚಾರಕ್ಕೆ ...ನಿಸಾಗಿ ಮುಸ್ಲಿಂ ಸಮುದಾಯವೇ ಕಾರಣ ...ಹೇಳಿತು. ಮಾತ್ರವಲ್ಲ "ಬಹುಸಂಖ್ಯಾತ ...ರ ಕೃಪಾಕಟಾಕ್ಷದ ಅಡಿಯಲ್ಲಿ ಮಾತ್ರ ಅವರ ಹಿತ ಇದೆ ಎಂಬುದನ್ನು ಮುಸಲ್ಮಾನರು ಅರ್ಥ ಮಾಡಿಕೊಳ್ಳಬೇಕು" ಎಂಬ ಬೆದರಿಕೆಯನ್ನೂ ಹಾಕಿತ್ತು.

ಕರ್ನಾಟಕದಲ್ಲಿ ಐಡಿಆರ್‌ಎಫ್ ಬೆಂಬಲಿತ ಕೇಂದ್ರಗಳು ರಾಜ್ಯದ ಹಲವಾರು ಕಡೆ ಕ್ರಿಯಾಶೀಲವಾಗಿವೆ. 'SEVA U'ನ 'ACTION' ಎಂಬ ಹೆಸರಿನ ಕೇಂದ್ರವೊಂದು ಬೆಂಗಳೂರಿನ ಬನಶಂಕರಿ, 2ನೇ ಹಂತ ಬಡಾವಣೆಯಲ್ಲಿ ಕೆಲಸ ಮಾಡುತ್ತಿದೆ. ವನವಾಸಿ ಕಲ್ಯಾಣ ಎಂಬ ಹೆಸರಿನ ಕೇಂದ್ರವೊಂದು ಶಿರ್ಸಿಯಲ್ಲಿದೆ. ಬೆಳಗಾಂವಿಯ ಶಹಪುರದಲ್ಲಿ ಸ್ವಾಮಿ ವಿವೇಕಾನಂದ ಸೇವಾ ಪ್ರತಿಷ್ಠಾನ ಕಾರ್ಯೋನ್ಮುಖವಾಗಿದೆ. ಇಂತಹ ಸುಮಾರು 67 ಸಂಘಟನೆಗಳು ದೇಶದ ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತವೆ. ವಿದೇಶದಿಂದ ರವಾನಿಸಲಾಗುತ್ತಿರುವ ದ್ವೇಷದ ದಳ್ಳುರಿಯನ್ನು ಪಂಚಕರ ಈ ಜಾಲ ದೇಶದ ಮೂಲೆ ಮೂಲೆಗಳಿಗೆ ಹರಡುವ ಕಾರ್ಯದಲ್ಲಿ ನಿರತವಾಗಿದೆ.

ಅಯೋಧ್ಯಾ ವಿವಾದ
ವಾಜಪೇಯಿ ಹೇಳಿಕೆಗೆ ಖಂಡನೆ

ರಾಮಮಂದಿರ ವಿವಾದವನ್ನು ನ್ಯಾಯಾಲಯದ ಮೂಲಕ ಬಗೆಹರಿಸಿಕೊಳ್ಳಬೇಕೆಂಬ ಕೇಂದ್ರ ಸರಕಾರದ ನಿಲುವಿನಿಂದ ಪ್ರಧಾನ ಮಂತ್ರಿ ದೂರಸರಿದಿದ್ದಾರೆ.

ಹಿಮಾಚಲ ಪ್ರದೇಶದ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಅಯೋಧ್ಯೆಯಲ್ಲಿ ದೇವರ ಗುಡಿ ಇದ್ದುದಕ್ಕೆ ಚಾರಿತ್ರಿಕ ಪುರಾವೆಗಳಿವೆ ಎಂದು ಹೇಳಿದ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಹೇಳಿಕೆ. ಇದಕ್ಕೆ ಸಾಕ್ಷಿಯಾಗಿದೆ. ಚಾರಿತ್ರಿಕ ಪುರಾವೆಗಳ ಗೋಜಿಗೆ ಹೋಗುವುದಿಲ್ಲವೆಂದು ಶ್ರೇಷ್ಠ ನ್ಯಾಯಾಲಯ ಈ ಮೊದಲೇ ಸ್ಪಷ್ಟಪಡಿಸಿತ್ತು.

ಇಡೀ ವಿವಾದವು ನ್ಯಾಯಾಲಯದ ಮುಂದಿದ್ದು, ವಿವಾದಿತ ಪ್ರದೇಶದ ಮಾಲಿಕತ್ವದ ಬಗ್ಗೆ ಅಲಹಾಬಾದ್ ಹೈಕೋರ್ಟ್‌ನ ಲಕ್ನೋ ಬೆಂಚ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಈ ವಿವಾದವನ್ನು ನ್ಯಾಯಾಲಯವು ಬಗೆಹರಿಸಲಿದ್ದು ಎಲ್ಲರೂ ಇದನ್ನು ಒಪ್ಪಬೇಕು ಎಂಬುದು ಸರಕಾರದ ಈವರೆಗಿನ ನಿಲುವು ಆಗಿತ್ತು.

ಆದರೆ ವಿವಾದಿತ ಭೂಮಿ ಹಾಗೂ ಸರಕಾರವು ವಶಪಡಿಸಿಕೊಂಡಿರುವ ಭೂಮಿಯ ಮೇಲಿರುವ ತಡೆಯಾಜ್ಞೆಯನ್ನು ತೆರವುಗೊಳಿಸುವ ಕೇಂದ್ರದ ಪ್ರಯತ್ನ ಹಾಗೂ ಪ್ರಧಾನ ಮಂತ್ರಿಯವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹಿಮಾಚಲ ಪ್ರದೇಶದಲ್ಲಿ ನೀಡಿದ ಹೇಳಿಕೆಗಳು ವಿ.ಹೆಚ್.ಪಿ ಮತ್ತು ಆರ್.ಎಸ್.ಎಸ್ ಪರ ಧೋರಣೆಯನ್ನು ಅನುಸರಿಸುತ್ತಿರುವುದು ಸ್ಪಷ್ಟವಾಗಿದೆ.

ಪ್ರಜಾಪ್ರಭುತ್ವ ಮತ್ತು ದೇಶದ ಐಕ್ಯತೆ ಮತ್ತು ಸಮಗ್ರತೆಯಲ್ಲಿ ನಂಬಿಕೆಯಿಟ್ಟವರೆಲ್ಲರೂ ಖಂಡಿಸಬೇಕಾಗಿದೆ ಎಂದಿದೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ

ಬಿಜೆಪಿ ಕೋಮು ಭಾವೋದ್ರೇಕಗಳನ್ನು ಬಡಿದೆಬ್ಬಿಸುವ ಆಟ ಆರಂಭಿಸಿದೆ. ಎನ್‌ಡಿಎ ಭಾಗೀದಾರ ಪಕ್ಷಗಳು ಅದನ್ನೆಲ್ಲಾ ಸಹಿಸಿಕೊಳ್ಳಬೇಕೆಂದು ಹೇಳುತ್ತಿದೆ. ಈಸಂದರ್ಭದಲ್ಲಿನ ಪ್ರಮುಖ ಬೆಳವಣಿಗೆಗಳನ್ನು ವಿಶ್ಲೇಷಿಸಿರುವ ಹಿರಿಯ ನಾಯಕ ಕಾಂ.ಸುರ್ಜಿತ್ ರವರು ಕಾಂಗ್ರೆಸ್‌ನ ವಿಫಲತೆಗಳನ್ನು ಎತ್ತಿ ತೋರಿಸಿದ್ದಾರೆ.

ನಿಜರೂಪ ಬಿಚ್ಚುತ್ತಿರುವ ಸಂಘ ಪರಿವಾರ

ಹರ್ಕಿಶನ್ ಸಿಂಗ್ ಸುರ್ಜಿತ್

ಮಾರ್ಚ್ 1998ರಿಂದ ಎನ್.ಡಿ.ಎ. ಎಂಬ ಅಸ್ಪಷ್ಟ ರಚನೆಯ ಮೇಲೆ ಸವಾರಿ ಮಾಡುತ್ತಿರುವ ಬಿಜೆಪಿಗೆ ಈಗ ಸಂಶೋ.... ದಂತಿದೆ. ತನ್ನ ತಾತ್ಕಾಲಿಕವಾಗಿ 'ಮುಂದೂಡಿದ' ವಿವಾದಾತ್ಮಕ ಪ್ರಶ್ನೆಗಳನ್ನು ಮತ್ತೆ ಕೆದಕಿದರೆ ಮಾತ್ರ ಏಕಾಂಗಿಯಾಗಿ ಅಧಿಕಾರಕ್ಕೆ ಬರಲು ಸಾಧ್ಯ ಎಂಬ ತೀರ್ಮಾನಕ್ಕೆ ಅದು ಬಂದಂತಿದೆ. ಅಧಿಕಾರಕ್ಕೇರಲು ಅದು ಮುಂದೊಡ್ಡಿದ್ದ ಈ ಮೂರು ಪ್ರಶ್ನೆಗಳೆಂದರೆ ಅಯೋಧ್ಯಾ ವಿವಾದ, ಏಕರೂಪದ ನಾಗರಿಕ ಸಂಹಿತೆ ಮತ್ತು ಸಂವಿಧಾನದ ಕಲಮು 370.

ಸಂಘ ಪರಿವಾರದ ಕೆಲವರಂತೂ ಈ ಬಗ್ಗೆ ಬಹಿರಂಗವಾಗಿಯೇ ಮಾತಾಡುತ್ತಿದ್ದಾರೆ. ಎನ್.ಡಿ.ಎ. ಅಜೆಂಡಾವನ್ನು ತಾವು ಲೆಕ್ಕಿಸುವುದಿಲ್ಲ. ತಮ್ಮದು 'ಹಿಂದೂ ಅಜೆಂಡಾ' ಎಂದು ವಿ.ಹೆಚ್.ಪಿ ಮುಖಂಡ ಡಾ। ತೊಗಾಡಿಯಾ ಸಾರಿದ್ದಾರೆ. ನಮ್ಮ 'ಸೌಮ್ಯ' ಪ್ರಧಾನಿಗಳು ಕೂಡಾ ಬಿಜೆಪಿ ತನ್ನ ಅಜೆಂಡಾವನ್ನೇ ಪಾಲಿಸುತ್ತದೆ ಎನ್ನುತ್ತಾ ದೇವಸ್ಥಾನ ಕಟ್ಟಲು ಕಾನೂನು ತೊಡಕುಗಳನ್ನು ನಿವಾರಿಸಲು ತನ್ನ ಸರಕಾರ ಪ್ರಯತ್ನಿಸುವುದಾಗಿ ಹೇಳಿದ್ದಾರೆ.

ಎನ್.ಡಿ.ಎ. ಅಜೆಂಡಾ ರಾಷ್ಟ್ರೀಯ ಮಟ್ಟಕ್ಕೆ ಮಾತ್ರ, ರಾಜ್ಯ ಮಟ್ಟದಲ್ಲಿ ತಮ್ಮದೇ ಅಜೆಂಡಾವನ್ನು ಅನುಸರಿಸುವುದಾಗಿ ಬಿಜೆಪಿ ತನ್ನ ಎನ್.ಡಿ.ಎ ಮಿತ್ರರಿಗೆ ಸೂಚಿಸಿದೆ. ಬಿಜೆಪಿಗೆ ತನ್ನ ಮಿತ್ರ ಪಕ್ಷಗಳ ದೌರ್ಬಲ್ಯ ಗೊತ್ತು. ಆದ್ದರಿಂದ ರಾಷ್ಟ್ರಮಟ್ಟದಲ್ಲಿ ಅಧಿಕಾರದ ಗದ್ದುಗೆಯನ್ನು ಅನುಭವಿಸುತ್ತಲೇ ಇರಬೇಕಾದರೆ, ಕಾನೂನುಬದ್ಧ, ಕಾನೂನು ಬಾಹಿರ ಸೌಲಭ್ಯಗಳನ್ನು ಗಿಟ್ಟಿಸುತ್ತಿರಬೇಕಾದರೆ ಬಿಜೆಪಿ ಅಜೆಂಡಾವನ್ನು ಸಹಿಸಿಕೊಳ್ಳಬೇಕು ಎಂದು ತನ್ನ ಮಿತ್ರ ಪಕ್ಷಗಳಿಗೆ ಬಿಜೆಪಿ ಹೇಳಿದಂತಾಗಿದೆ. ಈ ಗುರಿಸಾಧನೆಗೆ ಅದು ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸುವ ಆಟ ಆರಂಭಿಸಿದೆ. ಉತ್ತರ ಪ್ರದೇಶ ಚುನಾವಣೆಗಳ ಮೊದಲು ಫೆಬ್ರವರಿ - ಮಾರ್ಚ್ 2001ರಲ್ಲಿ ಕುಂಬಮೇಳದ ವೇಳೆ ಅಲಹಾಬಾದಿನಲ್ಲಿ ವಿಹೆಚ್‌ಪಿ 'ಸಂತ ಸಮಾಗಮ' ನಡೆಸಿ ಕೋಮು ಧ್ರುಢೀಕರಣಕ್ಕೆ ಪ್ರಯತ್ನಿಸಿತು. ಆ ತಂತ್ರ ಅಲ್ಲಿ ಫಲಿಸದಿದ್ದರೂ ಸಂಘ ಪರಿವಾರಕ್ಕೆ ಗುಜರಾತ್ ಚುನಾವಣೆಗಳ ನಂತರ ಇದರ ಪ್ರಯೋಜನದ ಬಗ್ಗೆ ಮನವರಿಕೆಯಾದಂತಿದೆ.

ಇದರಿಂದಾಗಿಯೇ ಸಂಘ ಪರಿವಾರ ಬೇರೆರಾಜ್ಯಗಳಲ್ಲಿ ಗುಜರಾತಿನ ಪುನರಾವರ್ತನೆ ಮಾಡುವ ಬಗ್ಗೆ ಮಾತಾಡುತ್ತಿದೆ. ಲೋಕಸಭಾ ಚುನಾವಣೆಗಳ ವರೆಗೂ ಈ ಅಯೋಧ್ಯಾ ಪ್ರಚಾರ ಮುಂದುವರೆಯುತ್ತದೆ ಎಂದಿದ್ದಾರೆ ಡಾ. ತೊಗಾಡಿಯಾ.

ನಿಜವಾದ ಬೆದರಿಕೆ

ಇದು ಟೊಳ್ಳು ಬೆದರಿಕೆಯಲ್ಲ ಸಂಘ ಪರಿವಾರದ ಮಾದಕ ಯಾದವೀ ಕಲಹದ ಆಟ ಆರಂಭಿಸಿದೆ ಎಂಬುದು ಮಧ್ಯಪ್ರವೇಶದ ಧರ್‌ನಲ್ಲಿ ಸ್ಪಷ್ಟವಾಗಿದೆ. 1930ರಷ್ಟು ಹಿಂದೆಯೇ ಧರ್‌ನ ಹಿಂದೂ ರಾಜ ಅಲ್ಲಿನ ವಿವಾದಿತ ಸ್ಥಳ ಒಂದು ಮಸೀದಿಯೆಂದು ತೀರ್ಪು ಕೊಟ್ಟಿದ್ದ ಇವರೂ ಸಂಘ ಪರಿವಾರ ಅಲ್ಲಿ ಅಯೋಧ್ಯಾ ರೀತಿಯ ಸ್ಥಿತಿ ನಿರ್ಮಿಸಿದೆ. ಧರ್, ಇಂಡೋರ್, ಮತ್ತಿತರ ಪ್ರಶ್ಚಿಮ ಜಿಲ್ಲೆಗಳಲ್ಲಿ ಸ್ಫೋಟಕ ಪರಿಸ್ಥಿತಿ ನಿರ್ಮಾಣವಾಗಿದೆ.

ದಿಲ್ಲಿಯಲ್ಲಿ ವಿ.ಹೆಚ್.ಪಿ ನಡೆಸಿದ 'ಧರ್ಮ ಸಂಸದ' ನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಅಯೋಧ್ಯೆಯಲ್ಲಿ ಬಾಬ್ರಿ ಜಮೀನಿನ ಸುತ್ತ ಇರುವ 1998ರಲ್ಲಿ ಕೇಂದ್ರ ಸರ್ಕಾರ ವಹಿಸಿಕೊಂಡ 67 ಎಕ್ರೆ ಜಮೀನನ್ನು ವಿ.ಹೆಚ್.ಪಿಗೆ ವಹಿಸಿಕೊಡುವಂತೆ ಒತ್ತಡ ತರುವ ತಂತ್ರ ಇದು. ಈ ಶೇರಿನಲ್ಲಿ ಅಂತಿಮ ನಿರ್ಣಯ ಬರುವವರೆಗೆ ಈ ಪ್ರತೀಕದ ವರ್ಗಾವಣೆ ಅಥವಾ ಧಾರ್ಮಿಕ ಕೆಲಸಗಳಿಗೆ ಅದರ ಬಳಕೆಯನ್ನು ಸುಪ್ರಿಂ ಕೋರ್ಟ್ ನಿಷೇದಿಸಿದ್ದರೂ ವಿಹೆಚ್‌ಪಿ ಒಂದು ಕಾನೂನು ತಂದು ಆ ಜಾಗವನ್ನು ನನಗೆ ವಹಿಸಿ ಕೊಡಬೇಕು ಎಂದು ಆಗ್ರಹಿಸುತ್ತಿದೆ. ವಾಜಪೇಯಿ ಸರಕಾರ ಕೂಡ ಈ ಕೇಸನ್ನು ತ್ವರಿತಗೊಳಿಸಬೇಕೆಂದು ಸುಪ್ರಿಂ ಕೋರ್ಟ್‌ನ್ನು ಕೇಳುವ ಮಟ್ಟಕ್ಕೆ ಹೋಯಿತು. ಫೆಬ್ರವರಿ 22 ರ ಒಳಗೆ ಅಂದರೆ ವಿ.ಹೆಚ್.ಪಿಯ 'ಧರ್ಮಸಂಸದ್' ಮೊದಲು ಸುಪ್ರಿಂಕೋರ್ಟ್ ತನ್ನ ಆದೇಶವನ್ನು ತಿಳಿಸಬೇಕೆಂದು ಅದು ಕೇಳಿತು. ರಾಷ್ಟ್ರಪತಿಗಳ ಜಂಟಿ ಅಧಿವೇಶನದ ಭಾಷಣದಲ್ಲೂ ಅದನ್ನು ಸೇರಿಸಿ ಅತ್ಯುನ್ನತ ಹುದ್ದೆಯ ಪ್ರತಿಷ್ಠೆಯನ್ನು ಕುಗ್ಗಿಸಿದೆ. ಸುಪ್ರಿಂಕೋರ್ಟ್ ಕೇಂದ್ರ ಸರಕಾರದ ಮಾತಿಗೆ ಒಪ್ಪಲು ನಿರಾಕರಿಸಿ ಮಾರ್ಚ್ 6ರ ಮೊದಲು ವಿಚಾರಣೆ ಸಾಧ್ಯವಿಲ್ಲ ಎಂದಿತು.

ಈ ನಡುವೆ ವಿ.ಹೆಚ್.ಪಿ. ಬಹುಶಃ ತನ್ನ ಒಂದು ಯೋಜನೆಯ ಭಾಗವಾಗಿ ಈ ಬಾರಿ ಚಳುವಳಿ ಆರಂಭಿಸಲು ಒಂದು ದಿನಾಂಕ ಗೊತ್ತುಪಡಿಸಿಲ್ಲ. ಆದರೆ ಬೆದರಿಕೆಯಂತೂ ಇದೆ. ಈ ಇಡೀ ನಾಟಕ ಫೆಬ್ರುವರಿ 24ರಂದು ಸಂತರೆಂದು ಕರೆಸಿಕೊಳ್ಳುವವರ ಪಾರ್ಲಿಮೆಂಟ್ ಚಲೋದೊಂದಿಗೆ ಮುಕ್ತಾಯಗೊಂಡಿದೆ.

ಅದೇನೇ ಇರಲಿ, ದೇಶ, ಅದರ ಐಕ್ಯತೆ, ಧರ್ಮನಿರಪೇಕ್ಷ ಹಂದರ ಮತ್ತು ಕೋಮು ಸೌಹಾರ್ದತೆಯ ರಕ್ಷಣೆಯ ಕರ್ತವ್ಯ ಹೊತ್ತ ಕೇಂದ್ರ ಸರಕಾರ ಸಂಘ ಪರಿವಾರಕ್ಕೆ ಅದರ ಆಟದಲ್ಲಿ ಪ್ರೋತ್ಸಾಹ ನೀಡಿದೆಯಷ್ಟೆ. ಸಂಸತ್ತಿನಲ್ಲಿ ಉಪಪ್ರಧಾನಿ ಎಲ್.ಕೆ. ಆಡ್ವಾನಿ 'ಧರ್ಮಸಂಸದ' ನಿಂದ ಬೆದರಿಕೆಯೇನೂ ಇಲ್ಲವೆಂಬಂತೆ ಚಿತ್ರಿಸಲು ಪ್ರಯತ್ನಿಸಿದರು. ಅತ್ತ ಬಿಜೆಪಿಯ ಮಿತ್ರರು ತಮ್ಮ ಕ್ಷೀಣದನಿಗೆ ಹೇಗೂ ಬೆಲೆ ಕೊಡುವುದಿಲ್ಲ ಎಂದು ಮೌನವಾಗಿರುವಂತೆ ಕಾಣುತ್ತದೆ. ಈ ಮೂಲಕ ಅವರು ದೇಶದ ಧರ್ಮನಿರಪೇಕ್ಷ ಪರಂಪರೆಗೆ, ಸಮಿಶ್ರ ಸಂಸ್ಕೃತಿ ಮತ್ತು ರಾಷ್ಟ್ರೀಯ ಐಕ್ಯತೆಗೆ ಬಂದಿರುವ ಗಂಭೀರ ಬೆದರಿಕೆಯನ್ನು ನಿರ್ಲಕ್ಷಿಸುತ್ತಿದ್ದಾರೆ.



ಕಾಂಗ್ರೆಸ್‌ನ ನಿಲುವು

ಆದರೆ ನಿಜವಾಗಿಯೂ ಆಶ್ಚರ್ಯ ತಂದಿರುವುದು ಕಾಂಗ್ರೆಸ್‌ನ ನಿಲುವು. ಮಧ್ಯಪ್ರದೇಶದ ಮುಖ್ಯಮಂತ್ರಿ ಕೋಮುವಾದಿ ಧಾಳಿಯೆದುರು ಮೊಣಕಾಲೂರಿದರೆ, ಧರ್‌ನ ಭೋಜನ ಶಾಲಾ ಪ್ರಶ್ನೆಯಲ್ಲಿ ಮಧ್ಯಪ್ರವೇಶಿಸುವಂತೆ ಕೇಂದ್ರ ಸರಕಾರದ ಪ್ರಾಚ್ಯಸಂಶೋಧನಾ ಇಲಾಖೆಯನ್ನು ಕೂಡಾ ಕೋರಿದ್ದಾರೆ, ಅಲ್ಲದೆ ಕೋಮುವಾದೀ ಸಂಘಟನೆಗಳನ್ನು ಸಂತೃಪ್ತಗೊಳಿಸಲು ರಾಜ್ಯದಲ್ಲಿ ಗೋವಧೆ ನಿಷೇಧ ಮಾಡುವ ಆಶಯ ವ್ಯಕ್ತಪಡಿಸಿದ್ದಾರೆ. ಸಂಸತ್ತಿನಲ್ಲೂ ಕಾಂಗ್ರೆಸ್ ಪಕ್ಷ ಬಿಜೆಪಿಯೇತರ, ಶಿವಸೇನೆಪರ ಎನ್.ಡಿ.ಎ ಪಕ್ಷಗಳಿಗಿಂತ ಭಿನ್ನವಾಗಿ ವರ್ತಿಸಿಲ್ಲ, ಪ್ರತಿ ಪಕ್ಷಗಳು ಅಯೋಧ್ಯೆಯ ವಿಷಯದಲ್ಲಿ ಒಟ್ಟಿಗೆ ನಿಲುವಳಿ ಸೂಚನೆ ಮಂಡಿಸಬೇಕೆಂಬ ಒಮ್ಮತವನ್ನು ಮುರಿಯಿತು. ಇದುವರೆಗೂ ಕಾಂಗ್ರೆಸ್ ಮುಖಂಡತ್ವ ಮಧ್ಯಪ್ರವೇಶದ ಮುಖ್ಯಮಂತ್ರಿಗಳ ಮೃದು ಹಿಂದುತ್ವವನ್ನು ತರಾಟೆಗೆ ತಗೊಂಡಿಲ್ಲ, ಅದರ ಬದಲು ಅಲ್ಲಿ ಮತ್ತು ಹಿಮಾಚಲ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆಗಳ ದೃಷ್ಟಿಯಿಂದ ಅದನ್ನು ಅನುಮೋದಿಸಿದೆ.

ಕಾಂಗ್ರೆಸ್‌ನ ಈ ನೀತಿ ಗುಜರಾತ್ ಚುನಾವಣೆಗಳಲ್ಲಾದಂತೆ ತದ್ವಿರುದ್ಧ ಫಲನೀಡಬಹುದಷ್ಟೆ. ಕೋಮುವಾದದ ವಿರುದ್ಧ ಒಂದು ದೃಢ ನಿಲುವಿನ ಅವಶ್ಯಕತೆಯಿರುವಾಗ ಈ ರೀತಿ ಕೋಮು ಭಾವನೆಗಳನ್ನು ಸಂತೃಪ್ತಿಗೊಳಿಸಲು ಪ್ರಯತ್ನಿಸುವುದು ಒಂದು ರಾಷ್ಟ್ರೀಯ ಪಕ್ಷವಾಗಿ ಪ್ರಧಾನ ಪ್ರತಿಪಕ್ಷವಾಗಿ ಕಾಂಗ್ರೆಸ್‌ನ ವಿಶ್ವ ಸೌಹಾರ್ದತೆಯನ್ನು ವ್ಯಾಸಗೊಳಿಸುತ್ತದೆ.

ಕುಂಟುನೆಪದ ನಿಲುವು

ಈ ನಡುವೆ ಬಿಜೆಪಿ ನೇತೃತ್ವದ ಸರಕಾರದ ವಿಫಲತೆ ಇರಾಕ್ ವಿಷಯದಲ್ಲೂ ಬಯಲಾಗಿದೆ. ಒಂದು ಮುಸ್ಲಿಂ ದೇಶಕ್ಕೆ ಅಮೇರಿಕಾ ಪಾಠ ಕಲಿಸಲಿ ಎಂಬ ಡಾ। ತೊಗಾಡಿಯಾದ ತಾತ್ಸಾರದ ಉದ್ಗಾರವನ್ನು ಸರಕಾರ ಬೆಂಬಲಿಸಲಿಲ್ಲ. ನಿಜ, ಆದರೆ ಈ ಉದ್ಗಾರ ಮಾನವಕುಲದ ಎದುರು ಇಂದು ಇರುವ ಪ್ರಶ್ನೆಗಳ ಬಗ್ಗೆ ಸಂಘ ಪರಿವಾರ ಹೀಗೆ ಯೋಚಿಸುತ್ತದೆ ಎಂಬುದನ್ನು ಬಯಲಿಗೆ ತಂದಿದೆ.

ಏಕೆಂದರೆ ಈಗ ಮಾನವಕುಲದ ಭವಿಷ್ಯ ಪಣದಲ್ಲಿದೆ. ಏಕ ಧ್ರುವ ಜಗತ್ತಿನಲ್ಲಿ ವಿಶ್ವಾಧ್ಯ... ತನ್ನ ಯಜಮಾನಿಕೆ ಹೇರಿ ಮೂರನೇ ಜಗತ್ತಿನ ಅಮೂಲ್ಯ ಸಂಪನ್ಮೂಲಗಳ ಮೇಲೆ ಹಿಡಿತಸಾಧಿಸಲು ಅಮೇರಿಕಾ ಪ್ರಯತ್ನಿಸುತ್ತಿದೆ. ಇರಾಕ್‌ನ ಮೇಲೆ ಪ್ರಸ್ತಾಪಿತ ಯುದ್ಧ ದಿಕ್ಕಿನಲ್ಲಿರುವ ಇನ್ನೊಂದು ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಇದು ಇತರೆಲ್ಲಾ ದೇಶಗಳ ಸಾರ್ವಭೌಮತೆಗೂ ಬಂದಿರುವ ಬೆದರಿಕೆ.

ಇಂತಹ ಸನ್ನಿವೇಶದಲ್ಲಿ ಭಾರತ ಯುದ್ಧ ವಿರೋಧಿ ಶಕ್ತಿಗಳಿಗೆ ನೇತೃತ್ವ ನೀಡಬೇಕಾಗಿತ್ತು. ಸ್ವಾತಂತ್ರ್ಯ ರಕ್ಷಣೆ, ವಿಶ್ವ ಶಾಂತಿಯ ರಕ್ಷಣೆಯ... ಮೂರನೇ ಜಗತ್ತಿನ ದೇಶಗಳಿಗೆ ನೇತೃತ್ವ ನೀಡುತ್ತ ಬಂದಿರುವ ದೇಶ ನಮ್ಮದು, ಅಲಿಪ್ತ ಆಂದೋಲನದಲ್ಲಿ, ಇತರ ಅಂತರ್ರಾಷ್ಟ್ರೀಯ ವೇದಿಕೆಗಳಲ್ಲಿ ಭಾರತಕ್ಕೊಂದು ಪ್ರಮುಖ ಪಾತ್ರವಿತ್ತು. ಆದರೆ ಅವೆಲ್ಲಾ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಆವಿಯಾಗಿ ಹೋದಂತಿದೆ. ಇಸ್ರೇಲ್ ಸರಕಾರ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಸಮ್ಮತಿಯಿಂದ ಪ್ಯಾಲೆಸ್ಟೇನ್ ಜನಗಳ ಹತ್ಯಾಕಾಂಡ ನಡೆಸುವಾಗ ಬಾಯುಪಚಾರದ ಮಾತುಗಳನ್ನು ಬಿಟ್ಟು ಬಿಜೆಪಿ ನೇತೃತ್ವದ ಸರಕಾರ ಏನೂ ಮಾಡಿಲ್ಲ, ಸ್ವತಂತ್ರ ಭಾರತದ ಅತೀ ಅಮೇರಿಕನ್ ಪರ ಸರಕಾರ ತಾನೆಂದು ಇದು ತೋರಿಸಿಕೊಟ್ಟಿದೆ.

ಇರಾಕ್ ವಿಷಯದಲ್ಲೂ ಅದೇ ಕುಂಟು ನೆಪದ ನಿಲುವು ಮುಂದುವರೆದಿದೆ. ಬಹಳ ಸಮಯ ... ಬಗ್ಗೆ ಅದು ಮೌನವಾಗಿಯೇ ಇತ್ತು. ಬಾಯಿ ತೆರೆದಾಗಲೂ ಕೇವಲ ಟೊಳ್ಳುಮಾತುಗಳು. ಅಮೇರಿಕಾ ಯುದ್ಧಕ್ಕೆ ಹಾತೊರೆಯಬಾರದು ಎಂದು ಕೇಳುವ ಧೈರ್ಯವನ್ನು ಅದು ತೋರಲಿಲ್ಲ. ಸಂಸತ್ತಿನಲ್ಲಿ ಫೆಬ್ರವರಿ 19ರಂದು ನಡೆದ ಅಲ್ಪಾವಧಿಯ ಚರ್ಚೆಯಲ್ಲಿ ವಿದೇಶಾಂಗ ಮಂತ್ರಿಗಳು ಭಾರತ ಯುದ್ಧಕ್ಕೆ ವಿರುದ್ಧವಾಗಿದೆ ವಿಶ್ವಸಂಸ್ಥೆಯ ಆದ್ಯಾತಾ ಸಮಿತಿ ಅಧಿಕಾರ ನೀಡದಿದ್ದರೆ ಇರಾಕ್ ಮೇಲೆ ಕ್ರಮ ಕೈಗೊಳ್ಳಬಾರದು ಎಂದರು ಅಂದರೆ ಅಮೇರಿಕಾ 1991ರಲ್ಲಿ ಮಾಡಿದಂತೆ ವಿಶ್ವಸಂಸ್ಥೆಯನ್ನು ಹೈಜಾಕ್...

ಪುಟ 10

ವಿದ್ಯುತ್ ನೀತಿಯ ವಿರುದ್ಧ ಜನತೆಯ ಆಕ್ರೋಶ
ಮೆಸ್ಕಾಂ ಮುಂದೆ ಪ್ರದರ್ಶನ ನಡೆಸಿದ ಜನಸಾಗರ

ಜನರ ಆಕ್ಷೇಪಗಳನ್ನು ಕಡೆಗಣಿಸಿ ವಿಶ್ವಬ್ಯಾಂಕ್ ಆಜ್ಞೆಯಂತೆ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಿಸುವತ್ತ ಕೃಷ್ಣರ ಸರ್ಕಾರ ಹೊರಟಿದೆ. ಇದಕ್ಕೆ ಜನತೆಯ ಭಾರೀ ಪ್ರತಿರೋಧವೂ ಬರುತ್ತಿದೆ. ರಾಜ್ಯದ ನಾಲ್ಕು 'ಎಸ್ಕಾಂ'ಗಳ ಕಛೇರಿ ಮುತ್ತಿಗೆ ಹಾಕುವ, ಹೋರಾಟ ಸಾರಲಾಗಿದೆ. ಅದರಂತೆ ಗುಲ್ಬರ್ಗಾ, ಹುಬ್ಬಳ್ಳಿ, ಮಂಗಳೂರಿನಲ್ಲಿ ನಡೆದ ಅಭೂತಪೂರ್ವ ಪ್ರತಿಭಟನೆಯ ವರದಿಗಳು ಇಲ್ಲಿವೆ.



ಮೆಸ್ಕಾಂ ವ್ಯಾಪ್ತಿಯ 9 ಜಿಲ್ಲೆಗಳಿಂದ ಬಂದ ಸುಮಾರು ಐದು ಸಾವಿರ ರೈತರು ಮತ್ತು ವಿದ್ಯುತ್ ಬಳಕೆದಾರರು ಮಂಗಳೂರಿನ ಮರೋಳಿಯಲ್ಲಿರುವ ಮೆಸ್ಕಾಂ ಆಡಳಿತ ನಿರ್ದೇಶಕರ ಕಚೇರಿಯ ಮುಂದೆ ಇಂದು (27.2.03 ರಂದು) ಪ್ರದರ್ಶನ ನಡೆಸಿ ವಿದ್ಯುಚ್ಛಕ್ತಿ ದರ ಏರಿಕೆ ಮತ್ತು ಖಾಸಗೀಕರಣ ವಿರೋಧಿ ಹೋರಾಟ ಸಮಿತಿಯ ನೇತೃತ್ವದಲ್ಲಿ ನಡೆದ ಈ ಪ್ರದರ್ಶನಕ್ಕೆ ಮೊದಲು ನಗರದ ನಂತೂರು ಕ್ರಾಸ್‌ನಿಂದ ಹೊರಟ ಸ್ಫೂರ್ತಿದಾಯಕ ಮೆರವಣಿಗೆಯು ಕೇಂದ್ರ ಮತ್ತು ರಾಜ್ಯ ಸರಕಾರವ ಜನವಿರೋಧಿ ವಿದ್ಯುತ್ ನೀತಿಯ ವಿರುದ್ಧ ಆಕ್ರೋಶದ ಅಭಿವ್ಯಕ್ತಿಯಾಗಿತ್ತು.

ಮೆಸ್ಕಾಂ ಕಚೇರಿಯ ಮುಂದೆ ಪ್ರದರ್ಶನಕಾರರನ್ನು ಉದ್ದೇಶಿಸಿ ರಾಜ್ಯದ ಹಿರಿಯ ರೈತ-ಕಾರ್ಮಿಕ ಮುಖಂಡರಾದ ನಿತ್ಯಾನಂದ ಸ್ವಾಮಿಯವರು ಮಾತನಾಡುತ್ತಾ, ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಿಸುವ ಕೇಂದ್ರ ಸರಕಾರದ ನೀತಿಯನ್ನು ಕರ್ನಾಟಕ ಸರಕಾರವು ಅತ್ಯುತ್ಸಾಹದಿಂದ ಜಾರಿ ಮಾಡುವ ಸಿದ್ಧತೆಯಲ್ಲಿರುವುದರಿಂದಲೇ ರೈತರ ಮತ್ತು ವಿದ್ಯುತ್ ಬಳಕೆದಾರರ ಮೇಲೆ ಅಗಾಧ ಹೊರೆ ಬೀಳುತ್ತಿದೆ ಎಂದು ವಿವರಿಸಿದರು. ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಯೋಜನೆಯು ಖಾಸಗೀಕರಣದ ಸಿದ್ಧತೆಯಲ್ಲಾಗಿರುವುದರಿಂದ ಉತ್ಪಾದಿಸಲಾಗುತ್ತಿರುವ ಜಲವಿದ್ಯುತ್ತಿನ ಉತ್ಪಾದನೆಗೆ ಸರಕಾರವು ಆದ್ಯತೆ ನೀಡಿ, ದುಬಾರಿ ಬೆಲೆಗೆ ಖಾಸಗಿ ಉತ್ಪಾದಕರಿಂದ ವಿದ್ಯುತ್ ಖರೀದಿಸುವುದನ್ನು ಕಡಿಮೆ ಮಾಡಿದರೆ ಬಳಕೆದಾರರ ಮೇಲೆ ಹೊರೆ ಹೇರುವ ಪರಿಸ್ಥಿತಿ ಉದ್ಭವಿಸಲಾರದು ಎಂದು ಹೇಳಿದ ಅವರು ಸರಕಾರದ ಜನವಿರೋಧಿ ವಿದ್ಯುತ್ ನೀತಿಯ ವಿರುದ್ಧ ಮುಂದಿನ ದಿನಗಳಲ್ಲಿ ರಾಜ್ಯವ್ಯಾಪಿಯಾದ ಉಗ್ರಹೋರಾಟಗಳು ನಡೆಯಲಿವೆ ಎಂದು ಹೇಳಿದರು.

ಹೋರಾಟ ಸಮಿತಿಯ ಅಧ್ಯಕ್ಷರಾದ ಶ್ರೀ ಮೊಯಿದಿ ಕುಂಞ ಮರಾಠಿ ಮೂಲೆ, ಉಪಾಧ್ಯಕ್ಷರಾದ ಬಿ.ಮಾಧವ ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್, ಉಡುಪಿಯ ಅಬ್ರಹಾಂ ಕರ್ಕಡ, ಮಂಡ್ಯದ ಪುಟ್ಟಮಾದು ಮತ್ತು ಕುಮಾರಿ, ಮೈಸೂರಿನ ಜಯರಾಂ ಮೊದಲಾದವರು ಮಾತನಾಡಿದರು. ಮೆಸ್ಕಾಂ ಆಡಳಿತ ನಿರ್ದೇಶಕರಿಗೆ ನೀಡುವ ಮನವಿಯನ್ನು ಕಾರ್ಯದರ್ಶಿ ಎಂ.ಎ.ಮಹಮ್ಮದ್ ಬಶೀರ್ ಅವರು ಓದಿ ಹೇಳಿದರು.

ಹೋರಾಟ ಸಮಿತಿಯ ಪರವಾಗಿ ಮೊಯಿದಿ ಕುಂಞ ಮರಾಠಿ ಮೂಲೆ, ಬಿ.ಮಾಧವ, ಅಬ್ರಹಾಂ ಕರ್ಕಡ, ರಾಮಚಂದ್ರ ಉಚ್ಚಿಲ್, ಸುಕುಮಾರ್ ರಾವ್ ಕೋಟೆಕಾರ್, ಕೆ.ಆರ್.ಶ್ರೀಯಾನ್, ಕೆ.ಯಾದವ .ಶೆಟ್ಟಿ, ಎಂ.ಎ.ಮಹಮ್ಮದ್ ಬಶೀರ್, ಬಿ.ಎಂ.ಭಟ್, ಮೊದಲಾದವರನ್ನೊಳಗೊಂಡ ನಿಯೋಗವು ಮೆಸ್ಕಾಂ ಆಡಳಿತ ನಿರ್ದೇಶಕರ ಅನುಪಸ್ಥಿತಿಯಲ್ಲಿ ತಾಂತ್ರಿಕ ನಿರ್ದೇಶಕರಾದ ವೀರಭದ್ರಪ್ಪನವರನ್ನು ಭೇಟಿಯಾಗಿ ಮನವಿ ಅರ್ಪಿಸಿ, ರೈತರ ಮತ್ತು ವಿದ್ಯುತ್ ಬಳಕೆದಾರರ ಮೇಲೆ ಹೊಸ ವಿದ್ಯುತ್ ನೀತಿಯಿಂದಾಗಿ ಆಗುತ್ತಿರುವ ಅನ್ಯಾಯಗಳ ಕುರಿತು ವಿವರವಾದ ಚರ್ಚೆ ನಡೆಸಿತು. ನಂತರ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ವೀರಭದ್ರಪ್ಪನವರು ರೈತ ಮುಖಂಡರ ಕೆಲವು ಪ್ರಶ್ನೆಗಳಿಗೆ ಸ್ಪಷ್ಟೀಕರಣ ನೀಡಿ, ಸದ್ಯಕ್ಕೆ ಹಿಮಾಚಲ ಪ್ರದೇಶಕ್ಕೆ ಕರ್ತವ್ಯ ನಿಮಿತ್ತ ಹೋಗಿರುವ ಆಡಳಿತ ನಿರ್ದೇಶಕರು ಮರಳಿ ಬಂದ ನಂತರ ಹೋರಾಟ ಸಮಿತಿಯ ಮುಖಂಡರು ಅವರೊಂದಿಗೆ ಹೆಚ್ಚಿನ ಚರ್ಚೆಗಳನ್ನು ಮಾಡಬಹುದೆಂದು ಹೇಳಿದರು.

ಆರಂಭದಲ್ಲಿ ಹೋರಾಟ ಸಮಿತಿಯ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಸ್ವಾಗತಿಸಿದರು. ಕೊನೆಯಲ್ಲಿ ಸಮಿತಿಯ ಉಪಾಧ್ಯಕ್ಷ ಸುಕುಮಾರ್ ರಾವ್ ಕೋಟೆಕೆರ್ ವಂದಿಸಿದರು.

ಗುಲ್ಬರ್ಗಾ ಗೆಸ್ಕಾಂಗೆ ಸಾವಿರಾರು ಜನರ ಮುತ್ತಿಗೆ



ವಿದ್ಯುತ್ ದರಗಳ ಏರಿಕೆ, ಮೀಟರೀಕರಣ, ಹಳೇ ಬಾಕಿಗಳ ರದ್ಧತಿ, 12 ತಾಸುಗಳು ವಿದ್ಯುತ್ ಪೂರೈಕೆ ಮತ್ತು ಖಾಸಗೀಕರಣಗೊಳಿಸುವ ನೀತಿಗಳ ವಿರುದ್ಧ ರಾಜ್ಯಾದ್ಯಂತ ಚಳುವಳಿ ನಡೆದಿದೆ.

ಇದೇ ಫೆಬ್ರವರಿ 24 ರಂದು ಗುಲ್ಬರ್ಗಾ ನಗರದಲ್ಲಿ ದರ ಏರಿಕೆ ಮತ್ತು ಖಾಸಗೀಕರಣ ವಿರೋಧಿ ಹೋರಾಟ ಸಮಿತಿ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ, ಕ.ಪ್ರಾ.ಕೂಲಿಕಾರರ ಸಂಘ, ಸಿಐಟಿಯು, ಎಸ್‌ಎಫ್‌ಐ, ಡಿವೈಎಫ್‌ಐ, ಪಂಪ್‌ಸೆಟ್ ಬಳಕೆದಾರರ ಸಂಘಟನೆ ಮುಂತಾದ ಸಂಘಟನೆಗಳ ಜಂಟಿ ನೇತೃತ್ವದಲ್ಲಿ 'ಗೆಸ್ಕಾಂ' ಕಛೇರಿ ಮುತ್ತಿಗೆ ನಡೆಯಿತು.

ಅಂದು ಗುಲ್ಬರ್ಗಾ, ಬೀದರ್, ಕೊಪ್ಪಳ, ರಾಯಚೂರು, ಬಳ್ಳಾರಿ ಜಿಲ್ಲೆಗಳಿಂದ ಆಗಮಿಸಿದ್ದ ಸುಮಾರು ಮೂರು ಸಾವಿರಕ್ಕೂ ಅಧಿಕವಿದ್ದ ಜನತೆ ನಗರದಲ್ಲಿ ಭಾರಿ ಮೆರವಣಿಗೆ ನಡೆಸಿ 'ಗೆಸ್ಕಾಂ' ಕಛೇರಿಯೆದುರು ಪ್ರತಿಭಟನಾ ಪ್ರದರ್ಶನ ನಡೆಸಿದರು. ಅಲ್ಲಿಯೇ ನಡೆದ ಸಭೆಯನ್ನುದ್ದೇಶಿಸಿ ಕ.ಪ್ರಾಂ. ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ, ರಾಜ್ಯ ಸಹಕಾರ್ಯದರ್ಶಿ ಯು.ಬಸವರಾಜ್, ಸಂಗ್ರಾಮ್ ವಕೀಲರು, ಬಿ.ಲಿಂಗಪ್ಪ, ಜನವಾದಿ ಮಹಿಳಾ ಸಂಘದ ರಾಜ್ಯ ಅಧ್ಯಕ್ಷರಾದ ಕೆ.ನೀಲಾ, ಸಿಐಟಿಯು ರಾಜ್ಯ ಕಾರ್ಯದರ್ಶಿ ಪ್ರಸನ್ನ ಕುಮಾರ್, ಐಕ್ಯರಂಗ ಪತ್ರಿಕೆಯ ಎಸ್.ವೈ.ಗುರುಶಾಂತ್, ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ, ರೈತ ಮುಖಂಡ ಮೇಘರಾಜ ಕಠಾರೆ, ಚೆನ್ನಪ್ಪ ಆನೆಗುಂದಿ ಮುಂತಾದವರು ಮಾತನಾಡಿದರು.

ಬೇಡಿಕೆಗಳ ಮನವಿಪತ್ರವನ್ನು 'ಗೆಸ್ಕಾಂ' ಅಧಿಕಾರಿಗಳಿಗೆ ನೀಡಲಾಯಿತು.

ಈ ಸಂದರ್ಭದಲ್ಲಿ ಆತ್ಮಹತ್ಯೆಗೀಡಾದ ಕಣದಾಳ ಗ್ರಾಮದ ರೈತರ ಶರಣಬಸಪ್ಪ ಕುಟುಂಬಕ್ಕೆ ಅಫಜಲಪುರದ ರೈತರು, ಕೋಳಿ ಸಮಾಜದ ಸದಸ್ಯರು ಸಂಗ್ರಹಿಸಿದ ರೂ. 10000 ಗಳನ್ನು ಸಂಬಂಧಕರಿಗೆ ನೀಡಲಾಯಿತು.

ಈ ಮೊದಲು ವ್ಯಾಪಕವಾದ ಪ್ರಚಾರಾಂದೋಲನವನ್ನು ಈ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿಯೂ ಕೈಗೊಳ್ಳಲಾಗಿತ್ತು. ಇದಕ್ಕೆ ಜನತೆಯ ಅಪೂರ್ವ ಸ್ಪಂದನೆ ದೊರೆತಿದೆ.

ಹೆಸ್ಕಾಂ ಮುಂದೆ ಪ್ರತಿಭಟನೆ

ಫೆಬ್ರವರಿ 26 ರಂದು ಹುಬ್ಬಳ್ಳಿಯಲ್ಲಿ ಹೆಸ್ಕಾಂ ಕಛೇರಿ ಮುಂದೆ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆದಿದ್ದು, ಬಿಜಾಪುರ, ಉತ್ತರ ಕನ್ನಡ, ಬಾಗಲಕೋಟೆ, ಹಾವೇರಿ, ಗದಗ, ಧಾರವಾಡ ಮತ್ತು ಬೆಳಗಾವಿಯ ರಾಮದುರ್ಗದಿಂದ ಸಾವಿರಾರು ರೈತ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಪಾಧ್ಯಕ್ಷ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಸಭೆಯನ್ನುದ್ದೇಶಿಸಿ ಮಾತನಾಡಿ, ವಿದ್ಯುತ್ ದರ ಏರಿಕೆ, ಮೀಟರೀಕರಣ ಹಾಗೂ ಖಾಸಗೀಕರಣದ ವಿರುದ್ಧ ಚಳುವಳಿಯನ್ನು ತೀವ್ರಗೊಳಿಸಬೇಕೆಂದು ಕರೆ ನೀಡಿದರು.

ವಿವಿಧ ಜಿಲ್ಲೆಗಳ ಹೋರಾಟ ಸಮಿತಿಗಳ ಪರವಾಗಿ ವಿ.ಪಿ.ಕುಲಕರ್ಣಿ, ವಿಠಲ ಭಂಡಾರಿ, ಭೀಮಸಿ ಕಲಾದಗಿ, ಸಿಐಟಿಯು ಕಾರ್ಯದರ್ಶಿ ವರಲಕ್ಷ್ಮಿ, ಕೃಷಿ ಕೂಲಿಕಾರರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಮೊದಲಾದವರು ಮಾತನಾಡಿದರು.

ಕೃಷಿ ಕೂಲಿಕಾರ ಸಂಘದ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಕಾರ್ಯಕ್ರಮ ನಿರೂಪಣೆ ನಡೆಸಿದ್ದು ಆರ್.ಹೆಚ್.ಆಯಿ ವಂದಿಸಿದರು.



ಕೇಂದ್ರ ಬಜೆಟ್-ಜನರ ಜೀವನದ ಮೇಲೆ ಇನ್ನೊಂದು ಧಾಳಿ

ಪುಟ 5 ರಿಂದ

ಮುಂಬರುವ ಹಲವಾರು ವರ್ಷಗಳಲ್ಲಿ ಖರ್ಚು ಮಾಡಲಾಗುವುದಂತೆ!

ಕಳೆದ ವರ್ಷದ ಬಜೆಟ್‌ಗೆ ಹೋಲಿಸಿದರೆ, 'ಬಂಡವಾಳ ವೆಚ್ಚ'ದಲ್ಲಿ ಆಗಿರುವ ಏರಿಕೆ ಕೇವಲ ಶೇ.5 ಮಾತ್ರ. ಆದರೆ ಈ ಸರಕಾರದ ವಿವಿಧ ಬಜೆಟ್ಟುಗಳನ್ನು ಪರಿಶೀಲಿಸಿದರೆ, ಬಜೆಟ್‌ನಲ್ಲಿ ಅಂದಾಜು ಮಾಡಿದ ಗುರಿಯನ್ನು ತಲುಪಿಲ್ಲ. ಅದ್ದರಿಂದ ಸಾರ್ವಜನಿಕ ಆಸ್ತಿಯನ್ನು ಹೆಚ್ಚಿಸುವ ಸಂಭವ ಇಲ್ಲ.

ಅಭಿವೃದ್ದಿಯ ಹೆಸರಿನಲ್ಲಿ ದೀರ್ಘಾವದಿ ಬಂಡವಾಳ ಲಾಭದ (long term catital gain) ಅಭಿವೃದ್ದಿಯ ಹೆಸರಿನಲ್ಲಿ ಮೇಲಿನ ತೆರಿಗೆಯನ್ನು ತೆಗೆದುಹಾಕುವ ಮೂಲಕ ಅತಿ ಹೆಚ್ಚು ರಿಯಾಯತಿಗಳನ್ನು ನೀಡಲಾಗಿದೆ.

ಸಣ್ಣ ಕೈಗಾರಿಕೆಗಳ (SSI) ಉತ್ಪಾದನೆಗೆ ಮೀಸಲಾಗಿಟ್ಟ 75 ವಸ್ತುಗಳನ್ನು ಮೀಸಲಾತಿ ಪಟ್ಟಿಯಿಂದ ತೆಗೆದು ಹಾಕಿದುದರಿಂದ ಹಾಗೂ ಕಸ್ಟಮ್ ಸುಂಕವನ್ನು ಕಡಿತ ಮಾಡಿರುವುದರಿಂದ ಆಮದು ಜಾಸ್ತಿಯಾಗಿ ದೇಶೀಯ ಕೈಗಾರಿಕೆಗಳು ನಾಶವಾಗಿ ಉದ್ಯೋಗಾವಕಾಶ ಇನ್ನಷ್ಟು ಕುಂಠಿತಗೊಳ್ಳಲಿದೆ.

ಡೀಸೆಲ್ ಮೇಲೆ ಹೇರಿದ 50 ಪೈಸೆ ಸುಂಕ, ಕೃಷಿ ಸೇರಿದಂತೆ ಎಲ್ಲಾ ಕ್ಷೇತ್ರದ ಮೇಲೆ ಪರಿಣಾಮ ಬೀರಲಿದೆ. ಇದಲ್ಲದೆ, ಕಲಬೆರಕೆಯನ್ನು ಹತೋಟಿಗೆ ತರುವ ಹೆಸರಿನಲ್ಲಿ, 'ಲೈಟ್ ಡೀಸೆಲ್' ಮೇಲೆ ಲೀಟರಿಗೆ ರೂ.1.30 ರಂತೆ ಹೆಚ್ಚುವರಿ ಅಬಕಾರಿ ಸುಂಕ ಹೇರಲಾಗಿದೆ. ಇದೂ ಸಾಲದೆಂಬಂತೆ ದೇಶದಲ್ಲಿ ಉತ್ಪಾದನೆಯಾದ ಹಾಗೂ ಆಮದು ಮಾಡಿದ ಕಚ್ಚಾ ತೈಲದ ಮೇಲೆ ಮೆಟ್ರಿಕ್‌ಟನ್‌ಗೆ 50 ರೂ.ನಂತೆ. 'ರಾಷ್ಟ್ರೀಯ ನೈಸರ್ಗಿಕ ಆಪತ್ತು ನಿಧಿ'ಯನ್ನು ಹೇರಲಾಗಿದೆ. ಇದು ಪರೋಕ್ಷ ತೆರಿಗೆಯನ್ನು ಹೆಚ್ಚು ಮಾಡುವ ಕ್ರೂರ ವಿಧಾನ. ಇದೇ ಸಂದರ್ಭದಲ್ಲಿ ಶ್ರೀಮಂತರಿಗೆ ಅನುಕೂಲವಾಗಲು ನೇರ ತೆರಿಗೆಯಲ್ಲಿ ಭಾರಿ ರಿಯಾಯತಿಯನ್ನು ನೀಡಲಾಗಿದೆ.

ರಾಜ್ಯ ಸರಕಾರಗಳಿಗೆ ನಷ್ಟ:

ರಾಜ್ಯ ಸರಕಾರಗಳಿಗೆ, ಋಣಭಾರದ ಮೂಲಕ ಬಹಳ ವರ್ಷಗಳ ಹಿಂದೆಯೇ ನೀಡಬೇಕಾಗಿದ್ದ ಸಾಲ ಯೋಜನೆಯನ್ನು ಈ ಬಜೆಟ್‌ನಲ್ಲಿ ಜಾರಿಗೊಳಿಸಲಾಗಿದೆ. ಇದು ಬಹಳ ದೊಡ್ಡ ಸಾಧನೆ ಎಂಬಂತೆ ಬಿಂಬಿಸಲಾಗುತ್ತಿದೆ. ಈ ಯೋಜನೆಯ ಪ್ರಕಾರ ಸಾಲವಿನಾಯ್ತಿ ಮಾಡುತ್ತಿಲ್ಲ. ಬದಲಾಗಿ ಸಾಲದ ಪುನರ್ ಜೋಡಣೆ (re-sehecule) ಮಾಡಲಾಗುತ್ತಿದೆ ಅಷ್ಟೆ. ಅದೇ ಸಂದರ್ಭದಲ್ಲಿ ಮೌಲ್ಯಾಧಾರಿತ ತೆರಿಗೆ (VAT)ಯನ್ನು ಜಾರಿಗೆ ತರುವುದರಿಂದಾಗಿ ರಾಜ್ಯ ಸರಕಾರಗಳಿಗೆ ನಷ್ಟ ಉಂಟಾಗುತ್ತದೆ ಎಂಬುದನ್ನು ಹಣಕಾಸು ಸಚಿವರೇ ಒಪ್ಪಿಕೊಂಡಿದ್ದಾರೆ. ಇದಕ್ಕೆ ಪರಿಹಾರವಾಗಿ ಪ್ರಥಮ ವರ್ಷದಲ್ಲಿ ಶೆ.100, ದ್ವಿತೀಯ ವರ್ಷದಲ್ಲಿ ಶೇ.75, ತೃತೀಯ ವರ್ಷದಲ್ಲಿ ಶೇ.50 ಪರಿಹಾರವನ್ನು ಸೂಚಿಸಲಾಗಿದೆ. ಆ ನಂತರದ ವರ್ಷಗಳಲ್ಲಿ ಏನು ಎಂಬುದರ ಬಗ್ಗೆ ಬಜೆಟ್ ಚಕಾರವೆತ್ತಿಲ್ಲ. ಇದರಿಂದ ರಾಜ್ಯ ಸರಕಾರಗಳಿಗೆ ತೀವ್ರ ನಷ್ಟವುಂಟಾಗಲಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಈ ಬಾರಿಯ ಕೇಂದ್ರ ಬಜೆಟ್ ಬಹುಸಂಖ್ಯಾತ ಜನರ ದೈನಂದಿನ ಜೀವನದ ಮೇಲೆ ತೀವ್ರ ಪರಿಣಾಮ ಬೀರಲಿದೆ. ಜನ ಸಾಮಾನ್ಯರ ವಿರೋಧಿಯಾದ ಶ್ರೀಮಂತರ ಪರವಾದ ಬಜೆಟ್‌ನ್ನು ಸಿಪಿಐ(ಎಂ) ತೀವ್ರವಾಗಿ ವಿರೋಧಿಸಿದೆ.

........ನಿಜರೂಪ ಬಿಚ್ಚುತ್ತಿರುವ ಸಂಘ ಪರಿವಾರ

ಪುಟ 8 ರಿಂದ

ಮಾಡಿಹೇಗೋ ಯುದ್ಧಕ್ಕೆ ಒಪ್ಪಿಗೆಯನ್ನು ಪಡೆದರೆ ಯುದ್ಧ ಸಮರ್ಥನೀಯವಾಗುತ್ತದೆಯೇ? ಅಮೇರಿಕಾದ ವಾಷಿಂಗ್ಟನ್, ನ್ಯೂಯಾರ್ಕ್, ಸಾನ್ ಫ್ರಾನ್ಸಿಸ್ಕೋವೂ ಸೇರಿದಂತೆ ವಿಶ್ವದ ಹಲವೆಡೆ ಬೃಹತ್ ಯುದ್ಧವಿರೋಧಿ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ನಡೆದ ಈ ಚರ್ಚೆಯಲ್ಲಿ ಚರ್ಚೆಯ ಸ್ವರೂಪ ಸ್ಪಷ್ಟವಾಗಿ ಸಾಮ್ರಾಜ್ಯಶಾಹಿ ವಿರೋಧಿಯಾಗಿತ್ತು. ಆದರೆ ಬಿಜೆಪಿ ಸದಸ್ಯರು ತಮ್ಮ ಪ್ರತಿಭಟನೆಯನ್ನು ದಾಖಲಿಸುವಲ್ಲಿ ವಿಫಲವಾದರು ಅಥವಾ ಪ್ರತಿಭಟನೆ ಮಾಡಬೇಕೆಂಬ ಬಯಕೆಯಾದರೂ ಅವರಿಗಿತ್ತೇ?

ಅಮೇರಿಕಾದ ಬಲೆಯಲ್ಲಿ

ಇಂತಹ ಸನ್ನಿವೇಶದಲ್ಲಿ ನಮ್ಮ ಪ್ರಧಾನಿಗಳು ಅಲಿಪ್ತ ಶೃಂಗ ಸಮ್ಮೇಳನದಲ್ಲಿ ಭಾಗವಹಿಸಲು ಕೌಲಾಲಂಪುರ್ಗೆ ಹೋದರು. ಶೃಂಗಸಭೆಯಲ್ಲಿ ಮೊದಲು ಪತ್ರಿಕೆಗಳಲ್ಲಿ ಭಾರತ ಯುದ್ಧ ಬೆದರಿಕೆಯ ವಿರುದ್ಧ ಅಲಿಪ್ತ ಆಂದೋಲನವನ್ನು ಅಣಿನೆರೆಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂಬ ಸುದ್ದಿ ತುಂಬಿ ಹೋಗಿತ್ತು. ಆದರೆ ಈ ಎಲ್ಲಾ ನಿರೀಕ್ಷೆಗಳು ಮಣ್ಣುಪಾಲಾದವು. ಅಲಿಪ್ತ ಆಂದೋಲನ ಯುದ್ಧದ ಬಗ್ಗೆ ಏನಾದರೂ ನಿಲುವು ತಳೆದಿದ್ದರೆ ಅದು ವಾಜಪೇಯಿಯವರಿಂದಾಗಿ ಅಲ್ಲ, ಅವರಿದ್ದರೂ ಈ ನಿಲುವು ತಳೆದಿದೆಯಲ್ಲ ಎನ್ನುವಂತಾಗಿದೆ.

ನಮ್ಮ ಋಷಿಸದೃಶ ಪ್ರಧಾನಿಗಳು ಭಯೋತ್ಪಾದನೆಗೆ ಬಿಟ್ಟು ಬೇರೆ ಯಾವುದೇ ವಿಷಯದ ಬಗ್ಗೆ ಮಾತಾಡಲಿಲ್ಲ. ನಿಜ ಭಯೋತ್ಪಾದನೆ ಈಗ ಮಾನವ ನಾಗರೀಕತೆಗೆ ಒಂದು ಪ್ರಧಾನ ಬೆದರಿಕೆ. ಆದರೆ ಅಮೇರಿಕನ್ ಅಧ್ಯಕ್ಷರು ನಾಗರಿಕತೆಗಳ ಸಂಘರ್ಷದ ಬಗ್ಗೆ ಏನೇ ಹೇಳಲಿ ಅಮೇರಿಕಾದ ಯುದ್ಧ ಕೋರತನವೇ ಮಾನವ ನಾಗರಿಕತೆಗೆ ಅತ್ಯಂತ ಹೆಚ್ಚಿನ ರೀತಿಯ ಭಯೋತ್ಪಾದನೆಯ ವಿರುದ್ಧ ಸಮರದಲ್ಲಿ ಇಬ್ಬಂದಿ ನಿಲುವಿಗೆ ಅವಕಾಶವಿಲ್ಲ ಎಂದು ಪ್ರದಾನಿಗಳು ಸರಿಯಾಗಿಯೇ ಹೇಳಿದ್ದರೂ, ಈ ರೀತಿಯ ಇಬ್ಬಂದಿತನ ತೋರ್ಪಡಿಸುತ್ತಿರುವ ಅತಿ ದೊಡ್ಡ ಶಕ್ತಿಯೆಂದರೆ ಅಮೇರಿಕಾ ಎಂದು ಸ್ಪಷ್ಟವಾಗಿ ಹೇಳಲು ಅವರಿಗೆ ಲಜ್ಜೆಯೆನಿಸಿತು. ತಾಲಿಬಾನ್‌ಗೆ, ಯುನಿಟಾ ಮತ್ತಿತರ ಭಯೋತ್ಪಾದಕ ಗುಂಪುಗಳಿಗೆ ಅಮೇರಿಕಾ ಬೆಂಬಲ, ಸಹಾಯ ನೀಡಿತ್ತು. ಅಲ್ಲದೆ, ಭಾರತ ಉಪಖಂಡದಲ್ಲಿ ಅದು ಭಯೋತ್ಪಾದನೆಯ ಬಗ್ಗೆ ಇರುವವರೆಗೂ ಒಂದು ಸ್ಪಷ್ಟ ನಿಲುವು ತಳೆಯಲು ಸಿದ್ದವಿಲ್ಲ ಎಂಬುದು ಏನನ್ನು ತೋರಿಸಿದೆ.?

ವಾಸ್ತವ ಸಂಗತಿಯೆಂದರೆ ಅಲಿಪ್ತ ಆಂದೋಲನದಲ್ಲಿ ಕೇವಲ ಭಯೋತ್ಪಾದನೆಯ ಮೇಲೆ ಗಮನ ಕೇಂದ್ರೀಕರಿಸಿ ವಾಜಪೇಯಿ ಅಮೇರಿಕಾದ ಬಲೆಯಲ್ಲಿ ಸಿಲುಕಿಬಿದ್ದರಷ್ಟೆ ಈ ಮೂಲಕ ಇಂದಿನ ಅತ್ಯಂತ ಮಹತ್ವದ ವಿಷಯವಾದ ಅಮೇರಿಕಾದ ಯುದ್ದಕೋರತನದಿಂದ ಗಮನವು ಬೇರೆಡೆಗೆ ಸೆಳೆದಿದ್ದರೆ ಈ ವಿಷಯದಲ್ಲಿ ಹಲವು ನಾಟೋ ದೇಶಗಳ ಸ್ಪಷ್ಟ ನಿಲುವಿನಿಂದಲೂ ಬಿಜೆಪಿ ನೇತೃತ್ವದ ಸಹಕಾರ ಹಿಂದೆ ಬಿದ್ದಂತಾಗಿದೆ.

ಬೇಸರದ ಸಂಗತಿಯೆಂದರೆ ಕಾಂಗ್ರೆಸ್ ಇಲ್ಲಿ ಕೂಡ ವಿಫಲವಾಗಿದೆ. ಸಮ್ರಾಜ್ಯಶಾಹಿ ವಿರೋಧದ ಅಮೂಲ್ಯ ಪರಂಪರೆ ಹೊಂದಿದ್ದರೂ ಕಾಂಗ್ರೆಸ್‌ನ ದನಿ ಸಂಸತ್ತಿನಲ್ಲಿ ಈ ವಿಷಯದಲ್ಲೂ ಕ್ಷೀಣವಾಗಿತ್ತು. ವಸಾಹತು ದೇಶಗಳ ಸ್ವಾತಂತ್ರ್ಯಕ್ಕಾಗಿ, ನವವಿರೋಚಿತ ದೇಶಗಳ ಸಾರ್ವಭೌಮತೆಯ ರಕ್ಷಣೆಗಾಗಿ ಹೋರಾಡಿದ ಪರಂಪರೆಯನ್ನು ಈ ಪಕ್ಷ ಕ್ರಮೇಣ ಕೈಬಿಡುತ್ತಿರುವಂತೆ ಕಾಣುತ್ತಿದೆ. ಆದರೆ ಇದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಜಾಗತೀಕರಣದ ನೀತಿಗಳನ್ನು ಅನುಸರಿಸಿ ದೇಶದ ಆರ್ಥಿಕವನ್ನು ಸಾಮ್ರಾಜ್ಯಶಾಹಿ ಶಕ್ತಿಗಳ ಮೇಲೆ ಅವಲಂಬಿಸುವಂತೆ ಮಾಡುತ್ತಿರುವ ಪಕ್ಷದಿಂದ ಕ್ರಮೇಣ ಬೇರೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ.

ಕಾಂಗ್ರೆಸ್‌ಗೆ ಕೋಮುವಾದದ ವಿರುದ್ಧ ಹೋರಾಟದಲ್ಲಿ ಒಂದು ಪ್ರಮುಖ ಪಾತ್ರವಿದೆ. ಅದಕ್ಕೆ ಸಾಮ್ರಾಜ್ಯಶಾಹಿ ವಿರೋಧಿ ಪರಂಪರೆಯಿದೆ ಎಂಬುದು ನಿಜ. ಆದರೆ ಅದು ತನ್ನ ಪಾತ್ರವನ್ನು ವಹಿಸಬೇಕಾದರೆ ಸಾಮೂಹಿಕ ಕಾರ್ಯಾಚರಣೆಗಳು ತನ್ನ ಚಂಚಲತೆಯನ್ನು ಹಿಂಜರಿಕೆಯನ್ನು ಮೀರಿ ನಿಂತು ಒಂದು ದೃಢ ನಿಲುವು ತಳೆಯುವಂತೆ ಒತ್ತಡ ನಿರ್ಮಿಸಬೇಕು. ಈ ಹಿನ್ನೆಲೆಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಟ್ಟುಗೂಡಿ ಜನಗಳನ್ನು ಜಾಗೃತಗೊಳಿಸುವ ಮುತುವರ್ಜಿ ವಹಿಸುವ ಅವಶ್ಯಕತೆ ಎದ್ದು ಕಾಣುತ್ತಿದೆ. ಇದು ಕೋಮುವಾದಿ ಮತ್ತು ಸಾಮ್ರಾಜ್ಯಶಾಹಿ ಪರ ಶಕ್ತಿಗಳ ಸವಾಲುಗಳನ್ನು ಎದುರಿಸಲು ನೇರ ಹಣಾಹಣಿಗೆ ಅಗತ್ಯಮಷ್ಟೇ ಅಲ್ಲ. ಕಾಂಗ್ರೆಸ್ ಮತ್ತು ಇತರ ಕೆಲವು ಪಕ್ಷಗಳ ಚಂಚಲತೆ ಹಿಂಜರಿಕೆಗಳನ್ನು ತೊರೆಯುವಂತೆ ಮಾಡಲು ಕೂಡಾ ಅಗತ್ಯ.

ದ್ವೇಷಕ್ಕೆ ಡಾಲರುಗಳ ರವಾನೆ..

ಪುಟ 7 ರಿಂದ

ಆರ್‌ಎಸ್‌ಎಸ್ ಅಂಗಸಂಸ್ಥೆಯು ಸಂಸ್ಕೃತ ಭಾಷೆಯನ್ನು ಪ್ರೋತ್ಸಾಹಿಸುವ ಕೆಲಸದಲ್ಲಿ ತೊಡಗಿದೆ. ಆರ್‌ಎಸ್‌ಎಸ್ ವೆಬ್‌ಸೈಟ್ ಪ್ರಕಾರ ಸಂಘವು ಸ್ಥಾಪಿಸಿರುವ ಈ ಸಂಘಟನೆ ನಡೆಸಿರುವ ಸಾವಿರಾರು "ಸಂಸ್ಕೃತದಲ್ಲಿ ಮಾತನಾಡಿ" ಶಿಬಿರಗಳ ಮೂಲಕ ಜನರಿಗೆ ಕೇವಲ 10 ದಿನಗಳಲ್ಲಿ 'ದೇವತೆಗಳ ಭಾಷೆ'ಯಲ್ಲಿ ಮಾತನಾಡಲು ಕಲಿಸಿದೆ. ಅಮೇರಿಕದಲ್ಲಿಯೂ ಈ ಸಂಘಟನೆ ಸಂಸ್ಕೃತ ತರಬೇತಿ ಶಿಬಿರಗಳನ್ನು ನಡೆಸುತ್ತದೆ. ಭಾಷೆಯನ್ನು ಕಲಿಸುವ ಹೆಸರಿನಲ್ಲಿ ಸಂಘ ಸಿದ್ಧಾಂತ ಪ್ರಸಾರಕ್ಕೆ ಆದ್ಯತೆ ನೀಡಲಾಗುತ್ತದೆ.

'ಭಾರತ್ ವಿಕಾಸ್ ಪರಿಷತ್' ಎಂಬ ಹೆಸರಿನ ಸಂಘಟನೆಯು ಮೂಲಕ ಆರ್‌ಎಸ್‌ಎಸ್ ' ಭಾರತೀಯ ಮೌಲ್ಯಗಳ ರಕ್ಷಣೆಯ ಕಾರ್ಯದಲ್ಲಿ ಸಮಾಜದ ಶ್ರೀಮಂತ ವರ್ಗದವರನ್ನು ತೊಡಗಿಸಲು ಪ್ರಯತ್ನಿಸುತ್ತಿದೆ. ಹಿಂದೂ ಜಾತಿ ಪದ್ಧತಿಯ ಶ್ರೇಣೀಕೃತ ವ್ಯವಸ್ಥೆಯನ್ನು ಸ್ವೀಕಾರಾರ್ಹಗೊಳಿಸುವುದು ಇದರ ಉದ್ದೇಶವಾಗಿದೆ. ಕೊಳಚೆ ಪ್ರದೇಶಗಳ ದತ್ತು ಸ್ವೀಕಾರ, ಶಾಲಾ ಮಕ್ಕಳಿಗೆ ರಾಮಾಯಣ, ಮಹಾಭಾರತ ಕುರಿತಾದ ಸ್ಪರ್ಧೆಗಳನ್ನು ಏರ್ಪಡಿಸುವುದು ಭಾರತ ವಿಕಾಸ ಪರಿಷತ್ ನಡೆಸುವ ಇತರ ಚಟುವಟಿಕೆಗಳಾಗಿವೆ. 1992 ರಲ್ಲಿ ಅಯೋಧ್ಯೆಯಲ್ಲಿ ಸಂಘ ಪರಿವಾರದವರು ನಾಶ ಮಾಡಿದ ಬಾಬ್ರಿ ಮಸೀದಿಯ ಜಾಗದಲ್ಲಿ ರಾಮ ಮಂದಿರ ಕಟ್ಟುವ ವಿಷಯದಲ್ಲಿ ವಿಶ್ವ ಹಿಂದೂ ಪರಿಷತ್ತಿಗೆ ಕಾನೂನು ಸಲಹೆ ನೀಡುತ್ತಿರುವ ಜಸ್ಟೀಸ್ ರಾಮಾ ಜೋಯೀಸ್ ಅವರು ಭಾರತ್ ವಿಕಾಸ್ ಪರಿಷತ್ತಿನ ಅಧ್ಯಕ್ಷರು!

'ರಾಷ್ಟ್ರೀಯ ಸಮಗ್ರತೆಯ ಹುತಾತ್ಮರ ನಿಧಿ' ಎಂಬ ಹೆಸರಿನಲ್ಲಿ 'ಪಾಕಿಸ್ತಾನಿ ಭಯೋತ್ಪಾದಕರಿಂದ ಹತರಾದ ಹಿಂದುಗಳ ಕುಟುಂಬಗಳಿಗೆ ನೆರವು ಸಂಗ್ರಹಿಸಲಾಗುತ್ತದೆ. ಹೀಗೆ ಅಸಂಖ್ಯಾತ ಸಂಘ ಸಂಸ್ಥೆಗಳು ವಿದೇಶಗಳಿಂದ ಹಾಗೂ ದೇಶದ ಒಳಗೆ ಸಂಗ್ರಹಿಸಿ ಒದಗಿಸುವ ಭಾರೀ ಮೊತ್ತದ ಹಣವನ್ನು ಅತ್ಯಂತ ಅನುಮಾನಾಸ್ಪದ ಉದ್ದೇಶಗಳಿಗಾಗಿ ವಿನಿಯೋಗಿಸಲಾಗುತ್ತಿದೆ. ಐಡಿಆರ್ ಎಫ್ ಅಂತಹ overseas friends of the BJP ಎಂಬ ಇನ್ನೊಂದು ಸಂಘಟನೆಯು ಸಹ ತನ್ನ ಅನೇಕ ಬಾಹುಗಳ ಮೂಲಕ ವಿದೇಶಗಳಲ್ಲಿ ಹಣ ಸಂಗ್ರಹಿಸಿ ರವಾನಿಸುತ್ತಿದೆ. ವಿಶ್ವ ಹಿಂದೂ ಪರಿಷತ್ ಅಮೇರಿಕ, ಇಂಗ್ಲೆಂಡ್ ಮತ್ತು ಕೆನಡಾದಲ್ಲಿರುವ ತನ್ನ ಅನೇಕ ಅಂತರಾಷ್ಟ್ರೀಯ ಶಾಖೆಗಳ ಮೂಲಕ ಪರಿಷತ್ತಿನ ಯೋಜನೆಗಳಿಗಾಗಿ ಹಣ ಸಂಗ್ರಹ ಮಾಡುತ್ತಿದೆ. ಅಮೇರಿಕದ ಸಾಫ್ಟ್‌ವೇರ್ ಕ್ಷೇತ್ರಕ್ಕೆ ಭಾರತೀಯರ ವಲಸೆ ಕಳೆದ ಎರಡು ದಶಕಗಳಲ್ಲಿ ಸಾಕಷ್ಟು ಹೆಚ್ಚಾಗಿದ್ದು ಅಂತಹ ದೊಡ್ಡ ಹೈ-ಟೆಕ್ ಕಂಪನಿಗಳಲ್ಲಿ ಸಂಘ ಪರಿವಾರದ ಕಾರ್ಯಕರ್ತರು ಕ್ರಿಯಾಶೀಲರಾಗಿದ್ದು ಕಂಪನಿಯಿಂದಲೂ, ವಲಸೆ ಬಂದ ಭಾರತೀಯ ಮೂಲದವರಿಂದಲೂ ಅಪಾರ ಮೊತ್ತದ ಹಣವನ್ನು ಸಂಗ್ರಹಿಸುತ್ತಾರೆ.

ಭಾರತದಲ್ಲಿ ಅಭಿವೃದ್ಧಿ ಹಾಗೂ ಪರಿಹಾರ ಚಟುವಟಿಕೆಗಳಿಗೆ ಹಣ ಒದಗಿಸಲು ಐಡಿಆರ್‌ಎಫ್ ಅಂತಹ ಸಂಘಟನೆಗಳೇ **ಅತ್ಯಂತ ನಂಬಿಗಸ್ಥ ಸಂಘಟನೆಗಳೆಂದು ಅಲ್ಲಿಯ ಕಂಪನಿಗಳನ್ನು ಸಂಘದ ಸ್ವಯಂ ಸೇವಕರು ನಂಬಿಸುತ್ತಾರೆ. ಕ್ರೈಸ್ತರು ಮತ್ತು ಮುಸಲ್ಮಾನರು ವಿದೇಶಗಳಿಂದ ಹಣ ತರಿಸಿಕೊಳ್ಳುತ್ತಾರೆ ಎಂದು ಆರೋಪಿಸುತ್ತಾ ಬಂದಿದ್ದ ಸಂಘ ಪರಿವಾರದವರ ಬಣ್ಣ ಈಗ ಬಯಲಾಗಿದೆ.** ಹೀಗೆ ಸಂಗ್ರಹಿಸಲಾದ ಹಣವನ್ನೇ ಗುಜರಾತ್‌ನಲ್ಲಿ ಮುಸಲ್ಮಾನರ ಜನಾಂಗೀಯ ಹತ್ಯೆಗೆ ಬಳಸಿದ್ದು ಈಗ ಬಯಲಾಗಿದೆ.

ಧರೆಯು ಉದ್ದಗಲ ಶಾಂತಿಯ ಹಂಬಲ



ವಿಶ್ವ ಕುಂದಾಪುರ

ಇರಾಕ್ ಮೇಲೆ ಅಮೆರಿಕಾ ಸಾರಬೇಕೆಂದಿರುವ ಯುದ್ಧದ ವಿರುದ್ಧ ಜಗತ್ತಿನಾದ್ಯಂತ ಭಾರಿ ಪ್ರತಿಭಟನೆಗಳು ನಡೆದಿರುವ ಸುದ್ದಿ ಓದಿದ್ದೀರಿ. ಯುದ್ಧ ಸಾರಿರುವ ದೇಶಗಳ ಜನತೆಯೇ ಈ ಪ್ರತಿಭಟನೆಗೆ ಇಳಿದಿದ್ದಾರೆ ಎಂಬುದು ಗಮನಾರ್ಹ ಅಂಶ. ಆ ದೇಶದ ಜನ ಎತ್ತ ಕಡೆ ಇದ್ದಾರೆ ಎಂದು ಸಮೀಕ್ಷೆ ನಡೆಸಿದ ವರದಿ ಇಲ್ಲಿದೆ.

ಇರಾಕ್‌ನಲ್ಲಿ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳು ಇಲ್ಲವೆಂದು ವಿಶ್ವಸಂಸ್ಥೆ ನಿಯೋಜಿತ ತಜ್ಞರು ವರದಿ ನೀಡಿದರೂ 'ಎಣ್ಣೆ ರಾಜಕಾರಣ' ಮುಂದುವರಿಸಿರುವ 'ಬುಶ್ಯಣ್ಣ' ಏನಾದರೂ ಮಾಡಿ ಹೇಗಾದರೂ ಮಾಡಿ ಇರಾಕ್ ಮೇಲೆ ಸಮರ ಹೂಡಲೇಬೇಕೆಂಬ ತವಕದಲ್ಲಿದ್ದಾರೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಜಗತ್ತಿನ ಜನರ ಅಭಿಪ್ರಾಯ ಈ ಯುದ್ಧಸನ್ನಾಹಕ್ಕೆ ವಿರೋಧವಾಗಿದೆ. ಸಮರವಿರೋಧಿ ಪ್ರದರ್ಶನಗಳು ಶುರುವಾಗಿವೆ. 41 ದೇಶಗಳಲ್ಲಿ ಈಚೆಗೆ ನಡೆಸಲಾದ ಸಮೀಕ್ಷೆಗಳು ಕೂಡ ಶಾಂತಿಪರ ದನಿಯನ್ನೇ ಬಿಂಬಿಸಿವೆ. ಬುಶ್‌ರ 'ಬುಸ್' ನೀತಿಯನ್ನು 'ಠುಸ್' ಗೊಳಿಸುವ ಸಮೀಕ್ಷೆ ಫಲಿತಾಂಶಗಳತ್ತ ಒಂದು ನಜರು.

'ಜಗದ್ರಕ್ಷಕ' ಬುಷ್ ಮಹಾಶಯ ಏನಾದರೂ ಮಾಡಿ ಇರಾಕ್ ಮೇಲೆ ಯುದ್ಧ ಹೂಡಬೇಕೆಂದು ತಹತಹಿಸುತ್ತಿರುವಾಗಲೇ ಜಾಗತಿಕ ಪೋಲೀಸನ ಮಿತ್ರ ದೇಶಗಳಲ್ಲೇ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ದಂಗುಬಡಿಸುವ ಪ್ರಭಲ ಯುದ್ಧವಿರೋಧಿ ಪ್ರದರ್ಶನಗಳು ನಡೆಯತೊಡಗಿವೆ. ಶಾಂತಿಪರ ಮೆರವಣಿಗೆ, ಭಾಷಣಗಳು ಯುದ್ಧ ಪಿಪಾಸುಗಳ ಮನಸ್ಸಿನ ಮೇಲೆ ಪರಿಣಾಮ ಬೀರಿ ಅವರು ಹಿಂದೆ ಸರಿಯುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಇಂಥ ಆಂದೋಲನಗಳಂತೂ ವಿಶ್ವಶಾಂತಿ ಬಯಸುವ ಜನರಿಗೆ ತೃಪ್ತಿ ತರುವ ಸಂಗತಿಯಾಗಿದೆ.

ಒಂದೆಡೆ ಜನರು ಬೀದಿಗಿಳಿದು ಶಾಂತಿಗಾಗಿ ದನಿ ಎತ್ತುತ್ತಿದ್ದಾರೆ. ಇನ್ನೊಂದೆಡೆ ಅದಕ್ಕೆ ಪೂರಕವಾಗಿ ಬೇರೆ ಬೇರೆ ವಿಭಾಗಗಳಲ್ಲಿ ನೊಬೆಲ್ ಪುರಸ್ಕಾರ ಪಡೆದ ವಿದ್ವಾಂಸರು, ವಿಜ್ಞಾನಿಗಳು ಮನುಕುಲದ ಪ್ರಗತಿಗೆ ಮಾರಕವಾಗುವ ಯುದ್ಧ ಬೇಡವೆಂಬ ಹೇಳಿಕೆಗಳನ್ನು ಹೊರಡಿಸಿ ನೀಲಾಗಸದಲ್ಲಿ ಪಾರಿವಾಳಗಳನ್ನಷ್ಟೇ ಕಾಣಬಯಸುವ ಜನತೆಯ ಹುಮ್ಮಸ್ಸನ್ನು ದುಪ್ಪಟ್ಟುಗೊಳಿಸುತ್ತಿದ್ದಾರೆ.


ಎಲ್ಲಾ ಖಂಡಗಳಲ್ಲಿ, ಎಲ್ಲ ದೇಶಗಳಲ್ಲಿ ಜನರು ಯುದ್ಧದ ವಿರುದ್ಧ ಅಭಿಪ್ರಾಯ ಹೊಂದಿರುವುದು ಅನೇಕ ಸಮೀಕ್ಷೆಗಳಿಂದ ತಿಳಿದುಬಂದಿದೆ. ಅಂಥ ಕೆಲವು ಪ್ರಮುಖ ಸಮೀಕ್ಷೆಗಳತ್ತ ಒಂದು ಕಿರು ನೋಟವಿದು.

ಇರಾಕ್ ವಿರುದ್ಧ ಅಮೇರಿಕ ಏಕಪಕ್ಷೀಯ ಮಿಲಿಟರಿ ಕ್ರಮ ಕೈಗೊಳ್ಳುವುದಕ್ಕೆ 41 ದೇಶಗಳ ಶೇಕಡ 80 ರಿಂದ 90 ರಷ್ಟು ಜನರು ವಿರೋಧವಾಗಿದ್ದಾರೆ. ಯಾವ ಸಂದರ್ಭದಲ್ಲೂ ಇರಾಕ್ ವಿರುದ್ಧ ಸೇನಾ ಕ್ರಮಕ್ಕೆ ಮುಂದಾಗಬಾರದು ಎನ್ನುವುದು ಶೇಕಡ 50ಕ್ಕೂ ಹೆಚ್ಚು ಜನರ ಅಭಿಮತ. 'ವಿಶ್ವ ಸಂಸ್ಥೆಯ ಅನುಮತಿ ಇದ್ದರೆ ಮಾತ್ರವೇ ಇರಾಕ್ ವಿರುದ್ಧ ಸೇನಾ ಕ್ರಮ ಕೈಗೊಳ್ಳಬಹುದು' ಎಂಬುದು ಸುಮಾರು ಶೇ.30 ಮಂದಿಯ ಅಭಿಪ್ರಾಯವಾಗಿದೆ ಅಷ್ಟೆ.

ಗ್ಯಾಲಪ್ ಅಂತರಾಷ್ಟ್ರೀಯ ಇರಾಕ್ ಸಮೀಕ್ಷೆ-2003 ಇದರ ಕೆಲವು ಪ್ರಮುಖ ಅಂಶಗಳು ಇವು. ಭಾರತ ಸೇರಿ 41 ದೇಶಗಳ ಜನರ ನಡುವೆ ಈ ಸಮೀಕ್ಷೆ ನಡೆಸಲಾಗಿದೆ.

ತೈಲದಾಹ ರಕ್ತದಾಹ!

ಜನವರಿ 7 ರಿಂದ 27ರವರೆಗೆ ಅಮೇರಿಕ, ಆಫ್ರಿಕಾ, ಫೆಸಿಫಿಕ್, ಯುರೋಪ್ ಆದಿಯಾಗಿ ಜಗತ್ತಿನ ನಾನಾ ಭಾಗಗಳಲ್ಲಿ ನಡೆಸಿದ ಸಮೀಕ್ಷೆಯ ಫಲಿತಾಂಶ ಜಾರ್ಜ್ ಬುಷ್-ಟೋನಿ ಬ್ಲೇರ್ ಜೋಡಿಯ ತೈಲ ದಾಹಕ್ಕಾಗಿ, ರಕ್ತದಾಹದ ಉತ್ಕಟತೆಗೆ ಎದ್ದುಬರುತ್ತಿರುವ ವ್ಯಾಪಕ ವಿರೋಧಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.




ಅಮೇರಿಕದ ನಾಗರೀಕರ ಪೈಕಿ ಶೇಕಡ 21 ರಷ್ಟು ಜನರು ಯುದ್ಧಕ್ಕೆ ವಿರೋಧವಾಗಿದ್ದಾರೆ ಎಂಬುದು ಗ್ಯಾಲಪ್ ಇಂಟರ್‌ನ್ಯಾಷನಲ್ ಸಂಸ್ಥೆಯ ಹೇಳಿಕೆ.

ವಿಶ್ವಸಂಸ್ಥೆಯ ಹೊಸ ನಿರ್ಣಯವಿಲ್ಲದೆ ಇರಾಕ್ ವಿರುದ್ಧ ಸಮರ ಸಾರುವುದು ತರವಲ್ಲ ಎಂಬುದು ಶೇಕಡ 84 ರಷ್ಟು ಬ್ರಿಟೀಷ್ ಜನತೆಯ ಒಕ್ಕೊರಲ ಅಭಿಮತವಾಗಿದೆ. ಯುದ್ಧದಲ್ಲಿ ಬ್ರಿಟೀಷ್ ಪಡೆಗಳು ಪಾಲ್ಗೊಂಡರೆ ಪ್ರತೀಕಾರವಾಗಿ ಭಯೋತ್ಪಾದಕರು ಬ್ರಿಟನ್ ಮೇಲೆ ಆಕ್ರಮಣ ನಡೆಸಬಹುದೆಂಬುದು ಸುಮಾರು ಶೇ.73 ಜನರ ಭೀತಿ. ಆದರೆ ಹಾಗಾಗದು ಎನ್ನುವುದು ಕೇವಲ ಶೇ.2 ಮಂದಿಯ ವಿಶ್ವಾಸ.

ಐಸಿಎಂ ನಡೆಸಿದ ಈ ಸಮೀಕ್ಷೆ 'ಡೈಲಿ ಮಿರರ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇರಾಕ್ ಶಸ್ತ್ರಾಸ್ತ್ರ ಕಾರ್ಯಕ್ರಮಗಳ ಕುರಿತು ವಿಶ್ವಸಂಸ್ಥೆಯ ಶಸ್ತ್ರಾಸ್ತ್ರ ಪರೀಕ್ಷಕರು ಜನವರಿ 27 ರಂದು ಭದ್ರತಾ ಮಂಡಳಿಗೆ ವರದಿ ಸಲ್ಲಿಸಿದ ನಂತರದಲ್ಲಿ ಬ್ರಿಟನ್‌ನಲ್ಲಿ ಯುದ್ಧದ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಪ್ರಬಲವಾಗಿದೆ ಎಂದು ಪತ್ರಿಕೆ ವರದಿ ಮಾಡಿದೆ.

ಬ್ಲೇರ್‌ಗೆ ತರಾಟೆ

ವಿಶ್ವಸಂಸ್ಥೆಯ ಅಸ್ತುಮುದ್ರೆ ಇರಲಿ ಇಲ್ಲದಿರಲಿ; ಬ್ರಿಟನ್ ಈ ಸಮರದಲ್ಲಿ ಪಾಲ್ಗೊಳ್ಳಲೇಬಾರದು ಎಂಬುದು ಸಮೀಕ್ಷೆಯಲ್ಲಿ ಪ್ರಶ್ನೆ ಎದುರಿಸಿದವರ



ಪೈಕಿ, 43 ಜನರ ಸ್ಪಷ್ಟ ನಿಲುವಾಗಿದೆ. ಬ್ಲೇರ್ ತಮ್ಮ ದೇಶದ ಜನರ ಸಾರ್ವಜನಿಕ ಅಭಿಪ್ರಾಯಕ್ಕಿಂತ ಬುಷ್‌ಗೆ ಮಣೆ ಹಾಕುವಂತೆ ಕಾಣುತ್ತಿದೆ ಎಂದು 'ಸೂರ್ಯ ಮುಳುಗಿದ' ಸಾಮ್ರಾಜ್ಯದ ವಿವೇಕವಂತ ಜನರು ತಮ್ಮ ಪ್ರಧಾನಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಫ್ರಾನ್ಸ್‌ನ ಶೇಕಡ 73 ಜನರು ಇರಾಕ್ ಮೇಲಿನ ಯುದ್ಧಕ್ಕೆ ವಿರುದ್ಧವಾಗಿರುವುದು ಸಿಎಸ್‌ಎ ಸಂಸ್ಥೆ ನಡೆಸಿದ ಸಮೀಕ್ಷೆಯಿಂದ ಗೊತ್ತಾಗಿದೆ. ಜನವರಿ 23 ರಂದು ಈ ಸಮೀಕ್ಷೆ ಪ್ರಕಟವಾಗಿದೆ.

ಜರ್ಮನಿಯ ಫೋರ್ಸಾ ಸಂಸ್ಥೆ ನಡೆಸಿದ ಸಮೀಕ್ಷೆ ಪ್ರಕಾರ ಯುದ್ಧಕ್ಕೆ ಅಸ್ತು ಎನ್ನುವ ವಿಶ್ವಸಂಸ್ಥೆ ನಿರ್ಣಯಕ್ಕೆ ಜರ್ಮನಿ ವಿಟೋ ಚಲಾಯಿಸಬೇಕೆಂಬುದು ಆ ದೇಶದ ಶೇ.69 ಜನತೆಯ ಆಕಾಂಕ್ಷೆಯಾಗಿದೆ. ಯಾವುದೇ ಯುದ್ಧದಲ್ಲಿ ಜರ್ಮನಿ ಸೇನೆ ಭಾಗವಹಿಸಕೂಡದು ಎನ್ನುವುದು 'ಡೆರ್ ಸ್ಪೀಗಲ್' ನಿಯತಕಾಲಿಕದ ಸಮೀಕ್ಷೆಯ ಅಭಿಮತ. ಶೇ.73 ಜನರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸ್ಪೇನ್‌ನ 'ಎಲ್ ಮಂಡೋ' ಪತ್ರಿಕೆ ನಡೆಸಿದ ಸಮೀಕ್ಷೆ ಪ್ರಕಾರ ದೇಶದ ಶೇ.80 ರಷ್ಟು ಜನರು ಇರಾಕ್ ಯುದ್ಧಕ್ಕೆ ವಿರುದ್ಧವಾಗಿದ್ದಾರೆ. ಅಲ್ಲಿನ ರೇಡಿಯೋ ಕೇಂದ್ರ ನಡೆಸಿದ ಸಮೀಕ್ಷೆಯಲ್ಲಿ ಶೇ.6.6 ಜನರು ಮಾತ್ರವೇ ಯುದ್ಧ ಬೇಕು ಎಂದಿದ್ದಾರೆ. ಇಟಲಿಯ ಎಸ್‌ಡಬ್ಲ್ಯುಜಿ ಸಮೀಕ್ಷೆಯಂತೆ ಶೇಕಡ 72.7 ಮಂದಿ ಸಮರೋತ್ಸಾಹಕ್ಕೆ ತಣ್ಣೀರೆರಚಿದ್ದಾರೆ. ಶೇ.79 ರಷ್ಟು ಡಚ್ಚರು ಕೂಡ ಸಾಮ್ರಾಜ್ಯಶಾಹಿಯ ಯುದ್ಧದಾಹಕ್ಕೆ ಛೀಮಾರಿ ಹಾಕಿದ್ದಾರೆ. ಸಾರ್ವಜನಿಕ ನಿಧಿಯಿಂದ ನಡೆಸಲಾದ ಅಭಿಪ್ರಾಯ ಸಂಗ್ರಹವೊಂದರ ಪ್ರಕಾರ ಚೆಕ್ ಗಣರಾಜ್ಯ ಶೇ.67 ಮಂದಿಗೆ ಯುದ್ಧ ಬೇಕಿಲ್ಲ. ಯಾವ ಸಂದರ್ಭದಲ್ಲೂ ಮಿಲಿಟರಿ ಕಾರ್ಯಾಚರಣೆ ಕ್ಷೇಮವಲ್ಲವೆಂಬುದು ಹಂಗೇರಿಯ ಶೇ.82 ಜನತೆಯ ಅಭಿಮತ.

ಈ ರೀತಿಯಾಗಿ ಜಗತ್ತಿನ ನಾನಾ ಖಂಡಗಳ, ನಾನಾ ರಾಜಕೀಯ ಪಕ್ಷ-ಸಿದ್ಧಾಂತದ ಸರಕಾರಗಳಿರುವ ದೇಶಗಳ ಜನತೆ ಅಮೇರಿಕ ಪ್ರೇರಿತ ಯುದ್ಧ ಹುನ್ನಾರದ ಬಗ್ಗೆ ವ್ಯಕ್ತಪಡಿಸುತ್ತಿರುವ ಅಭಿಪ್ರಾಯ ಮಾತ್ರ ಒಂದೇ ಆಗಿದೆ. ಜಗತ್ತಿಗೆ ಪ್ರಜಾಪ್ರಭುತ್ವದ ಪಾಠ ಹೇಳುವ ಅಮೇರಿಕ ಇಳೆಯ ಜನರ ಕಳಕಳಿಗೆ, ಕಾಳಜಿಗೆ ಸ್ಪಂದಿಸೀತೇ? □

ಜಾಗತಿಕ ಶಾಂತಿಗಾಗಿ ಮೊಂಬತ್ತಿ ಮೆರವಣಿಗೆ

ಅಮೇರಿಕದ ಜಾರ್ಜ್ ಬುಷ್ ಸರಕಾರ ತೀವ್ರ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿದೆ. ಅಲ್ಲಿನ ಜನತೆ ಬುಷ್ ಸರಕಾರದ ಮೇಲಿನ ವಿಶ್ವಾಸವನ್ನು ಕಳೆದುಕೊಳ್ಳುತ್ತಿದೆ. ಇರಾಕ್ ಸರಕಾರ ಸಮೂಹ ನಾಶಕ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿದೆ ಎಂದು ಆಪಾದಿಸಿದೆ. ಮನ್ನಣೆ ಸಿಗದಿದ್ದರೂ ಇರಾಕ್ ಮೇಲೆ ದಾಳಿ ಮಾಡುವುದಾಗಿ ಬುಷ್ ಘೋಷಿಸಿದ್ದಾರೆ. ಅಮೇರಿಕದಲ್ಲಿನ ಶಾಂತಿಪ್ರಿಯ ಜನತೆ ಬುಷ್‌ರ ಯುದ್ಧಕೋರ ನೀತಿಯನ್ನು ವಿರೋಧಿಸುತ್ತಿದೆ. ಜಗತ್ತಿನಾದ್ಯಂತ ಹಲವಾರು ದೇಶಗಳಲ್ಲಿ ಲಕ್ಷಾಂತರ ಜನ ಅಮೇರಿಕದ ಯುದ್ಧಕೋರ ನೀತಿಯ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. (ಸಂಯುಕ್ತ ರಾಷ್ಟ್ರ ಸಂಸ್ಥೆಯ ಶಸ್ತ್ರಾಸ್ತ್ರ ತಪಾಸಣಾ ಸಮಿತಿಯು ಇರಾಕ್‌ನಲ್ಲಿ ಬುಷ್ ಹೇಳುವಂತಹ ಶಸ್ತ್ರಾಸ್ತ್ರಗಳ ತಯಾರಿ ಆಗುತ್ತಿಲ್ಲ ಎಂದು ವರದಿ ಕೊಟ್ಟಿವೆ. ಆದರೆ ಬುಷ್‌ಗೆ ಯುದ್ಧ ಮಾಡುವ ಚಪಲ. ಅವರಿಗೆ ಸದ್ದಾಂಕಿಂತ ಇರಾಕ್‌ನಲ್ಲಿರುವ ತೈಲ ಸಂಪತ್ತಿನ ಮೇಲೆ ಹತೋಟಿ ಸಾಧಿಸಬೇಕಾಗಿದೆ. ಅಫಘಾನಿಸ್ತಾನದಲ್ಲಿ ಈ ನಿಟ್ಟಿನಲ್ಲಿ ಅಮೇರಿಕಾ ಯಶಸ್ವಿಯಾಗಿದೆ.

ಅಮೇರಿಕದ ಬುಷ್ ಸರಕಾರದ ಯುದ್ಧಕೋರ ನೀತಿ ಪ್ರತಿಭಟಿಸಿ ಫೆಬ್ರವರಿ 21 ರಂದು ಧಾರವಾಡದಲ್ಲಿ "ಜಾಗತಿಕ ಶಾಂತಿಗಾಗಿ ಜನತೆ" ವೇದಿಕೆಯ ಅಡಿಯಲ್ಲಿ ಫೆಬ್ರವರಿ 21 ರ ಸಂಜೆ ಕಲಾಭವನದಿಂದ ಮೊಂಬತ್ತಿ ಮೆರವಣಿಗೆ (Candle Light March) ನಡೆಯಿತು. ಕಾರ್ಯಕ್ರಮದಲ್ಲಿ ಶಾಂತಿಪ್ರಿಯ ಜನತೆ, ಯುವಕರು, ವಿದ್ಯಾರ್ಥಿಗಳು, ಮಹಿಳೆಯರು, ವಯೋವೃದ್ಧರು, ಮಕ್ಕಳು ಬಹು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಯುದ್ಧದ ಪರಿಣಾಮ ಅಸಂಖ್ಯಾತ ಜನರ ಜೀವಹಾನಿ, ಆರ್ಥಿಕ ಮುಗ್ಗಟ್ಟಿನ ಉಲ್ಬಣ ಹಾಗೂ ರೋಗ-ರುಜಿನಗಳ ಹಬ್ಬುವಿಕೆ. ಆದ್ದರಿಂದ ಯುದ್ಧ ಬೇಡ ಶಾಂತಿ ಬೇಕು ಅನ್ನುವ ಘೋಷಣೆ ಮೊಳಗಿದವು.

ರಾಜ್ಯಮಟ್ಟದ ಶೈಕ್ಷಣಿಕ ಹಬ್ಬ

ಶೈಕ್ಷಣಿಕ ರಂಗದ ಬೆಳವಣಿಗೆ ಹಾಗೂ ಶಿಕ್ಷಕ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯನ್ನು ಗಮನದಲ್ಲಿರಿಸಿ, ಆ ಸಮೂಹದ ಶಕ್ತಿಯನ್ನು ಜ್ಞಾನ-ವಿಜ್ಞಾನದ ಜನ ವಿಭಾಗದ ಚಳುವಳಿಯೊಂದಿಗೆ ವಿಶಾಲವಾಗಿ ಬೆಸೆಯುವ ಮಹತ್ವದ ಹಾದಿಯಲ್ಲಿ ಆರಂಭಗೊಂಡ ಟೀಚರ್ ಪತ್ರಿಕೆಗೆ ಒಂದು ವರ್ಷ ಯಶಸ್ವಿಯಾಗಿ ಪೂರೈಸಿದ ಸಂಭ್ರಮ. ಅದರ ಆಚರಣೆ ರೂಪಿಸಿದ ವಿಶಿಷ್ಟ ಕಾರ್ಯಕ್ರಮದ ವರದಿ

ಟೀಚರ್ ಪತ್ರಿಕೆಯ ಪ್ರಥಮ ವಾರ್ಷಿಕೋತ್ಸವ

"ಏನ್ರಪ್ಪಾ ಬಹಳ ಗದ್ದಲ ಮಾಡ್ತಿದ್ದೀರಿ ...." ಒಂದು ಟೀಚರ್ ವಾತಾವರಣವೇ ಸೃಷ್ಟಿಯಾಗಿದೆ. "ಬರದೆ ಇರ್‍ಲಿಕ್ಕಾಗುತ್ತದಾ" ದಿ: 20.02 2003 ರಂದು ತುಮಕೂರಿನ ಗೆಳೆಯರೊಬ್ಬರಿಗೆ ಸಮಾವೇಶಕ್ಕೆ ಬರುವಂತೆ ಆಹ್ವಾನಿಸುತ್ತಿದ್ದಾಗ ಅವರ ಪ್ರತಿಕ್ರಿಯೆ ಇದಾಗಿತ್ತು.

'ಇಲಾಖಾ ಸುತ್ತೋಲೆ ಕಳುಹಿಸಿ ಒಂದೆಡೆ ಸೇರಲು ತಿಳಿಸಿದ್ದರೂ ಇಷ್ಟೊಂದು ಜನ


ಸಮಾವೇಶ ಉದ್ಘಾಟಿಸುತ್ತಿರುವ ಬರಗೂರು ರಾಮಚಂದ್ರಪ್ಪ

ಶಿಕ್ಷಕರು ಬರುತ್ತಿರಲಿಲ್ಲ, ಅದರಲ್ಲೂ 100/- ರೂ ನೋಂದಾವಣೆ ಶುಲ್ಕ ಕಟ್ಟಿ ಸ್ವಂತ ಪ್ರಯಾಣಭತ್ಯೆಯನ್ನು ಹಾಕಿ ಇವರನ್ನು ಬರುವಂತೆ ಮಾಡಿದ್ದು 'ಟೀಚರ್' ನ ಕುರಿತ ಆದರ ಅಭಿಮಾನವಲ್ಲದೆ ಮತ್ತೇನಿಲ್ಲ. ಸಮಾವೇಶಕ್ಕೆ ಬಂದಿದ್ದವರ ಮಾತಿದು.

"ಸಂಖ್ಯೆ ನಿಮ್ಮ, ಏಕೆ ನಮ್ಮ ನಿರೀಕ್ಷೆಗೂ ಮೀರಿದ್ದು, ನಾನು ಇಲ್ಲಿಗೆ ಬರುವಾಗ 500 ರ ಕೆಳಗಿನ ಒಂದು ಸಂಖ್ಯೆಯನ್ನು ಮನಸ್ಸಿನಲ್ಲಿಟ್ಟಿದ್ದೆ. ಆದರೆ ಇಲ್ಲಿ 1000 ದಷ್ಟಿದ್ದಾರೆ. ಇವರೆಲ್ಲರನ್ನೂ ಎರಡೂ ದಿನಗಳ ಒಂದು ಅವಧಿಯಲಿ ಆಳವಾದ ಶಿಕ್ಷಣಿಕ ಚರ್ಚೆಯಲ್ಲಿ ತೊಡಗಿಸಲು ಸಾಧ್ಯವಿಲ್ಲದಿದ್ದರೂ ಚರ್ಚಿಸಿ, ಅಧ್ಯಯನಕ್ಕೆ, ತೊಡಗಿಸಿಕೊಳ್ಳುವುದಕ್ಕೆ (Switch on) ಪ್ರೇರಣೆ ನೀಡಬಹುದು....." ಇದು ಮತ್ತೊಬ್ಬರ ಪ್ರೋತ್ಸಾಹದ ಮಾತಿದು.

'13 ಕಡೆ ನಡೆದ ಈ ಸಮಾನಾಂತರ ಚರ್ಚೆಗಳಿಂದ ಹತ್ತತ್ತು ಜನ ಆಯಾ ವಿಷಯಗಳಲ್ಲಿ ಗಂಭೀರವಾಗಿ ತೊಡಗಿಸಿಕೊಂಡರೆ ಉತ್ತಮವಾದ ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿಗಳ ಗುಂಪೊಂದು ರಚನೆಗೊಳ್ಳುವುದರಲ್ಲಿ ಸಂಶಯವಿಲ್ಲ' ಇದು ಪ್ರತಿನಿಧಿಯೊಬ್ಬರ ಸಲಹೆಯಾಗಿತ್ತು. ಇದನ್ನೆಲ್ಲಾ ಹೇಗೆ ನಿಭಾಯಿಸುತ್ತೀರಿ. ಇದಕ್ಕೆಲ್ಲಾ ಸಂಪನ್ಮೂಲ ಹೇಗೆ ಸಂಗ್ರಹಿಸಿದಿರಿ, ಇಷ್ಟೊಂದನ್ನೂ ನಿಭಾಯಿಸುವುದೇ ಕಷ್ಟವಪ್ಪಾ....... ಮತ್ತೊಬ್ಬರು ಅತಿಥಿಯ ಉದ್ಗಾರವಿದು.

ಹೌದು ಅದು ಸಾಧ್ಯವಾಗಿದೆ. ಎಲ್ಲರ ಸಹಕಾರದಿಂದ ಸಾಧ್ಯವಾಗಿದೆ. ಸಮಾಜದ ನಿರ್ದಿಷ್ಟ ವಿಭಾಗವೊಂದನ್ನೆ ತನ್ನ ಓದುಗರನ್ನಾಗಿಟ್ಟುಕೊಂಡು ಯಾವುದೇ ಬಾಹ್ಯ ಬೆಂಬಲವಿಲ್ಲದೆ ಶಿಕ್ಷಕರೇ ಶಿಕ್ಷಕರಿಗಾಗಿ ಪ್ರಾರಂಭಿಸಿದ ಪತ್ರಿಕೆ ಎರಡನೇ ವರ್ಷಕ್ಕೆ ಕಾಲಿಟ್ಟಿದೆ. ಸಾವಿರಾರು ಶಿಕ್ಷಕರು ಸ್ವಯಂ ಪ್ರೇರಣೆಯಿಂದ ಚಂದಾದಾರಾಗಿ ಪತ್ರಿಕೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಸ್ವಯಂ ಸ್ಫೂರ್ತಿಯ ಮನಸ್ಸುಗಳನ್ನು ಒಂದೆಡೆ ಸೇರಿ ಪತ್ರಿಕೆಯ ತಿರುಳಾಗಿರುವ ಎಲ್ಲರಿಗೂ ಉತ್ತಮ ಶಿಕ್ಷಣ, ಕುರಿತು ಚರ್ಚೆ ಪ್ರಾರಂಭಿಸುವ ಪತ್ರಿಕೆಯ ಬಳಗದ ಹೆಜ್ಜೆಯನ್ನು ಸ್ವಾಗತಿಸಿದ್ದಾರೆ. ಇಡುಗಂಟಿಲ್ಲದ ಪತ್ರಿಕೆ ಪ್ರಾರಂಭಿಸಿದ್ದಂತೆಯೇ, ಖಾಲಿ ಕೈಗಳೊಂದಿಗೆ ದೊಡ್ಡದೊಂದು ಹಬ್ಬ ಸಂಘಟಿಸಲು ಕೈ ಹಾಕಿದೆವು. ಕೈ ತುಂಬಿ ತುಳುಕಾಡದಿದ್ದರೂ ಹೊನ್ನಿಡುವಲ್ಲಿ ಹೂವಿಟ್ಟು ಹಬ್ಬವನ್ನು ಯಶಸ್ವಿಯಾಗಿ ಮುಗಿಸಿದ್ದೇವೆ.

ಬಳಗ ತನ್ನ ಇತಿಮಿತಿಯನ್ನು, ಅಳೆದು ತೂಗಿ 500 ಜನರ ನೋಂದಾವಣೆಗೆ ಕರೆ ಕೊಟ್ಟಿದ್ದರೂ ಹಬ್ಬದ ದಿನಕ್ಕೆ 15 ದಿನಗಳ ಹಿಂದೆಯೇ 500 ಮೀರಿತ್ತು. ಜಿಲ್ಲಾ ಕಾರ್ಯಕರ್ತರ ಒತ್ತಾಯಕ್ಕೆ, ಹೊಸಬರ ಆಸಕ್ತಿಗೆ ಮಣಿದು ಐನೂರು ಆರುನೂರಾಗಿ, ಆರುನೂರು ಎಂಟುನೂರಾಗಿ ಏರುತ್ತಲೇಬಂತು. ಎಂಟು ನೂರಕ್ಕೆ ಪೂರ್ಣ ನೋಂದಾವಣಿ ನಿಲ್ಲಿಸಿದರೂ, ಬ್ಯಾಗ್, ವಸತಿ, ಬೇಡವೆಂದು ಹೇಳಿ 100 ಕ್ಕೂ ಹೆಚ್ಚು ಜನ ಸ್ಥಳದಲ್ಲಿಯೇ ನೊಂದಾಯಿಸಿಕೊಂಡರು. ಹೀಗಾಗಿ ಶಿಕ್ಷಕರು ಟೀಚರನ್ನು ತಮ್ಮ ವೇದಿಕೆಯಾಗಿ, ಆಯುಧವಾಗಿ ಬಳಸಿಕೊಳ್ಳಲು ತಯಾರಿದ್ದಾರೆಂದು ತಿಳಿದು ಒಂದೆಡೆ ಸಂತೋಷವಾದರು ಹೊಣೆ ಹೆಚ್ಚುತ್ತಿರುವ ಅರಿವಾಗಿ ನಗಲಾರದಂತಹ ಪರಿಸ್ಥಿತಿ ನಿರ್ಮಾಣ ಮಾಡಿದೆ.


ಕಿಕ್ಕಿರಿದ ಶಿಕ್ಷಕರು

ಜನ ಸೇರಿಸುವುದೂ, ಸೇರುವುದು ದೊಡ್ಡ ವಿಷಯವಾಗಲಿಕ್ಕಿಲ್ಲ. ಆದರೆ ಅವರನ್ನು ನಿಭಾಯಿಸುವುದು ಬಹು ಜವಾಬ್ದಾರಿಯ ವಿಷಯ. ಸ್ವಯಂ ಸ್ಫೂರ್ತಿಯಿಂದ ಬಂದ ಗೆಳೆಯರನ್ನು ನಾವು ಮೊದಲು ಅಂದಾಜು ಮಾಡಿಕೊಂಡಷ್ಟು ಸೂಕ್ತವಾಗಿ ನೋಡಿಕೊಳ್ಳಲು ಸಾಧ್ಯವಾಗಿಲ್ಲ. ಆದರೆ ತುಮಕೂರಿನ ಹಿರಿಯ ಸ್ವಯಂ ಸೇವಕ ಶ್ರೀ.ಚಿದಂಬರಯ್ಯ, ಸ್ವಯಂ ಸೇವಕರೆಲ್ಲರ ನೇತಾರ ಶ್ರೀ.ಎ.ಖಾನ್, ಸಾಕ್ಷರತಾ ಸ್ವಯಂ ಸೇವಕ ಅಶ್ವತ್ಥಯ್ಯ, ಶಿಕ್ಷಕಗಳೆಯ ನಿತ್ಯಾನಂದರ ತುಮಕೂರು ಬಳಗ ತಮ್ಮ ಸಾಧ್ಯತೆಗಳನ್ನೂ ಮೀರಿ ವ್ಯವಸ್ಥೆ ಮಾಡಿದ್ದಾರೆ. ಹಲವಾರು ಕೊರತೆಗಳು ಕಂಡುಬರುತ್ತಿದ್ದರೂ ಅವನ್ನೆಲ್ಲವನ್ನೂ ಮೀರಿದ ವ್ಯವಸ್ಥೆ ಮಾಡಿದ್ದರು. ಹಲವಾರು ಕೊರತೆಗಳು ಕಂಡು ಬರುತ್ತಿದ್ದರೂ ಅವನ್ನೆಲ್ಲವನ್ನೂ ಮೀರಿದ ಏನೋ ಒಂದು ಸಾಮರಸ್ಯತೆ ಅಲ್ಲಿ ಕಂಡು ಬಂದದ್ದು ಹಲವಾರು ಇಂತಹ ಸಮ್ಮೇಳನಗಳನ್ನು ಕಂಡಿದ್ದವರಿಗೆ ಎದ್ದು ಕಾಣುತ್ತಿತ್ತು. ಶಿಕ್ಷಕರು ನಿಜವಾದ ಶಿಕ್ಷಕ ಶಿಸ್ತನ್ನು ಇಲ್ಲಿ ಪಾಲಿಸಿದ್ದು ಉಲ್ಲೇಖನೀಯ.


ನಾಲ್ಕೂ ಹೊತ್ತು ಸಾಲಲಿ ನಿಂತು ಊಟ ಹಾಕಿಸಿಕೊಂಡು ಹೋಗಿ ಯಾರ್‍ಯಾರದೋ ಜೊತೆ ನಿಂತು ಮಾತನಾಡುತ್ತಾ ತಿನ್ನುತ್ತಿದ್ದ ದೃಶ್ಯ, ರಾತ್ರಿ ಮಲಗುವ ಸ್ಥಳದಲ್ಲಿ ಇತರರಿಗೆ ಹಾಸಿಗೆ ಜಮಖಾನ ಬಿಟ್ಟು ಪತ್ರಿಕೆಯನ್ನು ಹಾಸಿಗೆಯಾಗಿ ಬಳಸಿದ ದೃಶ್ಯ, ಬೆಳಗ್ಗೆ ನೀರಿನ ಕೊರತೆಯಾಗಬಹುದೆಂದು ಮುಂದಾಲೋಚನೆ ನಡೆಸಿ ಆಸುಪಾಸಿನ ಹಮಾಮುಗಳಲ್ಲಿ (ಸ್ನಾನದ ಮನೆಗಳಲ್ಲಿ) ಶುಲ್ಕ ತೆತ್ತು ಪ್ರಾಥಕ್ರಿಯೆಗಳನ್ನು ಮುಗಿಸಿ ಬರುತ್ತಿದ್ದ ದೃಶ್ಯ ನಿಜವಾಗಲೂ ಶಿಕಕ ವೃಂಧಕ್ಕೆ ಗೌರವ ತರುವಂತಹದ್ದಾಗಿತ್ತು. ಪರಿಸರಕ್ಕೆ ಸರಿಯಾಗಿ ಪ್ರತಿಕ್ರಿಯಿಸಲು ತಿಳಿವಂತಹ ಜನ ಸಮುದಾಯವೊಂದರ ನೋಟ ಇಲ್ಲಿತ್ತು.

ಎರಡನೇ ದಿನ ನಡೆದಂತಹ ಸಮಾನಾಂತರ ಚರ್ಚೆಗಳು ಶಿಕ್ಷಕರ ಜ್ಞಾನ ದಾಹಕ್ಕೆ, ಆಸಕ್ತಿಗೆ ಉತ್ತಮ ಉದಾಹರಣೆಯಾಗುವಂತಹದ್ದು. 13 ಕೇಂದ್ರಗಳಲ್ಲಿ ನಡೆದ ಪುಟ್ಟ ಪುಟ್ಟ ಸೆಮಿನಾರ್‌ಗಳಲ್ಲಿ 30-90 ರವರೆಗೂ ಪತಿನಿಧಿಗಳು ಭಾಗವಹಿಸಿದ್ದರು. ಹಿಂದಿನ ದಿನವೇ ಹಲವು ಜಿಲ್ಲೆಗಳು ಸಭೆ ಸೇರಿ ಇಂತಿಷ್ಟು ಜನ, ಇಂತಿಂತಹವರು ಎಲ್ಲೆಲ್ಲಿ ಭಾಗವಹಿಸಬೇಕೆಂದು ನಿಶ್ಚಯಿಸಿದ್ದರು. ಆದ್ದರಿಂದಲೇ ಪ್ರತಿ ಗೋಷ್ಠಿಯೂ 3.00 ಗಂಟೆ ಸಮಯದ ದೀರ್ಘ ಚರ್ಚಾ ಘೋಷ್ಠಿಗಳಾಗಿ ಪರಿಣಮಿಸಿತ್ತು. ಅತ್ಯಂತ ಹೆಚ್ಚಿನ ಜನ ಭಾಗವಹಿಸಿದ್ದ ಗಣಿತದ ಗೋಷ್ಠಿ ಎಲ್ಲರ ಗಮನ ಸೆಳೆಯುವಂತಹದ್ದು, ಗೋಷ್ಠಿಯ ನಂತರ ಹಲವು ಜಿಲ್ಲೆಗಳು ಮುಂದೆ ನಮ್ಮಲ್ಲಿ ಇಂತಹ ಪ್ರತ್ಯೇಕ ವಿಷಯಗಳಿಗಾಗಿರುವ ಗೋಷ್ಠಿಗಳನ್ನು ಸಂಘಟಿಸುವುದಾಗಿ ತೀರ್ಮಾನಿಸಿದರು. ತುಮಕೂರು, ಮಂಡ್ಯಗಳು ಗಣಿತ, ಕೊಡಗು ಜೀವ ವೈವಿಧ್ಯ, ಜೈವಿಕ ತಂತ್ರಜ್ಞಾನಗಳನ್ನು ಆಯ್ಕೆ ಮಾಡಿಕೊಂಡಿತು- ಸ್ಥಳೀಯ ಶಿಕ್ಷಣ ವಿದ್ಯಾರ್ಥಿಗಳೂ ಶಿಕ್ಷಕರೂ ಈ ಘೋಷ್ಠಿಗಳನ್ನು ನಿರ್ವಹಿಸಿದ ರೀತಿ ಅಭಿನಂದನೀಯ.

ಇಂತಹದೊಂದು ದೊಡ್ಡ ಸಾಹಸಕ್ಕೆ ಕೈ ಹಾಕುವಾಗಲೇ ನಮಗೆ ನಮ್ಮ ಸಂಪನ್ಮೂಲಗಲ ಇತಿ ಮಿತಿ ತಿಳಿದಿತ್ತಾದರೂ ನಾವು ಮುಂದಡಿಯಿಟ್ಟಿದ್ದೆವು. ಹಲವಾರು ವ್ಯಕ್ತಿಗಳು, ವಿಶೇಷವಾಗಿ ತುಮಕೂರಿನ ವಿದ್ಯಾಸಂಸ್ಥೆಗಳು, ಸಂಘ ಸಂಸ್ಥೆಗಳೂಜನರೂ ತಮ್ಮಿಂದಾಗುವಷ್ಟು ಸಹಾಯ ಸಹಕಾರ ನೀಡಿದರು. ಆದ್ದರಿಂದ ಊಟ, ವಸತಿ, ತೊಂದರೆಯಿಲದೆ ನಡೆಯಿತು. ಜಿಲ್ಲೆಯ ಪತ್ರಿಕಾ ಬಳಗವೂ ಸಾಕಷ್ಟು ಪ್ರಚಾರ ನೀಡಿತು. ಕೆಲವರು ದೈಹಿಕ ಶ್ರಮ ನೀಡಿ ಸಹಕರಿಸಿದರು. ಶಿಕ್ಷಕರ ಸಂಘ, ಕೊಳ ನಿವಾಸಿಗಳ ಸಂಘ, ಬೀಡಿ ಕಾರ್ಮಿಕರ ಸಂಘಗಳು ಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡರು. ರಾಜ್ಯದ ಇತರ ಜಿಲ್ಲೆಗಳಿಂದ, ಜಾಹೀರಾತುಗಳೂ ಕೊಟ್ಟು ಕೆಲವರು ಸಹಕರಿಸಿದರೆ, ಹಾವೇರಿಯ ಗೆಳೆಯರು 2000 ತೊಟ್ಟಿ ತಯಾರಿಸಿ ಕೊಟ್ಟು ವಿಶೇಷ ಗಮನ ಸೆಳೆದರು. ಮಂಡ್ಯದ ಘಟಕ ಅಕ್ಕಿ ಸಂಗ್ರಹ ಮಾಡಿತು.

ಪುಸ್ತಕ ಪ್ರದರ್ಶನ ಮತ್ತು ಮಾರಾಟ ಹೊಸತೊಂದು ಪಾಠವನ್ನು ಹೇಳಿಕೊಟ್ಟಿತು. 75,000 ರೂಗಳ ಪುಸ್ತಕಗಳ, ಆಟಿಕೆಗಳ ಕಲಿಕಾ ವಸ್ತುಗಳನ್ನು ಈ ಒಂದುವರೆ ದಿನದಲ್ಲಿ ನಮ್ಮ ಶಿಕ್ಷಕರು ಕೊಂಡುಕೊಂಡರು. ಇದಕ್ಕೆ ಹೆಚ್ಚು ಸಮಯ ಬೇರೆಯೇ ಕೊಡಬೇಕಾಗಿತ್ತೆಂದು ಹಲವು ಶಿಕ್ಷಕರು ತಮ್ಮ ಸಲಹೆಗಳಲ್ಲಿ ಬರೆದಿರುವರು. ವಿ.ಐ.ಟಿ.ಎಂ, ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿ ಯವರೂ ತಮ್ಮ ಪ್ರದರ್ಶನ ವಾಹನಗಳನ್ನು ಎರಡೂ ದಿನ ಪ್ರದರ್ಶಿಸಿದ್ದರು. ಮಂಡ್ಯ, ಕೋಲಾರ, ತುಮಕೂರುಗಳಿಂದ ಶಿಕ್ಷಕರ ಶಿಕ್ಷಣಿಕ ಸರಳ ಉಪಕರಣಗಳ ಪ್ರದರ್ಶನ ಪ್ರಯೋಜನಕಾರಿಯಾಗಿತ್ತು.

ಮೊದಲ ದಿನದ ರಾತ್ರಿ 'ಐಶ್ವರ್ಯ ಕಲಾನಿಕೇತನ' ತಂಡವು ಕೊಟ್ಟ ನಾಟಕ ಪ್ರದರ್ಶನ ಹಲವು ಶಿಕ್ಷಕರನ್ನು ತಾವು ಹೀಗೇಕೆ ಮಾಡಬಾರದು ಎಂದು ಯೋಚಿಸುವಂತೆ ಮಾಡಿತು. ಪಠ್ಯ ಭಾಗ ನಾಟಕವಾದಾಗ ಅದು ಎಷ್ಟು ಬೇಗ ಮನ ಮುಟ್ಟಿತು. ಮಕ್ಕಳಿಗೆ ಇದು ಇನ್ನೂ ಸುಲಭವಾಗಬಹುದಲ್ಲವೇ?


ಇರಾಕ್‌ಮೇಲಿನ ಯುದ್ಧ ವಿರೋಧಿಸಿ ಶಾಂತಿಗಾಗಿ ಮೊಂಬತ್ತಿ ಬೆಳಗಿಸಿ ಮೆರವಣಿಗೆ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH